# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-೫೭೦ ೦೦೬

## ಅಂತಿಮ ಎಂ.ಎ.

## ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

## ಸ್ವಯಂ ಬೋಧನಾ ಸಾಮಗ್ರಿ




## ಕೋರ್ಸ್ V: ಸಂವಹನಾ ಕೌಶಲ್ಯ

# ಕರಾಮುವಿ

## ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆ

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಅದೇಶ ಸಂಖ್ಯೆ : ED1/UOV/dated 12 February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು 'ದೂರ ಶಿಕ್ಷಣ ಮಂಡಳಿ' (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ ನವದೆಹಲಿಯಲ್ಲಿರುವ 'ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ'ದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

| | | |
|---|---|---|
| | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ<br>ಹಾಗು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ<br>ಮುಕ್ತಗಂಗೋತ್ರಿ, ಮೈಸೂರು 570 006. | ಎಂಎ – ಎಂಸಿಜೆ<br>ಅಂತಿಮ ವರ್ಷ<br>ಪತ್ರಿಕೆ 5 |

## ಕೋರ್ಸ್ 5: ಸಂವಹನಾ ಕೌಶಲ್ಯ


### ಬ್ಲಾಕ್ 1 ವಾಕ್ ಸಂವಹನ

ಘಟಕ 1. ಮೌಖಿಕ ಸಂವಹನದ ಅಂಶಗಳು 01

2. ಪರಿಣಾಮಕಾರಿ ಸಾರ್ವಜನಿಕ ಭಾಷಣ ಕಲೆ 21

3. ಮೌಖಿಕ ಸಂವಹನ ಧ್ವನಿ, ಉಚ್ಚಾರಣೆ ಮತ್ತು ಪದಪ್ರಯೋಗ 41

4. ಸಾಮಾಜಿಕ ನಡವಳಿಕೆ ಮತ್ತು ಅಂತರಕ್ರಿಯೆ 55

5. ಮಾಧ್ಯಮಗಳ ವ್ಯಾಕರಣ 69

### ಬ್ಲಾಕ್ 2 ಲಿಖಿತ ಸಂವಹನ

ಘಟಕ 1. ಮಾಧ್ಯಮ ಭಾಷೆಯ ಬಳಕೆ ಮತ್ತು ಅದರಲ್ಲಿನ ಸಾಮಾನ್ಯ ಲೋಪಗಳು 84

2. ತಾಂತ್ರಿಕ ಬರವಣಿಗೆಯ ಮೂಲ ತತ್ವಗಳು 101

3. ಪತ್ರಿಕಾ ಸಾಮಾಗ್ರಿ ಸಿದ್ಧಪಡಿಸುವಿಕೆ 117

4. ವೈಶೇಷಿಕ ಪತ್ರಿಕೆಗಳು 137

5. ಭಾಷಾಂತರ 153

### ಬ್ಲಾಕ್ 3 ರೇಖಿತಕಲೆ ಸಂವಹನ

ಘಟಕ 1. ಗಣಕಯಂತ್ರ ರೇಖಾಕಲೆ 174

2. ವ್ಯಂಗ್ಯಚಿತ್ರ ಮತ್ತು ಚಿತ್ರಿಕೆಗಳು 188

3. ದೃಶ್ಯ ಸಂಚಲನೆ (Animation) 207

4. ಮಾಧ್ಯಮದಲ್ಲಿ ಕಲಾತ್ಮಕ ಮಾರ್ಗಕ್ರಮಗಳು 227

5. ವರ್ಣ ಸಂಯೋಜನೆ 243

### ಬ್ಲಾಕ್ 4 ಅಶಾಬ್ದಿಕ ಸಂವಹನ

ಘಟಕ 1. ಸಂಕೇತಶಾಸ್ತ್ರದ ಮೂಲತತ್ವಗಳು 259

2. ದೈಹಿಕ ಭಾಷೆಯ ಸ್ವರೂಪ 267

3. ಅಕ್ಷಿ ಸಂಪರ್ಕದ ಮಹತ್ವ 277

4. ಭಾವಾಭಿನಯ ಮತ್ತು ಭಾವಾವೇಶಗಳು 285

5. ಸಕಾರಾತ್ಮಕ ಸಾರೂಪ್ಯತೆ 297

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ. ಜಿ. ಕೃಷ್ಣನ್** — ಅಧ್ಯಕ್ಷರು
ಮಾನ್ಯ ಕುಲಪತಿಗಳು, ಕರಾಮುವಿ, ಮೈಸೂರು

**ಪ್ರೊ. ಎಸ್. ಎನ್. ವಿಕ್ರಂ ರಾಜ್ ಅರಸ್** — ಸಮಾವೇಶಕರು
ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು

**ಪ್ರೊ. ಜಿ. ವಿ. ವಿಳಾ ನಿಲಂ** — ವಿಷಯ ಪರಿಣತರು
ವಿಶ್ರಾಂತ ಕುಲಪತಿಗಳು, ಕೇರಳ ವಿಶ್ವವಿದ್ಯಾನಿಲಯ, ತಿರುವನಂತಪುರಂ, ಕೇರಳ

**ಪ್ರೊ. ಕೆ. ವಿ. ನಾಗರಾಜ್** — ವಿಷಯ ಪರಿಣತರು
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಅಸ್ಸಾಂ ಕೇಂದ್ರಿಯ ವಿಶ್ವವಿದ್ಯಾನಿಲಯ, ಸಿಲ್‌ಚಾರ್, ಅಸ್ಸಾಂ.

**ಡಾ. ತೇಜಸ್ವಿ ನವಿಲೂರ್** — ವಿಷಯ ಪರಿಣತರು
ಮುಖ್ಯಸ್ಥರು,
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು
ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು.

**ಶ್ರೀ. ಶೈಲೇಶ್ ರಾಜ್ ಅರಸ್** — ವಿಷಯ ಸಂಯೋಜಕರು
ಸಹಾಯಕ ಪ್ರಾಧ್ಯಾಪಕರು,
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು
ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು.


## ಬರಹಗಾರರು

| | ಬರಹಗಾರರು | ಘಟಕಗಳು |
|---|---|---|
| ಬ್ಲಾಕ್ 1 | ಡಾ. ನೀತಾ ಇನಾಂದರ್ ಅನುವಾದಕರು: ಪ್ರೊ. ಜಿ.ಪಿ. ಶಿವರಾಮ್ | 1, 2, 3, 4 ಮತ್ತು 5 |
| ಬ್ಲಾಕ್ 2 | ಪ್ರೊ. ಕೆ. ವಿ. ನಾಗರಾಜ್ | 1, 2, 3 ಮತ್ತು 4 |
| | ಡಾ. ಎನ್. ಸುಬ್ರಮಣ್ಯ | 5 |
| ಬ್ಲಾಕ್ 3 | ಶ್ರೀ ಶೈಲೇಶ್ ರಾಜ್ ಅರಸ್, ಅನುವಾದಕರು: ಶ್ರೀ ಕೃಪಾಲ್ ರಾಜ್ ಅರಸ್ | 1, 3 ಮತ್ತು 4, |
| | ಶ್ರೀ ಸಂಪತ್ ಕುಮಾರ್ | 2 ಮತ್ತು 5 |
| ಬ್ಲಾಕ್ 4 | ಶ್ರೀ ಶೈಲೇಶ್ ರಾಜ್ ಅರಸ್ ಅನುವಾದಕರು: ಡಾ ಸತೀಶ್ ಕುಮಾರ್ | 1, 2, 3, 4 ಮತ್ತು 5 |

## ಪ್ರಕಾಶಕರು


**ಪ್ರೊ. ಪಿ. ಎಸ್. ನಾಯಕ್**
ಕುಲಸಚಿವರು, ಕರಾಮುವಿ, ಮೈಸೂರು 570 006.



ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿದೆ. ಈ ಸ್ವಯಂ ಬೋಧನಾ ಸಾಮಗ್ರಿಯ ಯಾವುದೇ ಭಾಗವನ್ನು ಯಾವುದೇ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಲಿಖಿತ ಅನುಮತಿ ಇಲ್ಲದೆ ಪುನರ್ ಮುದ್ರಿಸುವುದನ್ನು ಹಾಗು ವಿತರಿಸುವುದನ್ನು ಪ್ರತಿಬಂಧಿಸಿದೆ.



**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಡೀನ್ (ಶೈಕ್ಷಣಿಕ), ಮುಕ್ತಗಂಗೋತ್ರಿ, ಮೈಸೂರು 570 006.**

ಮುಖಪುಟ ಪರಿಕಲ್ಪನೆ ಹಾಗು ವಿನ್ಯಾಸ: ಡಾ. ತೇಜಸ್ವಿ ನವಿಲೂರ್.

# ಪರಿಚಯ

ಪ್ರಿಯ ವಿದ್ಯಾರ್ಥಿ,

ಅಂತಿಮ ವರ್ಷದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನಕ್ಕೆ ಸ್ವಾಗತ. ಪ್ರಥಮ ವರ್ಷದ ಅಧ್ಯಯನದಲ್ಲಿ ನೀವು ಮುದ್ರಣ ಮಾಧ್ಯಮ, ಭಾರತದಲ್ಲಿ ಮಾಧ್ಯಮಗಳು, ಸಂವಹನ ಸಿದ್ಧಾಂತ ಹಾಗು ಸಂಶೋಧನೆ, ಮಾಧ್ಯಮ ಧೋರಣೆಗಳು ಹಾಗು ತಂತ್ರಜ್ಞಾನ ಮತ್ತು ಅನ್ವಯಿಕ ಸಂವಹನವನ್ನು ಅಧ್ಯಯನ ಮಾಡಿದ್ದೀರಿ. ಇವುಗಳು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದ ಮೂಲಾಧಾರಗಳು. ಅಂತಿಮ ವರ್ಷದ ಅಧ್ಯಯನವು ಕ್ಷೇತ್ರ ಪರಿಣಿತಿಗೆ ಒತ್ತು ನೀಡುತ್ತದೆ. ಆಧುನಿಕ ಜಗತ್ತಿನ ಸಮೂಹ ಸಂವಹನವು ವಿಶೇಷ ಪ್ರೇಕ್ಷಕರಿಗೆ ಹೆಚ್ಚಿನ ಗಮನ ಹರಿಸಿ ಅವರಿಗೆ ಬೇಕಾಗಿರುವ ಸುದ್ದಿ / ಕಾರ್ಯಕ್ರಮಗಳನ್ನು ಒದಗಿಸುತ್ತಿದ್ದು, ಇದರಿಂದ ವಿವಿಧ ಕ್ಷೇತ್ರದ ಕ್ಷೇತ್ರ ಪರಿಣಿತಿ ಹೆಚ್ಚಿನ ಮಹತ್ವವನ್ನು ಪಡೆಯುತ್ತಿದೆ. ಅಂತಿಮ ವರ್ಷದ ಕೋರ್ಸ್‌ಗಳ ಪರಿಚಯ ಇಂತಿದೆ.

## ಕೋರ್ಸ್ 5: ಸಂವಹನಾ ಕೌಶಲ್ಯ

ಮನುಷ್ಯನಿಗೆ ಆಹಾರ, ಗಾಳಿ, ನೀರು, ನೆರಳಿನಷ್ಟೇ ಅವಶ್ಯಕವಾಗಿರುವುದು ಸಂವಹನ. ಸಂವಹನವಿಲ್ಲದೆ ಮಾನವ ನೆಮ್ಮದಿಯ ಜೀವನ ನಡೆಸಲಾರ. ಸಂಭಾಷಣೆ, ಮಾಹಿತಿ, ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಸಾರ್ವಜನಿಕ ಸಂಪರ್ಕ, ಪತ್ರಿಕೋದ್ಯಮ, ಮಾಧ್ಯಮಗಳು, ಸಮೂಹ ಸಂವಹನ ಮತ್ತು ತಂತ್ರಜ್ಞಾನ, ಹೀಗೆ 21ನೆಯ ಶತಮಾನದಲ್ಲಿ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರೂ ಸಂವಹನ ಕೌಶಲ್ಯದ ಅಗತ್ಯತೆ ಗೋಚರಿಸುತ್ತದೆ. ಸಂವಹನದ ಕೌಶಲ್ಯವಿಲ್ಲದೇ ಏನನ್ನೂ ಸಾಧಿಸಲಾಗದು ಎಂಬುದನ್ನು ವಿದ್ಯಾರ್ಥಿಗಳು ಮನಗಾಣಬೇಕು.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಯಾವುದೇ ಪ್ರಕಾರ ಅಥವಾ ಕ್ಷೇತ್ರವನ್ನು ಆರಿಸಿಕೊಂಡರೂ ಉತ್ತಮ ಸಂವಹನ ಕೌಶಲ್ಯಗಳನ್ನು ಕರಗತಗೊಳಿಸಿಕೊಳ್ಳುವುದು ಒಳಿತು. ಜಗತ್‌ಗ್ರಾಮದ ಇಂದಿನ ಪರಿಕಲ್ಪನೆಯಲ್ಲಿ ಅವಕಾಶಗಳಿಗೆ ಯಾವುದೇ ಎಲ್ಲೆಗಳಿಲ್ಲ. ಹಾಗಯೇ, ಉತ್ತಮ ಭಾಷಾ ಪಾಂಡಿತ್ಯದೊಂದಿಗೆ ಇತರ ಸಂವಹನ ಕೌಶಲ್ಯಗಳನ್ನು ಮನದಟ್ಟು ಮಾಡಿಕೊಂಡರೆ ನಿಮ್ಮ ಪ್ರತಿಭೆಗೆ ಭೂಮಿಕೆಯನ್ನು ನೀವೇ ರೂಪಿಸಿಕೊಳ್ಳಬಹುದು.

ಸಂವಹನಾ ಕೌಶಲ್ಯ ಕೋರ್ಸ್‌ನಲ್ಲಿ ವಾಕ್ ಸಂವಹನ, ಲಿಖಿತ ಸಂವಹನ, ರೇಖಿತಕಲೆ ಸಂವಹನ ಮತ್ತು ಅಶಾಬ್ದಿಕ ಸಂವಹನವನ್ನು ಅಧ್ಯಯನ ಮಾಡುವಿರಿ.

ಶುಭ ಹಾರೈಕೆಗಳೊಂದಿಗೆ,

**ಮುಖ್ಯಸ್ಥರು**
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ
ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮೈಸೂರು.

# ಘಟಕ 1 :ಮೌಖಿಕ ಸಂವಹನದ ಅಂಶಗಳು

## ರಚನೆ


1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಸಂವಹನದ ವ್ಯಾಖ್ಯಾನಗಳು

1.3 ಸಂವಹನ ಪ್ರಕ್ರಿಯೆ

1.4 ಸಂವನದ ಅಂಶಗಳು

1.5 ಸಂವಹನ ಮಜಲುಗಳು

1.6 ಮಾನವ ಸಂವಹನದ ಪ್ರಕಾರಗಳು

  1.6.1 ಅಮೌಖಿಕ ಸಂವಹನ

  1.6.2 ಮೌಖಿಕ ಸಂವಹನ

1.7 ಭಾಷೆಯ ವೈಜ್ಞಾನಿಕ ದ್ರಷ್ಟಿಕೋನ

1.8 ಪದಗಳ ಬಳಕೆ

1.9 ಮೌಖಿಕ ಸಂವಹನದಲ್ಲಿ ಪದಗಳ ಬಳಕೆ

1.10 ಮೌಖಿಕ ಸಂವಹನದ ಪ್ರಕಾರಗಳು

1.11 ಉತ್ತಮ ಮೌಖಿಕ ಸಂವಹನವ

1.12 ಮೌಖಿಕ ಸಂವಹನವನ್ನು ಗುಣವರ್ಧನೆ

1.13 ಸಾರಾಂಶ

1.14 ನಿಮ್ಮ ಪ್ರಗತಿ ಪರಿಶೀಲನೆ

1.15 ಹೆಚ್ಚಿನ ಓದಿಗಾಗಿ

## 1.0 ಉದ್ದೇಶಗಳು

ಮೌಖಿಕ ಸಂವಹನ ಅಧ್ಯಯನವು ಮಾನವನ ಅನೇಕ ಸಂಜ್ಞಾತ್ಮಕ ನಡವಳಿಗಳ ಅಧ್ಯಯನವಾಗಿದೆ. ಭಾಷಣವು ಅತಿ ಪ್ರಾಚೀನ ಶಿಸ್ತುಗಳಲ್ಲಿ ಒಂದಾಗಿದ್ದು ಅದರ ಮೂಲವನ್ನು ಅರಿಸ್ಟಾಟಲನ ಕಾಲದಿಂದಲೂ ಗುರುತಿಸಬಹುದು.ಇದು ವ್ಯಕ್ತಿಗತ ಸಂಬಂಧ ಕುರಿತಂತೆ ಅತ್ಯಂತ ಆದುನಿಕ ಪರಿಕಲ್ಪನೆ ಹೊಂದಿದೆ. ಸುಮಾರು ಕಿ.ಪೂ.450ರಲ್ಲಿ ಪುರಾತನ ಗ್ರೀಸನಲ್ಲಿ ಇಧನ್ನು ಶಾಲೆಗಳಲ್ಲಿ ಹೇಳಿಕೊಡುತ್ತಿದ್ದ ಕಾರಣ ಮೌಖಿಕ ಸಂವಹನವು ಇಂದಿಗೂ ಪ್ರಾಯೋಗಿಕ ಮೌಲ್ಯವನ್ನು ಉಳಿಸಿಕೊಂಡಿದೆ.

## 1.1 ಪ್ರಸ್ತಾವನೆ

ಪ್ರಸ್ತುತ ಘಟಕ ನಿಮಗೆ ಕೆಳಕಂಡ ಅಂಶಗಳನ್ನು ಮನನ ಮಾಡುವುದು

- ಸಂವಹನದ ಪ್ರಕ್ರಿಯೆ ಮತ್ತು ಅಂಶಗಳು
- ಸಂವಹನದ ಮಜಲುಗಳು ಮತ್ತು ಪ್ರಕಾರಗಳು
- ಮೌಖಿಕ ಮತ್ತು ಅಮೌಖಿಕ ಸಂವಹನದ ಮಹತ್ವ

ಸಂವಹನವು ಸಂಬಂಧಗಳನ್ನು ಕಲ್ಪಿಸುವುದಿಲ್ಲ ಸಂಸ್ಕೃತಿಗಳನ್ನು ಹೊರಹೊಮ್ಮಿಸುವುದರಲ್ಲಿ ಹಾಗೂ ಜನರೊಂದಿಗೆ ಪರಸ್ಪರ ಬೆರೆಯಲು ಸಹಕರಿಸುತ್ತದೆ.ಒಟ್ಟಿನಲ್ಲಿ ಸಂವಹನವು ಮಾನವರನ್ನಾಗಿ ಗುರುತಿಸಿಕೊಳ್ಳುವ ಅಂಶವಾಗಿದೆ.

ಮೌಖಿಕ ಸಂವಹನ ಅಧ್ಯಯನವು ಪ್ರತಿಯೊಬ್ಬರ ಸಂವಹನದ ಸಾಮರ್ಥ್ಯದಿಂದ ಯಶಸ್ವೀ ಮಾನವ ಭಾಂಧವ್ಯ ರೂಪಿಸಲು ನಿರ್ಣಾಯಕ ಆಂಶವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಘಟಕವನ್ನು ಸಂವಹನ ಪ್ರಕ್ರಿಯೆ, ವ್ಯಾಖ್ಯಾನಗಳು, ಅಂಶಗಳು, ಮಟ್ಟಗಳು ಹಾಗೂ ವಿವಿಧ ಮಾನವ ಸಂವಹನದ ಪ್ರಕಾರಗಳನ್ನು ವಿವರಿಸಲು ರೂಪಿಸಲಾಗಿದೆ.

## 1.2 ಸಂವಹನದ ವ್ಯಾಖ್ಯಾನಗಳು:

ನ್ಯೂಮನ್ ಮತ್ತು ಸುಮ್ಮರ್– "ಸಂವಹನವು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ ವಾಸ್ತವಾಂಶಗಳು ವಿಚಾರಗಳು,ಅಭಿಪ್ರಾಯಗಳು ಅಥವಾ ಭಾವನೆಗಳ ವಿನಿಮಯವಾಗಿದೆ.ಸಂವಹನವು ಪದಗಳ,ಅಕ್ಷರಗಳ,ಚಿನ್ಹೆಗಳ ಅಥವಾ ಸಂದೇಶಗಳ ಸಮ್ಮಿಲನ ಮತ್ತು ಒಬ್ಬ ಸಾಂಸ್ಥಿಕ ಸದಸ್ಯನು ಮತ್ತೊಬ್ಬನೊಂದಿಗೆ ಅಂತರಂಗವನ್ನು ಅರ್ಥ ಮತ್ತು ಹೊಂದಾಣಿಕೆಯನ್ನು ಸೂಚಿಸುವ ಮಾರ್ಗವಾಗಿದೆ."

ಬ್ರೌನ್– "ಸಂವಹನವು ವಾಸ್ತವಾಂಶಗಳು, ವಿಚಾರಗಳು, ಭಾವನೆಗಳು ಅಥವಾ ಕ್ರಿಯಸುಳಿಯ ಪ್ರಸಾರ ಮತ್ತು ಅದಲು ಬದಲಿಸುವುದಾಗಿದೆ."

ಆಲೇನ್ ಲೂಯಿಸಸ್– "ಸಂವಹನವು ವ್ಯಕ್ತಿಯೊಬ್ಬನು ಮತ್ತೊಬ್ಬನ ಮನಸ್ಸಿನಲ್ಲಿ ಹೊಂದಾಣಿಕೆಯನ್ನು ಮೂಡಿಸಲು ಒಬ್ಬರೇ ಮಾಡುವ ಎಲ್ಲಾ ಅಂಶಗಳಾಗಿದೆ.ಇದು ಕ್ರಮಬದ್ಧವಾದ ಹಾಗೂ ನಿರಂತರವಾದ ಮಾತು ಮತ್ತು ಮನವರಿಸಿಕೆಗಳನ್ನು ಒಳಗೊಂಡಿದೆ."

ಚಾರ್ಲ್ಸ್ಇ ರೆಡ್‌ಪೀಲ್ಡ್– "ಸಂವಹನವೆಂಬುದು ವಾಸ್ತವಾಂಶಗಳು ಮತ್ತು ಅಭಿಪ್ರಾಯಗಳ ಮಾನವೀಯ ಅಂತರ ಬದಲಾವಣೆಯ ವಿಶಾಲ ಕ್ಷೇತ್ರವೇ ಹೊರತು ಟೆಲಿಫೋನ್, ಟೆಲಿಗ್ರಾಫ್,ಬಾನುಲಿಯಂತಹ ತಂತ್ರಜ್ಞಾನಗಳಲ್ಲ."

ಥಿಯೋಹೈಮನ್ –"ಸಂವಹನವೆಂಬುದು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬರಿಗೆ ಮಾಹಿತಿಯನ್ನು ಹಂಚಿಕೊಳ್ಳುವುದು ಮತ್ತು ಪರಸ್ಪರ ಅರಿತುಕೊಳ್ಳುವ ಪ್ರಕ್ರಿಯೆ. ಇದು ತಮ್ಮ ವಿಚಾರಗಳನ್ನು ತಿಳಿಹೇಳುತ್ತಾ ಇತರರು ತನ್ನನ್ನು ಸರಿಯಾಗಿ ಅರ್ಥೈಸಿಕೊಳ್ಳುವ ಪ್ರಕ್ರಿಯೆಯಾಗಿದೆ."

ಎಂ.ಬಿ.ಮಿಯರ್ ಮತ್ತು ಜಿ.ಇ.ಮಿಯರ್–"ಸಂಜ್ಞೆಯ ಮೂಲಕ ವಿಶೇಷ ರೀತಿಯಲ್ಲಿ ಪ್ರಕಟಿಸುವ ಬಗೆಯನ್ನು ಸಂವಹನ ಸೂಚಿಸುತ್ತದೆ.ಜನರೊಂದಿಗೆ ಪರಸ್ಪರ ಅಥವಾ ಅವರೊಂದಿಗೆ ಸಂವಹಿಸಬೇಕಾದರೆ ಹಲವಾರು ಅಗತ್ಯಗಳನ್ನು ಪೂರೈಸಬೇಕಾಗುತ್ತದೆ:

1.ಸಂಜ್ಞಾತ್ಮಕ ವ್ಯವಸ್ಥೆಯನ್ನು ಸಂಬಂಧಪಟ್ಟ ಜನರು ಹಂಚಿಕೊಳ್ಳಬೇಕು.

2.ಸಂಜ್ಞೆಗಳು ಮತ್ತು ಅದರ ಸೂಚಕಗಳ ನಡುವಿನ ಹೊಂದಾಣಿಕೆಗಳನ್ನು ಹಂಚಿಕೊಳ್ಳಬೇಕು.

ಚೆಸ್ಟರ್ ಬರ್ನರ್–"ಯಾವುದೇ ವಿಸ್ತೃತ ಸಾಂಸ್ಥಿಕ ಸಿದ್ಧಾಂತದಲ್ಲಿ ಸಂವಹನವು ಅಂಗರಚನೆ, ಮತ್ತು ವಿಸ್ತೃತತೆ ನಡುವೆ ಪ್ರಮುಖ ಸ್ಥಾನದಲ್ಲಿದ್ದು, ಸಂಸ್ಥೆಯ ವ್ಯಾಪ್ತಿಯು ಸಂಪೂರ್ಣವಾಗಿ ಸಂವಹನ ತಂತ್ರಗಳಿಂದ ನಿರ್ಧರಿಸಲ್ಪಡುತ್ತದೆ."

ಎಡ್ವಿನ್ ಬಿ ಫ್ಲಿಪೊ ಮತ್ತು ಗ್ಯಾರಿ ಎಂ ಮನ್ನಿಂಜೆರ್ಸ್–"ಸಂವಹನವು ಬೇರೊಬ್ಬರಿಗೆ ಸಾಮಾನ್ಯ ವಿಚಾರ ಅಥವಾ ಮನವರಿಕೆಯನ್ನು ಬಿತ್ತರಿಸುವ ಕಲೆಯಾಗಿದೆ.ಅದು ಯಾವುದೇ ರೀತಿಯ ಸ್ವಭಾವದಿಂದ ಅರ್ಥವಿನಿಯೋಗದ ಮೇಲೆ ಪ್ರಭಾವ ಬೀರುತ್ತದೆ."

ವಾಲೆಸ್ ಸಿ ಫೋದರಿಂಗ್ ಹ್ಯಾಂ–"ಸಂವಹಕನ ಪ್ರಕ್ರಿಯೆಯು ಸಂಜ್ಞೆಗಳ ಆಯ್ಕೆ, ಉತ್ಪಾದನೆ ಮತ್ತು ಪ್ರಸಾರವನ್ನು ಸಂವಾಹಕನ ಮನಸ್ಸಿನಲ್ಲಿರುವ ಅರ್ಥವನ್ನೇ ಕೇಳುಗನೂ ಪಡೆಯಲು ಸಹಕಾರಿಯಾಗುತ್ತದೆ."

## 1.3 ಸಂವಹನ ಪ್ರಕ್ರಿಯೆ

ಸಂವಹನವು ಪ್ರಸಾರಗಳು, ವಾಸ್ತವಾಂಶಗಳು, ಅಭಿಪ್ರಾಯಗಳು ಮತ್ತು ಕೇಳುಗನು ಇನ್ನೊಬ್ಬರೊಂದಿಗೆ ಸಂದೇಶದ ಅರ್ಥವನ್ನು ಮತ್ತು ಮನವರಿಕೆಯನ್ನು ವಿನಿಯೊಗಿಸುವ ರೀತಿಯನ್ನು ಒಳಗೊಂಡ ಪ್ರಕ್ರಿಯೆಯಾಗಿದೆ. ಇದು ವಾಸ್ತವಗಳ, ವಿಚಾರಗಳ ಭಾವನೆ ಇತ್ಯಾದಿಗಳ ಪ್ರಸರಣೆ ಮತ್ತು ಪರಸ್ಪರ ಬದಲಾವಣೆಯ ಸರಳಿಯಾಗಿದೆ. ಪ್ರಕ್ರಿಯ ಕ್ರಿಯೆಯು ಕ್ರಿಯೆಯ ಹಂತ, ಸಾಂಸ್ಥಿಕ ಕ್ರಿಯೆಯಾಗಿ ಸಂವಹನವು ಎಲ್ಲದರ ಮೇಲೆ ಪರಿಣಾಮ ಬೀರುತ್ತದೆ. ಅದು ಒಬ್ಬನಿಂದ ಇನ್ನೂಬ್ಬರಿಗೆ, ಒಂದು ವಿಭಾಗದಿಂದ ಮತ್ತೋ ಂದಕ್ಕೆ ಹೊರಗಿನಿಂದ ಸಂಸ್ಥೆಗೆ, ಅದು ವ್ಯಕ್ತಿಗತ ಸಂಸ್ಥೆಯಾಗಿರಲ್ಲಿ, ಕಂಪನಿ, ಸಹಕಾರಿ ಅಥವಾ ಕಾರ್ಪೊರೇಟ್ ಸಂಸ್ಥೆಯಾಗಿರಲಿ ಅಂತಹ ಮಾಹಿತಿಯನ್ನು ವರ್ಗಾಯಿಸಲು ಸಹಾಯವಾಗುತ್ತದೆ. ಕೇಳುಗರಿಗೆ ಅರ್ಥವಾಗುವ ಹಾಗೆ ಮಾಹಿತಿಯು ವರ್ಗಾವಣೆಯಾಗುವುದೇ ಏಕೈಕ ಗುರಿಯಾಗಿದೆ.

ವಾಹಕ ಅಥವಾ ಸಂವಹನಕಾರ ಅಥವಾ ಸಂದೇಶವನ್ನು ಕಳುಹಿಸುವವನು ಯಾವಾಗ ಮತ್ತು ಏನನ್ನು ಸಂವಹನಿಸಬೇಕೆಂಬುದನ್ನು ಆಯ್ಕೆ ಮಾಡಬೇಕು ಮತ್ತು ವರ್ಗಾವಣೆ ಮಾಧ್ಯಮವನ್ನು ನಿರ್ಣಯಿಸಬೇಕು. ಕೇಳುಗರು ಸಂದೇಶ ಪಡೆದು ಅರ್ಥೈಸಿಕೊಂಡು, ಸರಿಯಾಗಿ ಮನಗೊಂಡು ಅದಕ್ಕೆ ಪ್ರತಿಕ್ರಿಯಿಸುತ್ತಾರೆ. ಸಂಪೂರ್ಣ ಸಂವಹನ ವರ್ತುಲದ ಪ್ರಕ್ರಿಯೆಯನ್ನು ಸೂಚಿಸುತ್ತದೆ.

## 1.4 ಸಂವಹನದ ಅಂಶಗಳು

ಡೇವಿಡ್. ಕೆ.ಬರ್ಲೋ ಪ್ರಕಾರ ಸಂವಹನದ ಸಮಗ್ರ ಸರಣಿಯು ಕೆಳಕಂಡ ಅಂಶಗಳನ್ನು ಒಳಗೊಂಡಿದೆ:

**ಸಂದೇಶ:** ಮೌಖಿಕ ಅಥವಾ ಲಿಖಿತ ಮಾಹಿತಿ ತುಣುಕುಗಳು ಒಬ್ಬ ವ್ಯಕ್ತಿಯಿಂದ ಇನೊಬ್ಬರಿಗೆ ವರ್ಗಾವಣೆಯಾಗಬೇಕಾಗುತ್ತದೆ. ಅದು ಸಂವಹನ ವಸ್ತು ವಿಷಯವಾಗಿರುತ್ತದೆ. ಯಾವೂದೇ ನಿಜಾಂಶ, ವಿಚಾರ, ಅಭಿಪ್ರಾಯ ಅಂಕಿಅಂಶ, ವರ್ತನೆ ಅಥವಾ ರೂಪು ರೇಷೆಗಳ ಸರಳ ಮಾಹಿತಿಯನ್ನು ಅದು ಒಳಗೊಂಡಿರುತ್ತದೆ. ಈ ಎಲ್ಲಾ ವಿಚಾರಗಳನ್ನು ಸಂವಹಕನ ಮನಸ್ಸಿನಲ್ಲಿ ಕಾಣಬಹುದು.

**ಸಂಕೇತ ರೂಪ:** ವಸ್ತು ವಿಷಯವನ್ನು ಸಂಜ್ಞೆಗಳ ಮೂಲಕ ವರ್ಗಾಯಿಸುವ ಪ್ರಕ್ರಿಯೆಗೆ ಪ್ರಸಾರಣೆ ಎನ್ನುತ್ತೇವೆ. ಸಂದೇಶದ ವಿನಿಮಯ ಮಾಡಲು ಸೂಕ್ತ ಸಂಜ್ಞೆಗಳ ಬಳಕೆಯ ಅಗತ್ಯವಿದೆ. ಸಂವಹನಕಾರನು ತನ್ನ ವಿಚಾರಗಳು, ವಾಸ್ತವಂಶಗಳು, ಅಭಿಪ್ರಾಯಗಳು ಸಂಜ್ಞೆ,ಚಿಹ್ನೆ, ಪದಗಳು,ಕ್ರಿಯೆಗಳು ಚಿತ್ರಗಳು, ಶ್ರಾವ್ಯ ದೃಶ್ಯ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ಯೋಜಿಸಿ ಮತ್ತು ಸೂಕ್ತ ಸಂಘಟನೆ ಮಾಡಬೇಕಾಗುತ್ತದೆ.

### ಸಂವಹನ ವಾಹಕ (channel)

ಅದು ಮಾಧ್ಯಮ ಅಥವಾ ಮಾಧ್ಯಮಗಳ ಮೂಲಕ ಸಂದೇಶಗಳು ರವಾನೆಯಾಗುತ್ತದೆ. ಸರಿಯಾಗಿ ಆಯ್ಕೆ ಮಾಡಿದ ಪದಗಳು, ಸಂಜ್ಞೆಗಳು ಅಥವಾ ಚಿಹ್ನೆಗಳನ್ನು ಪಡೆಯುವವರು ಅಥವಾ ಕೇಳುವವರಿಗೆ ಕೆಲವು ವಾಹಕ ಅಥವಾ ಮಾಧ್ಯಮದ ಮೂಲಕ ಹಸ್ತಾಂತರವಾಗುತ್ತದೆ. ಸಂವಹಕಾರನು ತಾನು ಏನನ್ನು ಹೇಳಬೇಕೆನ್ನುತ್ತಾನೋ ಅಂತಹ ಸಂದೇಶವನ್ನು ಹೇಗೆ ಪರಿಣಾಮಕಾರಿ ಯಾಗುವಂತೆ ನಿರ್ಧರಿಸಬೇಕು. ಮಾಧ್ಯಮವು ಮೌಖಿಕ ಅಥವಾ ಲಿಖಿತವಾಗಿರಬಹುದು. ಮೌಖಿಕ ಮಾಧ್ಯಮವು ಮುಖಾಮುಖಿ ಸಂಭಾಷಣೆ, ಟೆಲಿಫೋನ್, ಮುದ್ರಿಕೆ, ಬಾನುಲಿ ಮುಂತಾದವನ್ನು ಒಳಗೊಂಡಿದೆ.ದೃಶ್ಯ ಸಲಕರಣೆಗಳಲ್ಲಿ, ಸ್ಲೈಡುಗಳು, ರಾತ್ರಿ ಕಾಣುವ ಬೆಳಕಿನ ಪ್ರದರ್ಶನಗಳು, ಪೋಸ್ಟರ್ ಮುಂತಾದವುಗಳು ಸೇರಿವೆ ಶ್ರಾವ್ಯ- ದೃಶ್ಯ ಮಾಧ್ಯಮಗಳಲ್ಲಿ ಟೆಲಿವಿಷನ್ ಮತ್ತು ಸಾಕ್ಷ್ಯಚಿತ್ರಗಳು ಸೇರಿವೆ.

### ಸ್ವೀಕೃತಿದಾರ

ಸಂವಹನ ಸಂದೇಶವನ್ನು ಪಡೆಯುವ ವ್ಯಕ್ತಿಯೇ ಸ್ವೀಕೃತಿದಾರ. ಪರಿಣಾಮಕಾರಿ ಸಂವಹನವು ಸಂದೇಶವನ್ನು ಸ್ವೀಕೃತಿ ಮಾಡುವನಿಲ್ಲದಿದ್ದರೆ ಅಪೂರ್ಣವಾಗಿರುತ್ತದೆ. ಸ್ವೀಕೃತಿದಾರನು ಸಂದೇಶವನ್ನು ಪಡೆದುಕೊಂಡು ನಂತರ ಅದನ್ನು ವ್ಯಾಖ್ಯಾನಿಸಿ ಮನನ ಮಾಡಿ ಅರ್ಥೈಸಿಕೊಂಡು ಹಾಗೂ ಅದಕ್ಕೆ ಪೂರಕವಾಗಿ ಪ್ರತಿಕ್ರಿಯಿಸಬೇಕಾಗುತ್ತದೆ.

ಗ್ರಹಿಕೆ: ತಮಗೆ ಕಳುಹಿಸಿದ ಸಂದೇಶವನ್ನು ಸಾಮಾನ್ಯ ಭಾಷೆಯಲ್ಲಿ ಅರ್ಥವಾಗುವ ಹಾಗೆ ವಿನಿಮಯ ಮಾಡುವ ಪ್ರಕ್ರಿಯೆಗೆ ಡಿಕೋಡಿಂಗ್ ಎನ್ನುತ್ತಾರೆ. ಸ್ವೀಕೃತಿದಾರನು ಸಂಜ್ಞೆ, ಪದಗಳು ಅಥವಾ ಚಿಹ್ನೆಗಳ ಮೂಲಕ ಕಳುಹಿಸಿದ ಸಂದೇಶದ ಅರ್ಥವನ್ನು ಸೂಕ್ತವಾಗಿ ಗ್ರಹಿಸುತ್ತಾನೆ.

### ಹಿನ್ನುಣಿಸುವಿಕೆ

ಹಿನ್ನುಣಿಸುವಿಕೆ ಸಂವಹನದ ಕಡೆಯ ಅಂಶವಾಗಿದೆ ಮತ್ತು ಸಂವಹನದ ಪ್ರಕ್ರಿಯೆಯ ಮಹತ್ತರ ಅಂಶಗಳಲ್ಲಿ ಒಂದಾಗಿದೆ. ಸಂವಹನವು ಬದಲಾವಣೆ ಮೂಡಿಸುವ ಪ್ರಕ್ರಿಯೆ. ಈ ಬದಲಾವಣೆ ಪೂರ್ಣವಾಗಲು ಸ್ವೀಕೃತಿದಾರನ

ಪ್ರತಿಕ್ರಿಯೆಯನ್ನು ತಿಳಿಯಲು ಸಂವಾಹಕನಿಗೆ ಅದರ ಮಾಹಿತಿ ಹೋಗಲೇಬೇಕು ಸಂದೇಶದ ಜ್ಞಾನವನ್ನು ಮರಳಿ ವಾಹಕಕ್ಕೆ ವರ್ಗಾಹಿಸುವುದೇ ಹಿನ್ನುಣಿಸುವಿಕೆ. ಇದು ಸಂವಾಹಕನ ನೈಜ ಅರ್ಥವನ್ನು ಸ್ವೀಕೃತಿದಾರನು ಸರಿಯಾಗಿ ಪಡೆದು ಮತ್ತು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹಿನ್ನುಣಿಸುವಿಕೆಯು ಸಂವಾಹಕನು ತನ್ನ ಸಂದೇಶವನ್ನು ಪರಿಣಾಮಕಾರಿಯಾಗಿ ಮುಡಲು ಸರಿಯಾದ ಬದಲಾವಣೆ ಅಥವಾ ತಿದ್ದುಪಡಿಗಳನ್ನು ಮಾಡುವಂತೆ ಮಾಡುತ್ತದೆ.

## ಗದ್ದಲ

ಯವೂದೇ ಸನ್ನಿವೇಶದಲ್ಲಿ ಸಂವಹನದ ಪ್ರಕ್ರಿಯೆಯಲ್ಲಿ ಇದು ಅಡಚಣೆ ಅಥವಾ ತೊಡಕಾಗಿ ಮೂಡಿಬಂದು ಪರಿಣಾಮಕಾರಿಯಾಗದಂತೆ ತಡೆಯೊಡ್ಡುತ್ತದೆ. ರಸ್ತೆ ಅಂಚಿನಿಂದ ಉಂಟಾದ ಅಡಚಣೆ, ಸಂವಹನ ಪ್ರಕ್ರಿಯೆಯೊಂದಿಗೆ ನಿರಂತರವಾಗಿ ಹರಟೆ ಹೊಡೆಯುವುದು, ಅಪಾರ ಗದ್ದಲ ಮಾಡುವ ಮೈಕ್‌ಗಳು, ಸರಿಯಿಲ್ಲದ ವಾಹಕಗಳು ಇತ್ಯಾದಿ ಸನ್ನಿವೇಶಗಳು ಸಂದೇಶವನ್ನು ಸರಿಯಾಗಿ ಗ್ರಹಿಸದಿರಲು ಪ್ರಮುಖ ಕಾರಣವಾಗಿದೆ. ಕೆಟ್ಟ ಕೈಬರಹ, ಅಸ್ಪಷ್ಟ ಉಚ್ಚಾರಣೆ ಅಥವಾ ಮತ್ತು ದಿಕ್ಕಿಲ್ಲದ ಭಾಷಣ ಕಡಿಮೆ ಮುಂತಾದ ಪ್ರಸಾರಗಳಲ್ಲಿ ಗದ್ದಲ ಕಂಡುಬರುತ್ತದೆ.

## 1.5 ಸಂವಹನ ಮಜಲುಗಳು

ಮಾನವೀಯ ಭಾಂದವ್ಯಗಳ ಪರಿಮಿತಿಯಲ್ಲಿ ಸಂವಹನದ ಹಲವಾರು ಪ್ರಕಾರಗಳಿವೆ. ಪ್ರತಿಯೊಂದು ವಿಭಿನ್ನ ಸನ್ನಿವೇಶದಲ್ಲಿ ಉಂಟಾಗುತ್ತದೆ. ಒಟ್ಟಾರೆ ಎಲ್ಲವೂ ಹಂಚಿಕೊಳ್ಳುವ ಅಂಶಗಳನ್ನು ಹೊಂದಿದರೂ ಪ್ರತಿಯೊಂದೂ ತನ್ನದೇ ಆದ ಲಕ್ಷಣಗಳನ್ನು ಹೊಂದಿದೆ.

### ಆಂತರಿಕ ಸಂವಹನ

ತನ್ನೊಳಗೆ ತಾನೇ ಮಾತನಾಡಿಕೊಳ್ಳುವುದು ಅಥವಾ ಬೇರೆ ರೀತಿಯಲ್ಲಿ ತನಷ್ಟಕ್ಕೆ ತಾನೇ ಸಂವಹನಿಸುವುದು ಇದಾಗಿದೆ.ಸಂವಹನ ಸನ್ನಿವೇಶದಲ್ಲಿ ವ್ಯಕ್ತಿಯೊಬ್ಬನು ಕನಸು ಕಾಣಬಹುದು. ಅಥವಾ ಆತ್ಮಾವಲೋಕನ ಮಾಡಬಹುದು ಅಥವಾ ಧ್ಯಾನಮಾಡಬಹುದು. ಅಂತಹ ನಡಾವಳಿಗಳು ವೈಯುಕ್ತಿಕವಾಗಿದ್ದು ಅಥವಾ ಮನೋವೈಜ್ಞಾನಿಕ ಸ್ವಭಾವಗಳಾಗಿವೆ. ಮತ್ತು ಅದ್ಯಾವುದೂ ಸಾರ್ವಜನಿಕ ವಿಷಯಗಳಿಗೆ ಮಾಡಿದಲ್ಲವಾಗಿದೆ. ಇದು ಖಾಸಗಿ ವೈಯುಕ್ತಿಕ ವರ್ತನೆಯಾದರೂ ಸಂವಹನದ ನಡಾವಳಿಗಳಲ್ಲಿ ಒಂದಾಗಿದೆ.

ವಿಲಿಯಂ ಇ. ಫ್ರಾನ್ ಕೊಯಿಸ್ ಪ್ರಕಾರ ಅಂತರಿಕ ಸಂವಹನವು "ಸಂಜ್ಞೆ, ಚಿಹ್ನೆಗಳ ಮೂಲಕ ಅಂತರಿಕ ವಿನಿಮಯವಾಗಿರುತ್ತದೆ. ಹಾಗೂ ಅವು ಬಹಳಷ್ಟು ಮಂದಿ ನಾವು ಉಹಿಸಿದಂತೆ ವ್ಯಕ್ತಿಗತವಾಗಿ ಬಹಳವಾಗಿ ಕಂಡುಬರುತ್ತದೆ." ಸಿಗ್ಮಂಡ್ ಫ್ರಾಯ್ಡ್ ಅವರ ಪ್ರಕಾರ, ನಮ್ಮ ಮಾನಸಿಕ ಪ್ರತಿಕ್ರಿಯೆಯು "ಆತ್ಮಸಾಕ್ಷಿಯ ಹೊಸ್ತಲ ಕೆಳಗಿನ" ಮಟ್ಟದಲ್ಲಿ ಕಂಡುಬಂದು ಅದು ನಮ್ಮ ಬಾಹ್ಯ ನಡವಳಿಗಳ ಮೇಲೆ ಪ್ರಭಾವ ಬೀರುತ್ತದೆ ಅಂತಹ ಗೌಪ್ಯ ವರ್ತನೆಯನ್ನು ಆಂತರಿಕ ಸಂವಹನ ಎಂದು ವರ್ಗೀಕರಿಸಲಾಗಿದೆ.

ಆಂತರಿಕ ಸಂವಹನವು ಬಹಳಷ್ಟು ಮೌಖಿಕ ಸ್ವಭಾವದಿಂದಾಗಿದ್ದು ಅದು ಸಂಜ್ಞೆ, ಚಿಹ್ನೆ,ಸೂಚ್ಯಕ ಮತ್ತು ಚಿತ್ರಗಳ ಮೂಲಕ ಅಂತರಿಕವಾಗಿ ಸಂದೇಶವನ್ನು ಹೊರಹಾಕುತ್ತದೆ ಮತ್ತು ಅವುಗಳು ಸಾರ್ವಜನಿಕ ವೀಕ್ಷಣೆಗೆ ಹೇಳಿ ಮಾಡಿಸಿದ್ದಲ್ಲ. ಅದರೂ ಕೆಲವೂಮ್ಮೆ ವ್ಯಕ್ತಿಯೊಬ್ಬರು ಪ್ರಾರ್ಥನೆ ಮಾಡುವ ಸಮಯದಲ್ಲಿ ಸ್ವಲ್ಪ ಗಟ್ಟಿಯಾಗಿ ತನ್ನಷ್ಟಕೇ ತಾನು ಮಾತನಾಡವ ಮೌಖಿಕ ಸಂವಹನ ಪ್ರಕಾರವೂ ಸೇರಿದೆ.

**ಅಂತರ ವ್ಯಕ್ತಿ ಸಂವಹನ:**

ಇಬ್ಬರ ಮಧ್ಯೆ ನಡೆಯುವ ಸಂವಹನವೇ ಅಂತರ ವ್ಯಕ್ತಿ ಸಂವಹನ. ಸಂವಹನವನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು:

ಅ. ಮುಖಾಮುಖಿ/ ಪರಸ್ಪರ ವ್ಯಕ್ತಿಗತ ಸಂವಹನ

ಆ. ಯಂತ್ರಾಧಾರಿತ ಅಂತರ ವ್ಯಕ್ತಿ ಸಂವಹನ

**ಮುಖಾಮುಖಿ/ಪರಸ್ಪರ ವ್ಯಕ್ತಿಗತ ಸಂವಹನ:**

ಇಲ್ಲಿ ಸಂವಹನವು ವೈಯುಕ್ತಿಕ, ನೇರ ಮತ್ತು ಅತ್ಮೀಯ ಮಾತುಕತೆಯಾಗಿದ್ದು ಗರಿಷ್ಠ ಮಟ್ಟದಲ್ಲಿ ಪದಗಳ ಹಾವಭಾವಗಳ ಪರಸ್ಪರ ಕಾರ್ಯ ಹಾಗೂ ವಿನಿಮಕ್ಕೆ ಸಾಧ್ಯತೆಯಿದೆ.

ಈ ಸಂವಹನದ ದೃಷ್ಟಿಯಲ್ಲಿ ಸಂವಾಹಕ ಹಾಗೂ ಸ್ವೀಕೃತಿದಾರರು ಸಾಮಾನ್ಯವಾಗಿ ಒಂದೆಡೆ ಭೌತಿಕ ಹಾಜರಾತಿಯಲ್ಲಿದ್ದು ಮಾತಿನಿಂದ ಮಾತ್ರವಲ್ಲದೆ ಮುಖಭಾವ, ಹಾವಭಾವ, ಧ್ವನಿ ಮತ್ತು ಸ್ಪರ್ಶದ ಮೂಲಕ ಸಂವಹನ ನಡೆಸುತ್ತಾರೆ.

ಅಂತರ ವ್ಯಕ್ತಿ ಸಂವಹನವನ್ನು ಬಹಳವಾಗಿ ಸೂಚಿಸುವ ಉದಾಹರಣೆಗಳೆಂದರೆ:

1. ತಂದೆ ತಾಯಿಯವರೊಂದಿಗೆ ಮನೆಯಲ್ಲಿ ಮಾತನಾಡುವುದು
2. ಸ್ನೇಹಿತರೊದಿಗೆ ತಮ್ಮ ಸಮಸ್ಯೆಗಳನ್ನು ಚರ್ಚಿಸುವುಧು
3.ಕಛೇರಿಯ ಮುಖ್ಯಸ್ಥರೊದಿಗೆ ಅಧಿಕೃತ ವಿಷಯಗಳ ಬಗ್ಗೆ ಚರ್ಚಿಸುವುದು
4.ಮಾರಾಟಗಾರನೊಂದಿಗೆ ವ್ಯಾಪಾರ ವಹಿವಾಟಿನ ಬಗ್ಗೆ ಮಾತನಾಡುವಿಕೆ ಇತ್ಯಾದಿ

## ಯಂತ್ರಾಧಾರಿತ ಅಂತರ ವ್ಯಕ್ತಿ ಸಂವಹನ:

ಟೆಲಿಫೋನ್, ಕಂಪ್ಯೂಟರ್,ಟೈಪ್‌ರೈಟರ್,ಫ್ಯಾಕ್ಸ್ ಯಂತ್ರ ಮುಂತಾದ ಯಾಂತ್ರಿಕ ಮತ್ತು ಎಲೆಟ್ರಾನಿಕ್ಸ್ ವಸ್ತುಗಳ ಮೂಲಕ ಇಬ್ಬರು ಅಥವಾ ಹೆಚ್ಚು ಜನರೊಂದಿಗೆ ಸಂವಹನ ಮಾಡುವುದು ಈ ಸಂವಹನ ಕ್ರಿಯೆಯಲ್ಲಿ ಒಳಗೊಂಡಿದೆ.

## ಗುಂಪು ಸಂವಹನ:

ಇದು ಅಂತರ ವ್ಯಕ್ತಿ ಸಂವಹನದ ಮುಂದುವರಿಯಾಕೆಗಿದ್ದು ಇಬ್ಬರಿಗಿಂತ ಹತ್ತು ವ್ಯಕ್ತಿಗಳು, ವಿಚಾರಗಳು, ಕೌಶಲ್ಯಗಳು ಮತ್ತು ಆಸಕ್ತಿ ವಿಷಯಗಳನ್ನು ಪರಸ್ಪರ ವಿನಿಮಯ ಮಾಡುವುದಲ್ಲಿ ತೊಡಗಿರುತ್ತಾರೆ. ಗುಂಪಿನಲ್ಲಿ ಜನರು ಸಮಾನ ಆಸಕ್ತಿ ವಿಷಯಗಳನ್ನು ಒಟ್ಟಾಗಿ ಚರ್ಚಿಸಿ ಮತ್ತು ವಿಚಾರ ವಿನಿಮಯ ಮಾಡುವ ಅವಕಾಶ ದೊರೆಯುತ್ತದೆ. ವಿವಿಧ ಕಾರಣಗಳಿಗಾಗಿ ಹಲವಾರು ವಿವಿಧ ಗುಂಪುಗಳಿರಬಹುದು.

ಉದಾಹಣೆಗಾಗಿ ಸಾಂದರ್ಭಿಕವಾಗಿ ಮಧ್ಯಪಾನ ಮಾಡುವಾಗ, ಕಾಫಿವಿರಾಮ, ಆಟೋಟಗಳು, ನೃತ್ತಗಳು ಅಥವಾ ಧಾರ್ಮಿಕ ಒಕ್ಕೂಟಗಳಲ್ಲಿ ಸ್ನೇಹಿತರೊಂದಿಗೇ ಆದಂತ ಗುಂಪುಗಳ ಉದ್ದೇಶವೇ ಭಿನ್ನವಾಗಿರುತ್ತದೆ. ಅದೇ ರೀತಿ ಸಭೆಯಲ್ಲಿ ಅಥವಾ ಏಯ್ಡ್ಸ್ ಕುರಿತ ಸಂಕಿರಣಗಳಲ್ಲಿ ಅಥವಾ ಕಮಿಟಿ ಸದಸ್ಯರೊಂದಿಗೆ ಪ್ರಸ್ತಾವನೆ ರೂಪಿಸಲು ಕೊಡುವ ಗುಂಪಿನ ಉದ್ದೇಶವೇ ಬೇರೆಯಾಗಿರುತ್ತದೆ. ಗುಂಪುಗಳು ತಮ್ಮದೇ ಆದ ಲಕ್ಷಣಗಳನ್ನು ಹೊಂದಿದ್ದು ಅಯಾ ಸಂವಹನ ಸಂಬಂಧಕ್ಕನುಗುಣವಾಗಿ

ಗುರುತಿಸಿಕೊಳುತ್ತದೆ.ಒಂದು ಅಥವಾ ಹೆಚ್ಚು ಗುರುತುಗಳನ್ನು ಮುಟ್ಟುವ ಉದ್ದೇಶದಿಂದ ಗುಂಪು ಸಂವಹನವು ಸಣ್ಣಪ್ರಮಾಣದಲ್ಲಿ ಪಾಲುಗೊಳ್ಳುವವರ ಮಧ್ಯೆ ಭಾಂದವ್ಯ ಮತ್ತು ಪರಸ್ಪರ ಅವಲಂಬನೆಯನ್ನು ಕಾಲದ ಪರಿಮಿತಿಯಲ್ಲಿ ತೊಡಗಿಸುತ್ತದೆ.

**ಸಾರ್ವಜನಿಕ ಸಂವಹನ**

ಗುಂಪೊಂದು ಹೆಚ್ಚಿನ ಸದಸ್ಯರನ್ನು ಒಳಗೊಂಡು ಎಲ್ಲರಿಗೂ ಸಂವಹನ ಅವಕಾಶ ಕಲ್ಪಿಸಲು ಕಾರಣ ವಾಗುವುದೇ ಇದಾಗಿದೆ. ಸಾರ್ವಜನಿಕ ಮಾತುಗರಿಕೆಯ ಒಂದು ಲಕ್ಷಣವೆಂದರೆ ಅದು ಅಸಮಾನ್ಯ ಪ್ರಮಾಣದ ಮಾತುಗಾರಿಕೆಯನ್ನು ಒಳಗೊಂಡಿದೆ. ಒಬ್ಬ ಅಥವಾ ಹೆಚ್ಚು ಮಂದಿ ತನ್ನ ಪ್ರತಿಕ್ರಿಯೆಗಳನ್ನು ಪ್ರೇಕ್ಷಕರಾಗಿ ವರ್ತಿಸುವಂತಹ ಉಳಿದ ಸದಸ್ಯರಿಗೆ ತಿಳಯಪಡಿಸುತ್ತಾನೆ.

ಇದು ಸಾರ್ವಜನಿಕ ಮಾತುಗಾರಿಕೆಯ ಎರಡನೆಯ ಲಕ್ಷಣವನ್ನು ಸೂಚಿಸುತ್ತದೆ. ನಿಯಮಿತ ವಾಕ್ ಪ್ರತಿಕ್ರಿಯೆ ಸಾರ್ವಜನಿಕ ಮಾತುಗಾರರನ್ನು ಕುರಿತ ಪ್ರಾಚೀನ ಸಾರೋಕ್ತಿ. ಎನೆಂದರೆ: "ನೀನು ಏನನ್ನು ಹೇಳಬೇಕೆಂದಿರುವೆಯೋ ಅದನ್ನು ಹೇಳು, ಹೇಳಿದನ್ನು ಮತ್ತು ಹೇಳದಿದ್ದನ್ನು ಹೇಳು."

**ಸಮೂಹ ಸಂಪರ್ಕ**

ಇದು ವಿಶಾಲವಾದ ವಿಸ್ತೃತವಾದ ಪ್ರೇಕ್ಷಕರಿಗೆ ಸಂದೇಶಗಳನ್ನು ಎಲೆಕ್ಟ್ರಾನಿಕ್ಸ್ ಮತ್ತು ಮುದ್ರಣ ಮಾಧ್ಯಮದ, ವೃತ್ತಪತ್ರಿಕೆಗಳು, ನಿಯತಕಾಲಿಕಗಳು,ಟೆಲಿವಿಷನ್, ಬಾನುಲಿ ಇತ್ಯಾದಿಗಳ ಮೂಲಕ ರವಾನಿಸುವ ಕ್ರಿಯೆಯಾಗಿದೆ. ಅತ್ಯಧಿಕ ಪ್ರಮಾಣದ ಸಂದೇಶಗಳು ಕಳುಹಿಸುವವನು ಮತ್ತು ಪಡೆದುಕೊಳ್ಳುವವನ ನಡುವೆ ಯಾವೂದೇ ವೈಯಕ್ತಿಕ ಸಂಪರ್ಕವಿಲ್ಲದೆ ವಿಶಾಲವಾದ ಪೇಕ್ಷಕರನ್ನು ತಲುಪಿಸುವ ಗುರಿಯನ್ನು ಹೊಂದಿದೆ. ಎರಡನೆಯದಾಗಿ, ಸಮೂಹ ಸಂವಹನ ಮಾಧ್ಯಮಗಳ ಮೂಲಕ ಮೂಡಿಬರುವ ಸಂದೇಶಗಳು ದೊಡ್ಡ ಸಂಸ್ಥೆಗಳು ರೂಪಿಸಿದ ಅಥವಾ ಕನಿಷ್ಟ ಆರ್ಥಿಕ ಬೆಂಬಲ ಪಡೆದವರಾಗಿದೆ. ಈ ದೃಷ್ಟಿಯಲ್ಲಿ ಸಮೂಹ ಸಂವಹನವು ಇತರ ಸಂವಹನ ಪ್ರಕಾರಗಳಿಗಿಂತ ಅತಿ ಕಡಿಮೆ ವೈಯುಕ್ತಿಕವೂ ಮತ್ತು ಹೆಚ್ಚಾಗಿ ಉತ್ಪಾದನಾ ವಸ್ತುವಾಗಿದೆ.

## 1.6 ಮಾನವ ಸಂವಹನದ ಪ್ರಕಾರಗಳು

ಮಾನವ ಸಂವಹವನ್ನು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು:

**ಅಮೌಖಿಕ ಮತ್ತುಮೌಖಿಕ ಸಂವಹನ**

### 16.1 ಅಮೌಖಿಕ ಸಂವಹನ

ಇದು ಸಂವಹನ ಪ್ರಮುಖ ಪ್ರಕಾರಕಗಳಲ್ಲಿ ಒಂದಾಗಿದೆ.ವ್ಯಕ್ತಿಗತ ಸಂವಹನದಲ್ಲಿ ಒಬ್ಬರು ಮಾತುನಾಡುತ್ತಿರುವಾಗ ಅವನು ಅಥವಾ ಅವಳು ಬರೀ ಮಾತನಾಡುತ್ತಿರುವುದಲ್ಲ. ಕೆಲವೊಂದು ಭಾವನೆಗಳು ಕೇವಲ ಮೌಖಿಕವಾಗಿರುವುದಿಲ್ಲ ಆಲ್ಬರ್ಟ್ ಮೆಹ್ರಾಬಿಯನ್ ಅವರ ಪ್ರಕಾರ ಸಂದೇಶದ ಭಾವನಾತ್ಮಾಕ ಅರ್ಥವು ಶೇಕಾಡ ಏಳರಷ್ಟು (7%) ಮೌಖಿಕವಾಗಿ ಸಂವಹನಿಸಲ್ಪಡುತ್ತದೆ. ಅವರು ಹೇಳುವ ಹಾಗೆ ಭಾವನಾತ್ಮಾಕ ಸಂವಹನ ಮಹತ್ತರ ಮೂಲವಾದ ಮುಖ ಅಧಾರಿತ

ಸಂವಹನವು ಶೇಕಾಡ 93 ರಷ್ಟು ನಮ್ಮ ಭಾವನಾತ್ಮಕ ಸಂದೇಶಗಳನ್ನು ಅಮೌಖಿಕವಾಗಿ ವ್ಯಕ್ತಪಡಿಸುತ್ತದೆ.

## ಅಮೌಖಿಕ ಸಂವಹನದ ಗುಣಲಕ್ಷಣಗಳು

1. ಅಮೌಖಿಕ ಸಂದೇಶಗಳು ನಮ್ಮ ಭಾವನೆಗಳು ಮತ್ತು ಮನೋಭಾವನ್ನು ಸೂಚಿಸುತ್ತದೆ: ನಾವು ಇತರೊಂದಿಗೆ ಸಂಪರ್ಕಿಸಸಿದಾಗ, ನಮ್ಮ ಭಾವನೆಗಳು ಮತ್ತು ಭಾವನಾತ್ಮಕ ಪ್ರತಿಕ್ರಿಯೆಗಳನ್ನು ನಮ್ಮ ಸಹಪಾಲುದಾರ ಏನನ್ನುತ್ತಾನೆ ಎಂಬುದಕ್ಕಿಂತ ಅವನ್ನು ಅಥವಾ ಅವರು ಏನನ್ನು ಮಾಡುತ್ತಾರೆ ಎಂಬುದನ್ನು ಆಧರಿಸುತ್ತದೆ ವಿವಿಧ ಸಂಬಂಧಗಳಿಗೆ ಅನುಗುಣವಾಗಿ ನಾವು ನಮ್ಮ ಅಮೌಖಿಕ ಸಂವಹನವನ್ನು ಬದಲಾಯಿಸುತ್ತೆವೆ. ನಿಮ್ಮ ಉತ್ತಮ ಸ್ನೇಹಿತರೊಂದಿಗೆ ನೀವು ನಿಗಾವಹಿಸಿ, ಅವರೊಂದಿಗಿನ ಒಡನಾಟ ಇವೆಲ್ಲವೂ ನೀವು ಅವರಲ್ಲಿ ವಿಶ್ವಾಸವಿಟ್ಟಿರುವುದನ್ನು ತಿಳಿಸುತ್ತದೆ .

ಆದರೆ ನೀವು ಉದ್ಯೋಗಕ್ಕಾಗಿ ಸಂದರ್ಶನದಲ್ಲಿದ್ದರೆ ಅಥವಾ ನೀವು ಪ್ರೇಮಿ/ಪ್ರೇಯಸಿಯ ತಂದೆ ತಾಯಂದಿರನ್ನು ಮೊದಲಬಾರಿಗೆ ಭೇಟಿಯಾಗುತ್ತಿದ್ದರೆ ನಿಮ್ಮ ಮುಗುಳುನಗೆಯನ್ನು ನೀವು ನಿಯಂತ್ರಿಸುತ್ತಾ ನೀವು ಪ್ರೌಢರು,ಸಮರ್ಥರು ಮತ್ತು ಗೌರವಯುತ ವ್ಯಕ್ತಿ ಎಂಬುದನ್ನು ನೀವು ಸೂಚಿಸಲು ಪ್ರಯತ್ನಿಸುತ್ತೀರಿ.

2. ಅಮೌಖಿಕ/ಮೂಕ ಸಂವಹನ ಸಂದೇಶಗಳು ಬಹಳಷ್ಟು ವಿಶ್ವಾಸಾರ್ಹವಾಗಿದೆ. ಅಮೌಖಿಕ ಸದೇಶಗಳನ್ನು ನಟನೆ ಮಾಡಿ ತೋರಿಸಲು ಅಸಾಧ್ಯ. ಉತ್ತರ ಅಮೇರಿಕನ್ನರು ಈ ಕೆಳಕೆಂಡ ಸಂಕೇತಗಳನ್ನು ಅನ್ನುಕ್ರಮವಾಗಿ ಬಳಸಿ ವ್ಯಕ್ತಿಯೊಬ್ಬನು ಸುಳ್ಳು ಹೇಳುವಾಗ ಪತ್ತೆ ಹಚ್ಚಲು ಪ್ರಯತ್ನಿಸುತ್ತಾರೆ.

- ಪ್ರಶ್ನೆಯೊಂದಕ್ಕೆ ಉತ್ತರಿಸಲು ಹೆಚ್ಚು ಕಾಲಾವಕಾಶಕೊಂಡುಕೊಳ್ಳುವುದು
- ಕಣ್ಣಿನ ಸಂಪರ್ಕದ ಹಿಗ್ಗಿಸುವಿಕೆ
- ಭಾವ ಕೌಶಲ್ಯದಲ್ಲಿ ಏರಿಕೆ ಮಟ್ಟ
- ತುಂಬಲಾರದ ವಿರಾಮಗಳು
- ಕಡಿಮೆ ಮುಗುಳುನಗೆ
- ನಿಧಾನಗತಿಯ ಭಾಷಣ
- ಧ್ವನಿಯಲ್ಲಿ ಏರಿದ ಮಟ್ಟ
- ಪದಗಳ ಬಳಕೆಯಲ್ಲಿ ಹೆಚ್ಚಿನ ಉಚ್ಛಾರಣೆ ಮತ್ತು ನಿರರ್ಗಳ ಮಾತುಗಾರಿಕೆ

3 .ಅಮೌಖಿಕ ಸಂದೇಶಗಳು ಮೌಖಿಕ ಸಂದೇಶಗಳೊಂದಿಗೆ ಸೇರಿ ಅರ್ಥೆಸುವಿಕೆ.

ನಮ್ಮ ಸಂಬಂಧಗಳಿಗೆ ಪೂರಕವಾಗಿ ಅಮೌಖಿಕ ಸಂದೇಶಗಳನ್ನೇ ಹೆಚ್ಚಾಗಿ ಆಧರಿಸದ್ದರೂ ಮೌಖಿಕ ಸಂದೇಶಗಳನ್ನು ಹೊರತುಪಡಿಸಿ, ಸ್ವತಂತ್ರವಾಗಿ, ಕಾರ್ಯ ನಿರ್ವಹಿಸಲು ಸಾಧ್ಯವಾಗದು, ಇದಕ್ಕೆ ಬದಲಾಗಿ ಮೌಕಿಕ ಮತ್ತು ಅಮೌಖಿಕ ಸಂಕೇತಗಳು ಈ ಕೆಳಕಂಡ ಎರಡು ರೀತಿಯಲ್ಲಿ ಹೇಗೆ ಬೆರೆಯುವ ಸಂದೇಶಗಳನ್ನು ಸರಿಯಾಗಿ ಗ್ರಹಿಸಲು ಸಾಧ್ಯವೆಂಬುದನ್ನು ತಿಳಿಯಬಹುದು:

*ಅಮೌಖಿಕ ಸಂಕೇತಗಳು ಮೌಖಿಕ ಸಂದೇಶಗಳನ್ನು ಪುನರುಚ್ಚಾರಿಸಲು ವ್ಯತಿರಿಕ್ತವಾಗಿ ಹೇಳಲು ನಿಯಂತ್ರಿಸುವ ಬದಲಿ ಕೆಲಸವನ್ನು ಮಾಡುತ್ತದೆ.

ಯಾರಾದರೂ "ಅವನು ಯಾವ ದಾರಿಯಲ್ಲಿ ಹೋದನು?" ಎಂದು ಕೇಳಿದರೆ ನೀವು ಸದ್ದಿಲ್ಲದೆ ಹಿಂದಿನ ಬಾಗಿಲಿನ ಕಡೆ ಸನ್ನೆ ಮಾಡಬಹುದು.ಈ ಸನ್ನಿವೇಶಗಳಲ್ಲಿ ನೀವು ಮೌಕಿಕ ಸಂದೇಶಗಳನ್ನು ಅಮೌಖಿಕ ಸಂಕೇತಗಳಾಗಿ ಬದಲಿಸುತ್ತೀರಿ.

ಅಮೌಖಿಕ ಸಂದೇಶಗಳು ಮೌಖಿಕ ಸಂದೇಶಗಳನ್ನು ಸರಿಯಾಗಿ ಉಚ್ಚರಿಸಲು ಮತ್ತು ಪೂರಕವಾಗಿರಲು ಸಹಾಯಮಾಡುತ್ತವೆ. ತಾಯಿಯೊಬ್ಬಳು ತನ್ನ ತುದಿ ಬೆರಳನ್ನು ಮಗುವಿನ ಕಡೆ ತೋರಿಸಿ ಬಯ್ಯುವುದಾಗಲೀ ಮತ್ತು ಮೇಲ್ವಿಚಾರಕನ್ನೊಬ್ಬನು ತನ್ನ ಮುರುದನಿಯಲ್ಲಿ ಸಿಟ್ಟು ಬಂದು ಮಾತನಾಡುವುದು ಮೌಖಿಕ ಸಂದೇಶಗಳ ಪುನರುಚ್ಛಾರವಾಗುತ್ತದೆ ನಿಮ್ಮ ಸ್ನೇಹಿತರೊಬ್ಬರನ್ನು ನೀವು ಅವಳ ಬಗ್ಗೆ ಹೆಮ್ಮೆ ಪಡುತ್ತೀರೆಂದು ಹೇಳಿ ಬಿಗಿದಪ್ಪುವ ಅವಧಿಯ ನಿಮ್ಮ ಹೆಮ್ಮೆಯ ಆಳವನ್ನು ಸೂಚಿಸವ ಹೆಚ್ಚುವರಿ ಮಾಹಿತಿಯಷ್ಟೇ ನೀವು ಸಂದೇಶಗಳನ್ನು ಅಭಿನಂದಿಸುತ್ತಾ ಬಿಗಿ ಕೈ ಕುಲುಕುವಿಕೆ ನೀವು ಕೆಲಸಕ್ಕಾಗಿ ನಿಮ್ಮ ಮೌಖಿಕ ನಿಲುವನ್ನು ದೃಢಪಡಿಸುತ್ತದೆ.

4.ಜನರು ಅಮೌಖಿಕ ಸಂದೇಶಗಳ ಮೂಲಕ ಬೇರೆಯವರೊಂದಿಗೆ ಪ್ರತಿಕ್ರಿಯಸುತ್ತಾರೆ ಮತ್ತು ಅದಕನ್ನುಗುಣವಾಗಿ ವರ್ತಿಸುತ್ತಾರೆ. ಒಂದು ವೇಳೆ ನಿಮ್ಮ ಸ್ನೇಹಿತರೊಬ್ಬರು ನಿರ್ಮೆಡೆ ಬಾಗಿ ವಿಷಯಯೊಂದನ್ನು ಹೇಳಲು ಬಂದಾಗ ನೀವೂ ಸಹ ಅವರನ್ನು ಕೇಳಲು ಮುಂದಾಗುತ್ತೀರಿ. ಒಂದು ಸಂಕೀರ್ಣ ನೃತ್ಯದ ಅವಿಭಾಜ್ಯ ಅಂಗದ ಹಾಗೆ ನಾವು ಸಂವಹನಿಸುವಾಗ, ಇತರರು ಮಾತನಾಡುವಾಗ, ಅವರ ಕಣ್ಣು ಚಲನೆ, ಕಣ್ಣು ಸಂಪರ್ಕ, ಹಾವಬಾವ, ಸಂಜ್ಞೆ ಮತ್ತು ಇತರ ಅಮೌಖಿಕ ಸಂಕೇತಗಳುಸ್ಪಂದಿಸುತ್ತವೆ.

5. ಅಮೌಖಿಕ ಸಂದೇಶಗಳು ಅಂತರ ವ್ಯಕ್ತಿ ಸಂಬಂಧಗಳನ್ನು ಆರಂಭಿಸುವ, ಸ್ವೀಕರಿಸುವ ಮತ್ತು ಅಭಿವೃದ್ಧಿ ಪಡಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ.ಸರಿಯಾಗಿ ಸ್ಪಂದಿಸುತ್ತಾ ಮುಖಭಾವಗಳೊಂದಿಗೆ ಸಹಕರಿಸುತ್ತಾ ಮತ್ತು ಧ್ವನಿ ಸಂಕೇತ ಅಪ್ಪಿಕೊಳ್ಳುವಿಕೆ ಮತ್ತು ಸಕಾರಾತ್ಮಕ ಸ್ಪರ್ಶಮಾಡುವುದರಿಂದ ವ್ಯಕ್ತಿಯ ಮಾನಸಿಕ ಒತ್ತಡವನ್ನು ಕಡಿಮೆಗೊಳಿಸಿ ಒಟ್ಟಾರೆ ಸದೃಢವ್ಯಕ್ತಿಯನ್ನಾಗಿ ಮಾಡಲು ಸಾಧ್ಯವಾಗುತ್ತದೆ.

ಕೆಲವೊಮ್ಮೆ ಅಮೌಖಿಕ ಸಂವಹನವನ್ನು ಅರ್ಥೈಸುವುದು ಸವಾಲಾಗಿ ಪರಿಗಣಿಸುತ್ತದೆ. ಕಾರಣ, ಅಮೌಖಿಕ ಸಂದೇಶಗಳು ಹಲವಾರು ಸಾರಿ ಅಸ್ಪಷ್ಟ, ನಿರಂತರವಾಗಿ ವಿವಿಧ ಮಾಧ್ಯಮಗಳಲ್ಲಿ ಮೂಡಿಬಂದರೂ ಅದನ್ನು ಗ್ರಹಿಸಲು ಸಂಸ್ಕೃತಿ ಅಧಾರಿತ ಪ್ರಯತ್ನ ಅನಿವಾರ್ಯವಾಗಿದೆ.

ವ್ಯಕ್ತಿಯೊಬ್ಬರನ್ನು ಅರ್ಥಮಾಡಿಕೊಳ್ಳಲು ಕೇವಲ ಅಮೌಖಿಕ ಮಾಹಿತಿಯಿಂದ ತಿಳಿಯಲು ದೊಡ್ಡ ಸವಾಲಾಗಿದ್ದು, ಆ ವ್ಯಕ್ತಿಯ ಇತರ ಅಮೌಖಿಕ ಸಂವಹನ ಪ್ರಕಾರಗಳನ್ನು ಅರಿತುಕೊಳ್ಳಲು ಮರೆಯುವಂತಿಲ್ಲ ಅಮೌಖಿಕವಾಗಿ ಸಂವಹನಿಸದ ಗ್ರಹಿಕೆ ಮತ್ತು ವಿಶ್ಲೇಷಣೆ ಕ್ಲಿಷ್ಟ ಮತ್ತು ವೈಜ್ಞಾನಿಕವಾದುದು ಎಂದು ಹೇಳಲಾಗಿದೆ. ಅಮೌಖಿಕ ಸಂವಹನದ ವಿವಿಧ ಪ್ರಕಾರಗಳು ಹೀಗಿವೆ:

ಶರೀರ ಚಲನೆ, ನಡೆಯುವ ಭಂಗಿ ಮತ್ತು ಹಾವಭಾವ, ಮುಖಭಾವನೆ ಧ್ವನಿ ಸಂಕೇತಗಳು, ವೈಯಕ್ತಿಕ ಸ್ಥಳ ಪ್ರಾದೇಶಿಕತೆ, ಸ್ಪರ್ಶ, ಮೇಲುನೋಟ ಇತ್ಯಾದಿ.

### 1.6.2 ಮೌಖಿಕ ಸಂವಹನ

ಯಾವುದೇ ಮಾಧ್ಯಮದ ಮೂಲಕ ಭಾಷೆಯನ್ನು ಬಳಸಿ, ಸಂದೇಶವನ್ನು ಹಂಚಿಕೊಂಡರೆ ಅದನೇ ಮೌಖಿಕ ಸಂವಹನ ಎಂದು ಪರಿಗಣಿಸಲಾಗದು. ಆದ್ದರಿಂದ ಆಡು ಮಾತು,ಲಿಖಿತ ಬರವಣಿಗೆ ಮತ್ತು ಪದಗಳ ಬಳಕೆಯು ಮೌಖಿಕ ಸಂವಹನದ ಪ್ರಕಾರಗಳಾಗಿವೆ.

ಮೌಖಿಕ ಸಂವಹನವು ವಿಶೇಷವಾಗಿ ಆರಿಸಿದ ಸಂಜ್ಞೆಗಳನ್ನು ಮತ್ತು ಬಳುಸುವ ಭಾಷೆ ಮೂಲಕ ಸಂದೇಶವನ್ನು ವಿನಿಮಯ ಮಾಡುವುದೇ ಆಗಿದೆ.

ಪದಗಳು ಶಕ್ತಿಯುಕ್ತವಾಗಿದೆ ಕೆಲವೇ ಕೆಲವು ಪದಗಳನ್ನು ಕೌಶಲ್ಯ ಪೂರ್ವಕವಾಗಿ ಬಳಸದ್ದೇ ಆದರೆ ಅದರ ಪ್ರಭಾವ ಅಪಾರ ಉದಾಹರಣೆಗೆ, ಎರಡು ಮಿಲಿಯನ್ ಜನರು ಕೇವಲ 297ಪದಗಳಿಂದ ಸಮಗ್ರ ನೈತಿಕ ಸಂಹಿತೆಯಾದ "ಹತ್ತು ಪವಿತ್ರ ಕಟ್ಟಳೆಗಳನ್ನು" ತಮ್ಮದಾಗಿಸಿಕೊಂಡಿರುತ್ತಾರೆ.

## 1.7 ಭಾಷೆಯ ವೈಜ್ಞಾನಿಕ ದ್ರಷ್ಟಿಕೋನ

ಜ್ಞಾನದ ವೈಜ್ಞಾನಿಕ ದ್ರಷ್ಟಿಕೋನವು ಹಲವಾರು ಮೂಲಭಾವನೆಗಳಿಂದ ಕೂಡಿರುತ್ತದೆ. ಭಾಷೆಯ ವೈಜ್ಞಾನಿಕ ನಿಲುವು ತೆಗೆದುಕೊಳ್ಳುವಾಗ ಭಾಷೆಯ ಸಂರಚನೆಯು ಬಹಳ ಮಟ್ಟಿಗೆ ಭಾವನಾತ್ಮಕವಾದ ಮತ್ತು ತರ್ಕಬದ್ಧವಾದ ಮೂಲಪರಿಕಲ್ಪನೆಗಳನ್ನು ಆಧರಿಸುತ್ತದೆ ಎಂದು ವಾದಿಸುತ್ತಾರೆ ಸವಂಹನದ ಮತ್ತು ಭಾಷೆಯ ಸಾಂಕೇತಿಕ ಸ್ವರೂಪಗಳನ್ನು ಚೆನ್ನಾಗಿ ಮನನ ಮಾಡುವುದರಿಂದ ಸಂವಹನ ಪ್ರಕ್ರಿಯೆಯ ಮಹತ್ತರ ಅಂಶಗಳನ್ನು ಅರಿಯಲು ಸಾಧ್ಯವಾಗುತ್ತದೆ.ನೀವು ಭಾಷೆಯನ್ನು ಭಾಷಣದಿಂದ ಭಿನ್ನವಾಗಿ ವಿಂಗಡಿಸಬೇಕಾಗಿರುತ್ತದೆ.

ಭಾಷಣದ ಅತಿ ಮಹತ್ತರ ಅಂಶವಾದ ಭಾಷೆಯು ಒಂದು ರೀತಿಯಲ್ಲಿ ಉತ್ತಮ ಭಾಷಣಕ್ಕೆ ಕಾರಣವಾಗುತ್ತದೆ ಆದರೂ ಅದು ಭಾಷಣಕ್ಕೆ ಸಮಾನಂತರವಾಗುದಿಲ್ಲ.ಕೆಲವು ರೀತಿಯಲ್ಲಿ ಬಹಳವಾದ ಭಾಷಣದ ಧ್ವನಿಗಳು ಭಾಷೆಯನ್ನು ಆದರಿಸಲ್ಪರೂ ನಮ್ಮ ಭಾಷೆಯ– ಇಂಗ್ಲಿಷ್ ಅದು ಇತರೆ ಭಾಷೆ ಮಾತನಾಡುವವರ ಒಟ್ಟು ಧ್ವನಿಗಳು ಸರಳ ಮಿಶ್ರಣವಲ್ಲ.

ಪ್ರತಿಯೊಂದು ಭಾಷೆಯು ತನ್ನದೇ ಅದ ಭಾವನಾತ್ಮಕ ಸಂರಚನೆ ಹೊಂದಿದ್ದರೂ, ಕೆಲವು ಭಾಷಣಕಾರರು, ಮಾತುಗಾರರು ಸ್ವಭಾವಿಕ ಸಂರಚನೆಯಿಂದ ದೂರಹೊಗುತ್ತಾರೆ. ಅಂತಹವರು ಪದಗಳನ್ನು ತಮಗೆ ಬೇಕಾದ ರೀತಿಯಲ್ಲಿ ಬಳಸಿ ಮೂಲ ಸ್ವರೂಪದದಿಂದ ಭಿನ್ನವಾದ ಶೈಲಿಯಲ್ಲಿ ಮಾತುನಾಡುತ್ತಾರೆ. ನಾವೆಲ್ಲರೂ ವಿಶಿಷ್ಠ ರೀತಿಯಲ್ಲಿ ಭಾಷೆಯ ಬಳಕೆ ಮಾಡುತ್ತೇವೆ. ಪರಿಣಾಮಕಾರಿ ಸಂವಹನಕಾರರು ವ್ಯಾಕರಣ ಬದ್ಧವಾದ ಭಾಷಾ ಬಳಕೆಗೆ ಒತ್ತು ನೀಡುತ್ತಾರೆ ಹಾಗೂ ಪದಗಳನ್ನು ತಕ್ಕಮಟ್ಟಿಗೆ ಬದಲಾಯಿಸಿ ಸರಿಯಾದ ಅರ್ಥವನ್ನು ಸೂಚಿಸುವ ಹಾಗೆ ಮಾಡುತ್ತಾರೆ.

## 1.8 ಪದಗಳ ಬಳಕೆ

ಜನರು ಹೇಗೆ ಭಾಷೆಯ ಕಲಿಕೆ ಮಾಡಿ, ತಾವು ಮಾತನಾಡುವ ಮತ್ತು ಮುದ್ರಿತ ಪದಗಳಿಗೆ ಸರಿಹೊಂದುವ ಅರ್ಥವನ್ನು ನೀಡುವ ಬಗ್ಗೆ ಹಲವಾರು ಸಿದ್ಧಾಂತಗಳಿದ್ದರೂ ಈ ರಹಸ್ಯವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಹಾಗೂ ಸಾರ್ವತ್ರಿಕವಾಗಿ ಎಲ್ಲರೂ ಒಪ್ಪುವ ಯಾವುದೇ ಒಂದು ನಿರ್ದಿಷ್ಠ ನಿಲುವು ಸಾಧ್ಯವಿಲ್ಲ.

"ಅರ್ಥವೆಂಬುದು ಜನರಲ್ಲಿದೆ, ಪದಗಳಲಿಲ್ಲ" ಎನ್ನುವ ಮಾತೊಂದಿದೆ. ಸಂವಹನದಲ್ಲಿ ಪದಗಳು ಅರ್ಥವನ್ನು ಹೊಂದಿದೆ' ಎಂಬ ನಂಬಿಕೆ ಇದೆ. ಅದು ಹಾಗೆ ಇಲ್ಲ. ಪದಗಳು ಏಕಪಕ್ಷೀಯ ಸಂಜ್ಞೆಗಳಾಗಿ ಅರ್ಥವನ್ನು ಸೂಚಿಸಿದರೂ, ಅದನ್ನು ಒಂದು ನಿರ್ದಿಷ್ಟ ಹಿನ್ನೆಲೆಯಲ್ಲಿ ಬಳಸಬೇಕಾಗುತ್ತದೆ ಹಾಗೂ ಪಾರಿಭಾಷಕ ಮತ್ತು ಒಳಾರ್ಥಗಳನ್ನು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಪದಗಳು ಅರ್ಥವನ್ನು ನೀಡುವ ಹಾಗೆ ವ್ಯಾಖ್ಯಾನಿಸಬೇಕು. ಪದದ ಪಾರಿಭಾಷಿಕತೆಯು ಸೀಮಿತವಾದ ಅಥವಾ ಯಥಾ ಅರ್ಥವನ್ನು ಮಾತ್ರ ನೀಡುತ್ತದೆ. ಪದಗಳ ಒಳಾರ್ಥ ಅಥವಾ ಗೂಡಾರ್ಥವು ಭಾವನೆಗಳನ್ನು ಸೂಚಿಸುತ್ತದೆ.

## ಸಂಕೇತಗಳಾಗಿ ಪದಗಳು

ಮುದ್ರಿತ ಅಥವಾ ಆಡುವ ಪದಗಳು ಯಾವುದಾದರೂಂದು ಚಿತ್ರ,ಧ್ವನಿ,ಪರಿಕಲ್ಪನೆ ಅಥವಾ ಅನುಭವನ್ನು ಸೂಚಿಸುತ್ತವೆ. ಆಂಗ್ಲಭಾಷೆಯ ಕ್ಯಾಟ್(cat) ಎಂಬ ಪದವನ್ನು ತೆಗೆದುಕೊಳ್ಳಿ. ಈ ಪದ ನಿಮ್ಮ ಮನಪಟಲದಲ್ಲಿ ಶಬ್ದ ಮಾಡುವ ಮುಕ್ತ ಪಂಜವುಳ್ಳ ಮತ್ತು ಚೂಪು ಹಲ್ಲುಗಳ ಪ್ರಾಣಿಯೊಂದರ ಚಿತ್ರಣ ಮೂಡುತ್ತದೆ ಅಥವಾ ಬೆಂಕಿಗೂಡಿನಲ್ಲಿ ನಡೆದಾಡುವ ನಿಮ್ಮ ಸಾಕುಬೆಕ್ಕಿನ ನೆನಪನ್ನು ಉಂಟುಮಾಡುತ್ತದೆ.

## ಪದಗಳ ವಿಸ್ತೃತ ಅರ್ಥ

ಅಮೆರಿಕದ ಭಾಷಾತಜ್ಞ ಚಾರ್ಲ್ಸ್ ಹೊಕೆಟ್ ಪದಗಳು ಬಹಳ ಮಟ್ಟಿಗೆ ವಿಶಾಲ/ ವಿಸ್ತೃತ ಅರ್ಥವನ್ನು ನೀಡುತ್ತದೆ ಎಂದು ಸೂಚಿಸಿದ್ದಾನೆ. ಪದಗಳು ನನ್ನನು ಸೂಚಿಸುತ್ತದೆ ಎಂಬುದಕ್ಕೆ ಯಾವೂದೇ ನಿರ್ದಿಷ್ಠ ಕಾರಣವಿಲ್ಲ.ಉದಾಹಣೆಗೆ ಅಂಗ್ಲಭಾಷೆಯ ಡಾಗ್ ಪದ ನಾಯಿಯ ಹಾಗೆ ಅಥವಾ ನಾಯಿ ಬೊಗಳುವ ಹಾಗೆ ಕಾಣಬಹುದು.ಅದರೂ ನಿಮ್ಮ ಮನಸ್ಸಲ್ಲಿ ನಿಮ್ಮನೆಚ್ಚಿನ ನಾಯಿ ಮತ್ತು ನಾಯಿಯ ಸಂಸಾರ ನಡುವೆ ಸಂಪರ್ಕ ಉಂಟಾಗುತ್ತದೆ. ನಾವು ಬಳಸುವ ಪದಗಳಿಗೆ ಒಪ್ಪುವ ಸಾಮನ್ಯ ಅರ್ಥವಿದ್ದರೂ,ಪದವೊಂದಕ್ಕೆ ಹಾಗೂ ಅದು ಸೂಚಿಸುವುದಕ್ಕೆ ಯಾವೂದೇ ತಾರ್ಕಿಕ ಬೆಸುಗೆಯಿಲ್ಲ.

## ಹಿನ್ನೆಲೆಯಾಧಾರಿತ ಪದಗಳು.

ಸಂಜ್ಞೆಗಳು ಸನ್ನಿವೇಶಕ್ಕೆ ಅದನ್ನು ಬಳಸದ ಪ್ರಕಾರಕ್ಕನುಗುಣವಾಗಿ ಅರ್ಥವನ್ನು ನೀಡುತ್ತದೆ. ಅಂಗ್ಲ ಪದ (old man) ಹಿರಿಯ ಮನುಷ್ಯ ಆಯಾ ಎಂಬುದು 60 ವರ್ಷದ ದಾಟಿದ ಪುರಷ ನಿಮ್ಮ ತಂದೆ,ನಿಮ್ಮ ಅದ್ಯಾಪಕ, ನಿಮ್ಮ ಪ್ರಾಂಶುಪಾಲರು ಅಥವಾ ಮೇಲಧಿಕಾರಿಯನ್ನು ಸೂಚಿಸುತ್ತದೆ.

## ಸಾಂಸ್ಕೃತಿಕ ಹಿನ್ನೆಲೆಯ ಪದಗಳು

ಸಂಸ್ಕೃತಿವೆಂಬುದು ನಿಯಮಗಳು,ರೂಡಿಗಳು,ಮೌಲ್ಯಗಳು ಮತ್ತು ಜನಸಮೂಹದ ಸ್ವಾತಿಕಮಟ್ಟವನ್ನು ಜನಾಂಗಗಳು ಅನುಕ್ರಮವಾಗಿ ಕುರಿತು ರೂಪಿಸದ್ದೆ ಅಗಿದೆ.ಸಂಜ್ಞೆಯೊಂದರ ಅರ್ಥವು ಸಂಸ್ಕೃತಿಯಿಂದ ಸಂಸ್ಕೃತಿಗೆ ಪದಗಳ ಅರ್ಥವು ಬದಲಾವಣೆಯಾಗುತ್ತದೆ.

## 1.9 ಮೌಖಿಕ ಸಂವಹನದಲ್ಲಿ ಪದಗಳ ಬಳಕೆ

ನೀವು ಕೇಳುವ ಮತ್ತು ಬಳುಸುವ ಪದಗಳು ಬೇರೆಯೊಬ್ಬರೊಂದಿಗೆ ನೀವು ಸಾಧಿಸಲಿಚ್ಚಿಸುವ ಸಕಾರಾತ್ಮಕ ಭಾಂದವ್ಯ ಅಥವಾ ಗುಣಮಟ್ಟವನ್ನು ರೂಪಿಸುತ್ತದೆ. ಲೇಖಕ ಮತ್ತು ಸಂಶೋಧಕರಾದ ಡ್ಯಾನಿಯಲ್ ಎಂಕೆಲ್ಲೋವಿಚ್ ಸೂಚಿಸುವ ಹಾಗೆ ನಾವು ಇತರರೊಂದಿಗೆ ಮಾತುಕತೆ ನಡೆಸುವುದು ಅವರೊಂದಿಗೆ ಅಪ್ಪಟ ಸಂಭಾಷಣೆ ಸಾದಿಸುವುದಷ್ಟೇ ಮುಖ್ಯವಾಗಿದೆಯೇ. ಹೊರತು ಯ್ಯಾವುದೇ ವಿಷಯ ಕುರಿತು ಎದುರಾಳಿಯೊಂದಿಗೆ ವಾಕ್ ಬಲ ಪ್ರದರ್ಶನ ನಡೆಸುವ ಕುಸ್ತಿಯಲ್ಲ. ನಿಜವಾದ ಸಂಭಾಷಣೆಯು ಪರಸ್ಪರ ಸಮಾನತೆಯ ವಾತಾವರಣವನ್ನು ಉಂಟುಮಾಡುವುದು. ಅನುಭೂತಿಯಿಂದ ಆಲಿಸುವುದು ಮತ್ತು ಹೇಳಬೇಕೆನ್ನುವುದನ್ನು ಮುಕ್ತವಾಗಿ ಹೊರಹಾಕುವುದೇ ಆಗಿದೆ. ಸಮಾನತೆ, ಅನುಭೂತಿತನ ಮತ್ತು ಮುಕ್ತತೆಯನ್ನು ಸಾಧಿಸಲು ನೀವು ಮಾತುಕತೆಯನ್ನು **ಚರ್ಚೆಯ** ಬದಲಾಗಿ **ಸಂಭಾಷಣೆ**ಯಾನ್ನಾಗಿಸಬೇಕು.

ನಾವು ಪದಗಳು ಮತ್ತು ಕಾರ್ಯದಿಂದ ಬೇರೆಯವರಿಗೆ ಪ್ರೋತ್ಸಾಹ ನೀಡುವುದು ಅಥವಾ ಇಲ್ಲ ಎಂಬುದನ್ನು ತಿಳಿಸುವ ಸಾಧನಗಳಾಗಿವೆ. ಅಂತರವ್ಯಕ್ತಿ ಸಂಬಂಧ ಏರ್ಪಡಿಸಲು ಪರಿಣಾಮಕಾರಿ ಭಾಷಣವನ್ನು ಹಲವಾರು ತಂತ್ರಗಳನ್ನು ಹೇಗೆ ಉಪಯೋಗಿಸಬಹುದು ಎಂಬುದನ್ನು ಈ ಕೆಳಕಂಡಂತೆ ನೀಡಲಾಗಿದೆ:

**ಬೇರೆಯವರ ನಡಾವಳಿಯನ್ನು ಅವಲೋಕಿಸದೆ ನಿಮ್ಮ ಭಾವನೆಗಳನ್ನು ವಿವಸಿರಿಸಿ.**

ಬಹಳಷ್ಟು ಜನರು ಅವರನ್ನು ಯಾವುದೇ ರೀತಿಯಿಂದ ಪರೀಕ್ಷಿಸುವುದಾಗಲಿ ಅಥವಾ ಮೌಲ್ಯಮಾಪನ ಮಾಡುವುದನ್ನು ಇಚ್ಚಿಸುವುದಿಲ್ಲ.ಟೀಕಿಸುವುದು ಮತ್ತು ಹೆಸರು ಹಿಡಿದು ನಿಂದಿಸುವುದು ಸಮಸ್ಯೆಗಳನ್ನು ಸೃಷ್ಟಿಸುತ್ತದೆ, ಆದರೆ ಅದು ಬೇರೆಯವರ ಸಮಸ್ಯೆಗಳನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತದೆ ಅಥವಾ ಅವರ ಪ್ರೀತಿಯನ್ನು ಅವಿಶ್ವಾಸನೀಯ ಹೊಗಳುವಿಕೆಯ ಮೂಲಕ ಗೆಲ್ಲುವಂತಾಗುತ್ತದೆ. ವಾಸ್ತವಾಗಿ, ಯಾವುದೇ ರೀತಿಯ ಮೌಲ್ಯಮಾಪನ ಅತ್ಮನಿರ್ಬರತೆಯ ವಾತಾವರಣವನ್ನು ಸೃಷ್ಟಿಸುತ್ತದೆ.

ಬೇರೆಯವರನ್ನು ನಿಂದಿಸುವುದನ್ನು ತಡೆಗಟ್ಟಲು ನಿಮ್ಮ ಭಾಷೆಯಲ್ಲಿ ಇತರರನ್ನು ನೀವು ಎಂದು ಆಕ್ಷೇಪಿಸುವುದನ್ನು ತೆಗೆದುಹಾಕಿರಿ. "ನೀವು ಯಾವಾಗಲೂ ಔತಣಕೂಟಕ್ಕೆ ತಡವಾಗಿ ಬರುತ್ತೀರಾ" ಅಥವಾ "ನೀವು ನಿಮ್ಮ ಕೊಠಡಿಯಲ್ಲಿ ಕೊಳಕು ಬಟ್ಟೆಗಳನ್ನು ತೆಗೆದುಕೊಂಡು ಬನ್ನಿ" ಎಂಬ ಹೇಳಿಕೆಗಳು, ವ್ಯಕ್ತಿಯೊಬ್ಬರ ಆತ್ಮ ಪ್ರತಿಷ್ಠೆಯ ನಿಂದನೆಯಾಗುತ್ತದೆ ಮತ್ತು ಸಾಮಾನ್ಯವಾಗಿ ರಕ್ಷಣಾತ್ಮಕ ಪ್ರತಿಕ್ರಿಯೆಯಲ್ಲಿ ಅಂತ್ಯಗೊಳ್ಳುತ್ತದೆ.ಇದಕ್ಕೆ ಬದಲಾಗಿ 'ನಾನು' ಎಂಬ ಪದವನ್ನು ಯಾವುದೇ ಸನ್ನಿವೇಶದಲ್ಲಿ ಅಥವಾ ಘಟನೆ ಕುರಿತು ನಿಮ್ಮದೇ ಆದ ಭಾವನೆಗಳು ಮತ್ತು ಯೋಚನಾ ಲಹರಿಯೊಂದಿಗೆ ವಿವರಿಸಿ:

"ನೀನು ತಡವಾಗಿ ಬಂದಾಗ ರಾತ್ರಿ ಊಟ ಬೆಚ್ಚಗೆ ಇಡಲು ಕಷ್ಟವಾಗುತ್ತದೆ" ಅಥವಾ "ನಾನು ನಿಮ್ಮ ಕೊಳಕು ಬಟ್ಟೆಯನ್ನು ತೆಗೆದುಹಾಕುವ ಹೆಚ್ಚುವರಿ ಕೆಲಸ ನನಗೆ ಸಂತೋಷವಾಗುವುದಿಲ್ಲ". ನೀವು ನಿಮ್ಮ ಭಾವನೆಗಳನ್ನು ವ್ಯಕ್ತಪಡಿಸುವಾಗ ಸಂದೇಶವನ್ನು ಪಡೆದು ಹಿನ್ನುಣಿಸುವಾಗ ಅವಹೇಳನ ಮಾಡಿದ್ದಲ್ಲಿ ನೀವು ವಾಸ್ತವಾಗಿ ಸಮಸ್ಯೆಯ ಹಕ್ಕುದಾರರಾಗಿರುತ್ತೀರಾ.ನಿಮ್ಮನ್ನು ಕೇಳುವವರಿಗೆ ತಿರಸ್ಕಾರದ ಭಾವನೆ ಬರುವ ಸಾಧ್ಯತೆ ಕಡಿಮೆ ಅಥವಾ ನೀವು ಅವರನ್ನು ನಿಯಂತ್ರಿಸಲು ಪ್ರಯತ್ನಿಸುವುದಾದರೆ ಈ ವಿಧಾನವು ಹೆಚ್ಚು ಮುಕ್ತವಾದ ವಾತಾವಣ ಮತ್ತು ವಿಶ್ವಾಸವನ್ನು ಪಡೆಯಲು ಸಹಾಯವಾಗುತ್ತದೆ.

**ಬೇರೆಯವರನ್ನು ನಿಯಂತ್ರಿಸುವುದರ ಬದಲು ಸಮಸ್ಯೆಗಳನ್ನು ಬಗೆಹರಿಸಿ** ಜನರಿಗೆ ಮತ್ತೊಬ್ಬರ ನಡಾವಳಿಯ ಮೇಲೆ ಕಡಿಮೆ ನಿಯಂತ್ರಣ ಅಥವಾ ನಿಯಂತ್ರಣವಿರುವುದಿಲ್ಲ. ಹೆಚ್ಚಿನ ಅಂಶ, ನಾವು ಬೇರೆಯವರು ನಮ್ಮ ಮೇಲೆ ನಿಯಂತ್ರಣ ಮಾಡುವ ಪ್ರಯತ್ನಗಳನ್ನು ಇಷ್ಟಪಡುವುದಿಲ್ಲ. ನಮಗೆ ಉತ್ತಮವಾದುದನ್ನು ತಿಳಿಯಪಡಿಸಬೇಕೆಂದುಕೊಂಡವರು ನಮಗೆ ಸಹಾಯ ಮಾಡುವ ಬದಲು ಅವರೇ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತಾರೆ.

**ಮತ್ತೊಬ್ಬರಿಂದ ದೂರವಿರುವ ಬದಲು ಅವರೊಂದಿಗೆ ಸ್ಪಂದಿಸಿರಿ** ಪ್ರೋತ್ಸಾಹದಾಯಕ ಸಂಬಂಧಗಳ ಹೆಗ್ಗುರುತೇ ಸ್ಪಂದಿಸುವಿಕೆ ಆಗಿದೆ. ಸ್ಪಂದಿಸುವಿಕೆಯು ಬೇರೆಯೊಬ್ಬರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹಾಗೂ ವಿವಿಧ ಸನ್ನಿವೇಶಗಳಲ್ಲಿ ಅವರ ಭಾವನಾತ್ಮಕ ಪ್ರತಿಕ್ರಿಯೆಗಳ ಮುನ್ಸೂಚಿಯಾಗಿದೆ.

**ಬೇರೊಬ್ಬರೊಂದಿಗೆ ಕಾಠಿಣದಿಂದಿರದೆ ಮೃದುವಾಗಿರಿ**

ಬಹಳಷ್ಟು ಜನರು ಬೇರೊಬ್ಬರು ತನ್ನದೇ ಸರಿ ಎಂದು ದೃಡವಾಗಿ ಹೇಳುವವರನ್ನು ಇಷ್ಟಪಡುವುದಿಲ್ಲ. "ನಿನ್ನದು ತಪ್ಪು, ನನ್ನದು ಸರಿ" ಎನ್ನುವ ಭಾವನೆ ಸಮರ್ಥತಾ ವಾತಾವರಣವನ್ನು ಸೃಷ್ಟಿಸುತ್ತದೆ. ಹಾಗೆಂದ ಕೂಡಲೇ ನಿಮಗೆ ಬೇರೆ ಯಾವುದೇ ಅಭಿಪ್ರಾಯಗಳು ಇರಬಾರದು ಮತ್ತು ಜೀವನದಲ್ಲಿ ಎಲ್ಲವನ್ನು ನಗುನಗುತ್ತಾ ಒಪ್ಪಿಕೊಳ್ಳಬೇಕೆಂಬುದಲ್ಲ. ಒಂದೇ ಉತ್ತರ ಸರಿಯಾದದು; ಮಿಕ್ಕವು ತಪ್ಪುಎಂಬುದೂ ಅಲ್ಲ. ಗಡುಸಾಗಿ ಪ್ರಮಾಣಿಕರಿಸುವ ಬದಲು ನೀವು ಈ ರೀತಿಯ ಪದಗುಚ್ಛಗಳನ್ನು ಬಳಸಬಹುವುದು: "ನಾನು ತಪ್ಪಿರಬಹುದು, ಆದರೆ ನನಗೆ ಅನ್ನಿಸುತ್ತದೆ...." ಅಥವಾ "ಈ ಸಮಸ್ಯೆಗೆ ಇಲ್ಲೊಂದು ದೃಷ್ಟಿಕೋನವಿದೆ."ಈ ರೀತಿ ಮಾತನಾಡುವುದರಿಂದ ನಿಮ್ಮ ಅಭಿಪ್ರಾಯಗಳು ಮೃದುತ್ವದಿಂದ ಕೂಡಿದು ಬೇರೊಬ್ಬರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಅವಕಾಶ ಮಾಡಿಕೊಡುತ್ತದೆ.

**ನಿಮ್ಮನ್ನು ನೀವು ಸರ್ವೋತ್ತಮನೆಂದು ಭಾವಿಸದೆ ಸಮಾನರೆಂದು ತೋರಿಸಿಕೊಳ್ಳಿ** "ನಾನು ಇತರರಿಗಿಂತ ಉತ್ತಮ" ಎಂಬ ಭಾವನೆಯನ್ನು ಸೃಷ್ಟಿಸಿದರೆ ಅವರಿಂದ ನೀವು ವಿರೋಧಿಸಲ್ಪಡುವಿರಿ. ನೀವು ವರಪುತ್ರ ಮತ್ತು ಬುದ್ಧಿವಂತನಾಗಿರಬಹುದು, ಆದರೆ ಅದನ್ನು ಹೇಳುವ ಅವಶ್ಯಕತೆ ಇಲ್ಲ. ಹಲವಾರು ಮಂದಿಗೆ ಬೇರೆಯವರನ್ನು ನಿರ್ವಹಿಸುವ ಜವಾಬ್ದಾರಿ ಮತ್ತು ಅಧಿಕಾರವಿದ್ದರೂ, ಅಂತಸ್ತನ್ನು ಮಧ್ಯೆ ತಂದರೆ ಹೊಂದಣಿಕೆಯ ವಾತಾವರಣವನ್ನು ಸೃಷ್ಟಿವುದಿಲ್ಲ "ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡೋಣ" ಅಥವಾ "ನಾವು ಒಪ್ಪಬಹುದಾದ ದೃಷ್ಟಿಕೋನವನ್ನು ಇಟ್ಟುಕೊಳ್ಳೋಣ" ಎಂಬ ಉಕ್ತಿಗಳನ್ನು ಉಪಯೋಗಿಸಿದರೆ ವಿರೋಧ ಮತ್ತು ಸಂಶಯ ಎಂಬ ಗೋಡೆಯನ್ನು ಕಟ್ಟುವುದನ್ನು ತಡಗಟ್ಟಬಹುದು.

**ಸೂಕ್ತ ಸಮರ್ಥನೆಯೊಂದಿಗೆ ಪದಗಳನ್ನು ಉಪಯೋಗಿಸಿ** ಸಮರ್ಥಿಸಿಕೊಳ್ಳುವುದಾದರೆ, ವಿನಂತಿಸಿಕೊಳ್ಳುವಿಕೆ, ಮಾಹಿತಿಯನ್ನು ಕೋರುವುದು,ನಿಮ್ಮ ಹಕ್ಕುಗಳನ್ನು ಎತ್ತಿ ಹಿಡಿಯುವುದು ಮತ್ತು ನಿಮ್ಮ ಜತೆಗಾರನ ಹಕ್ಕುಗಳನ್ನು ನಿರಾಕರಿಸದೆ ನಿಮ್ಮ ಉತ್ತಮ ಆಸಕ್ತಿಯನ್ನು ಮುಂದುವರಿಸಬಹುದು. ನಿಮ್ಮ ಸಮರ್ಥನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಈ ಕೆಳಕಂಡ ಐದು ಮೂಲ ಸಲಹೆಗಳನ್ನು ಪಾಲಿಸಬೇಕಾಗುತ್ತದೆ:

**ಸನ್ನಿವೇಶದಲ್ಲಿ ನೀವು ಹೇಗೆ ಕಾಣುತ್ತೀರಾ ಎಂಬುದನ್ನು ವಿವರಿಸಿ** ಉದಾಹರಣೆಗೆ, ಮೇರಿಯು ವಾರದ ಉದ್ಯೋಗಿಗಳ ಸಭೆಯಲ್ಲಿ ಜೋನ ಮುಂದಗಾಮಿತನವನ್ನು ಕಂಡು ನಿರಂತರವಾಗಿ ಜಿಗುಪ್ಸೆಗೊಳಗಾಗಿದ್ದಾಳೆ. ಅವಳು ಈ ಸಮಸ್ಯೆಯ ಬಗ್ಗೆ

ಮೊದಲು ಅವನ ನಡತೆಯನ್ನು ವಿವರಿಸುತ್ತಾ: "ನೀನು ಸಾಮಾನ್ಯವಾಗಿ ವಾರದ ಸಭೆಗಳಿಗೆ 15 ನಿಮಿಷ ತಡವಾಗಿ ಬರುವುದಾಗಿ ಗಮನಿಸಿದ್ದೇನೆ." ನಿಮ್ಮ ಸಮರ್ಥನಾ ಸಂದೇಶವನ್ನು ಅವಲೊಕಿಸುವಾಗ, ವಿಶೇಷವಾಗಿ ಧ್ವನಿಯನ್ನು ನಿಯಂತ್ರಿಸದರೆ ಅದು ಸಂವಹನ ಮೂಲಮಂತ್ರವಾಗುತ್ತದೆ. ವ್ಯಂಗ್ಯ ಮತ್ತು ಅಥವಾ ಏತ್ತರಿಸಿದ ಗಟ್ಟಿ ಧ್ವನಿಯನ್ನು ತಡೆಗಟ್ಟಿ ಸಮಾಧಾನದಿಂದ ಮತ್ತು ವಿಶ್ವಾಸ ಪೂರ್ವಕವಾಗಿ ಸಮಸ್ಯೆಯನ್ನು ವಿವರಿಸಿ.

**ನಿಮ್ಮ ಭಾವನೆಗಳನ್ನು ಹೊರಹಾಕಿ** ಸನ್ನಿವೇಶನ್ನು ನಿಮ್ಮ ದೃಷ್ಟಿಯಿಂದ ವಿನಂತಿಸಿದ ನಂತರ ಇತರ ವ್ಯಕ್ತಿಯ ನಿಮ್ಮ ಭಾವನೆಗಳನ್ನು ಅರಿಯಲು ಅವಕಾಶ ಕಲ್ಪನೆ ಭಾವನೆಗಳನ್ನು ಬಹಿರಂಗ ಪಡಿಸುವುದರಿಂದ ಸ್ಪಂಧಿಸುವಂತೆ ರೂಪುಗೊಳ್ಳುತ್ತದೆ ಮತ್ತು ಉದ್ವೇನೆಯ ಚರ್ಚೆಗಳನ್ನು ಬೇರೊಬ್ಬರಿಂದ ಅನ್ಯಾಯದ ರೀತಿಯಲ್ಲಿ ನೋಡುವುದನ್ನು ತಡೆಗಟ್ಟಬಹುದು. "ನನಗನಿಸುತ್ತದೆ ನೀನು ವಾರದ ಸಭೆಗಳನ್ನು ಗಂಭಿರವಾಗಿ ಪರಿಗಣಿಸುತ್ತಿಲ್ಲ" ಎಂದು ಹೇಳುತ್ತಾ ಮೇರಿಯು ಜೋ ಸರಿಯಾದ ಸಮಯಕ್ಕೆ ಬರಬೇಕೆಂಬ ಆಸೆಯನ್ನು ವ್ಯಕ್ತಪಡಿಸುತ್ತಾಳೆ ಬೇರೆಯವರು ಅವನ ಬಗ್ಗೆ ಏನನ್ನು ಅನ್ನುತ್ತಾರೆ ಎಂಬುದನ್ನು ಮೇರಿಯು ಹೇಳಿದ್ದನ್ನು ಗಮನಿಸಬೇಕು.

**ಪರಿಣಾಮಗಳನ್ನು ಗುರುತಿಸಿ** ನಂತರ, ಬೇರೆ ವ್ಯಕ್ತಿಗಳ ಪ್ರಭಾವ ನಿಮ್ಮ ಮೇಲೆ ಏನೆಂಬುದನ್ನು ಗುರುತಿಸಬಹುದು.

**ಶಾಂತಚಿತ್ತರಾಗಿರಿ, ನಿಧಾನಿಸಿ** ಮೊದಲ ಮೂರು ಹಂತಗಳನ್ನು ನೀವು ಅಳವಡಿಸಿಕೊಂಡ ನಂತರ ಪ್ರತಿಕ್ರಿಯೆಗಾಗಿ ನಿರೀಕ್ಷಿಸಿ. ಪುನಃ ನಿಮ್ಮ ಅಮೌಖಿಕ ಸಂಕೇತಗಳನ್ನು ನಿಯಂತ್ರಿಸಿಕೊಳ್ಳಿರಿ.

**ವಸ್ತು ವಿಷಯ ಮತ್ತು ಭಾವನೆಗಳನ್ನು ಸಂಕ್ಷಿಪ್ತಗೊಳಿಸಿ** ಬೇರೊಬ್ಬರು ಪ್ರತಿಕ್ರಿಯಿಸುವಾಗ ಸಂದೇಶದ ವಿಷಯ ಮತ್ತು ಭಾವನೆಗಳನ್ನು ಸಂಕ್ಷಿಪ್ತಗೊಳಿಸಿ. ಒಂದು ವೇಳೆ ಜೋ. "ಓಹ್ ನನ್ನನ್ನು ಕ್ಷಮಿಸಿ ನಾನು ಸಮಸ್ಯೆಯೊಂದನ್ನು ಸೃಷ್ಠಿ ಹಾಕಿರುವುದಾಗಿ ನಿನಗೆ ಮನವರಿಕೆಯಾಗಲಿಲ್ಲ. ನನಗೆ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವ ಮತ್ತೊಂದು ಸಭೆ ಇದೆ. ಹೀಗಾಗಿ ನನಗೆ ಈ ಸಭೆ ಆರಂಭವಗುವ ಹೊತ್ತಿಗೆ ಬರಲು ಕಷ್ಟವಾಗುತ್ತದೆ"ಎಂದು ಹೇಳಿದರೆ ಮೇರಿಯು "ಹಾಗದರೆ ಬೇರೆ ಸಭೆಯೊಂದಿಗೆ ಸಮಯದ ಸಂಘರ್ಷವೇ ಮುಖ್ಯ ಸಮಸ್ಯೆಯಾಗಿದೆ. ಒಂದೇ ಸಾರಿಗೆ ಎರಡನ್ನು ಪ್ರಯತ್ನಿಸಿರುದರಿಂದ ಜಿಗುಪ್ಸೆಯ ಭಾವನೆ ನಿಮ್ಮಲ್ಲಿ ಬರುತ್ತದೆ"ಎನ್ನುತ್ತಾರೆ.

## ಇತರ ಗಣನೀಯ ಅಂಶಗಳು

ಬೇರೊಬ್ಬರನ್ನು ಓಲೈಸಲು ಅಸ್ಪಸ್ಟ ಭಾಷೆಯನ್ನು ಉಪಯೋಗಿಸುವುದನ್ನು ತಪ್ಪಿಸಬೇಕು. ನಿಮ್ಮ ಸಂದೇಶಗಳನ್ನು ಚಿಕ್ಕದಾಗಿ ಮತ್ತು ಸ್ಪಷ್ಟವಾಗಿರಿಸಿ ಹಾಗೂ ಆಡು ಭಾಷೆ ಬಳಸಿ ನೀವು ಬೇರೊಂದು ಸಂಸ್ಕೃತಿಯ ವ್ಯಕ್ತಿಯೊಂದಿಗೆ ಸಂವಹನಿಸುವಾಗ, ನೀವು ನಿಮ್ಮ ಸಂದೇಶಗಳು ಅವರಿಗೆ ತಲುಪುವ ಹಾಗೆ ವಿಸ್ತೃತ ಸಂಹಿತೆಯನ್ನು ಬಳಸಬೇಕಾದ ಅಗತ್ಯವಿದೆ. ಇದರರ್ಥ, ನಿಮ್ಮ ಸಂದೇಶಗಳು ಅತೀ ಸ್ಪಷ್ಟವೂ ಹಾಗೂ ನಿಖರವಾಗಿದ್ದು ಅವು ಬೇರೆಯವರನ್ನು ಕಡೆಗಣಿಸುವಂತಿರಬಾರದು.

ಇತರರೊಂದಿಗೆ ಸಂವಹನಿಸುವಾಗ ಸಂರಕ್ಷಣಾ ವಾತಾವರಣವನ್ನು ಕಲ್ಪಿಸುವುದರ ಬದಲು ಪ್ರೋತ್ಸಾಹದಾಯಕ ಸಂವಹನ ವಾತಾವರಣವನ್ನು ಸೃಷ್ಟಿಸಿದರೆ ಭಾವನಾತ್ಮಕ ಸಂವಹನ ಕ್ರಿಯೆಗೆ ಒತ್ತುಕೊಟ್ಟಂತಾಗುತ್ತದೆ. ಆರೋಗ್ಯಕರ ಅಂತರವ್ಯಕ್ತಿ ಸಂವಹನದ

ಮೂಲ ಸಿದ್ಧಾಂತವೆಂದರೆ, ಸಕಾರಾತ್ಮಕ ಹಾಗೂ ಪ್ರೋತ್ಸಾಹದ ಮೂಲಕ ಪ್ರೀತಿ ಅಥವಾ ಇಷ್ಟವಾದ ಸಂದೇಶಗಳಿಗೆ ಪ್ರಾಮುಖ್ಯತೆ ನೀಡುವುದು. ಕಾಲಕಳೆದಂತೆ, ಪರಸ್ಪರ ಭಾಂದವ್ಯ ಮತ್ತು ಸಂವಹನ ಕ್ರಿಯೆಯ ವಿಶ್ವಾಸಾರ್ಹತೆ ಮತ್ತು ಪ್ರಭಾವನ್ನು ಬೆಳೆಸಿಕೊಳ್ಳುತ್ತದೆ. ಪರಸ್ಪರ ಅಂತರ ವ್ಯಕ್ತಿ ಭಾಂದವ್ಯವನ್ನು ಸರಿದೂಗಿಸುವಲ್ಲಿ ಹಿತಕರವಾದ ಸಂದೇಶಗಳು ಮುಖ್ಯ ಪ್ರಾತವನ್ನು ವಹಿಸುತ್ತವೆ.

## 1.10 ಮೌಖಿಕ ಸಂವಹನದ ಪ್ರಕಾರಗಳು

ವಿವಿಧ ಪ್ರಕಾರದ ಗುಂಪು ಚರ್ಚೆಗಳ ಹಾಗೂ ಅದರ ರೀತಿನೀತಿಗಳನ್ನು ಅರ್ಥಮಾಡಿಕೊಂಡಲ್ಲಿ ಅದು ಮೌಖಿಕ ಸಂವಹನದ ಸಾಧನವಾಗಿರುತ್ತದೆ:

1.ಸಾಂಪ್ರದಾಯಿಕ ಮಾತುಕತೆಯಲ್ಲಿ ಚರ್ಚೆ ಸರ್ವೆಸಾಮನ್ಯ:

"ನಾನು ನನ್ನ ಅಭಿಪ್ರಾಯವನ್ನು ಪ್ರಚುರಪಡಿಸಿದ್ದೇನೆ. ನೀವು ನಿಮ್ಮದನ್ನು ಮುಂದಿಡಿ ಮತ್ತು ನಾವು ಒಬ್ಬರನ್ನೊಬ್ಬರು ಉರುಳಿಸಲು ಪ್ರಯತ್ನಿಸೋಣ". ಇದು ಅರ್ಥಪೂರ್ಣ ಸಂವಾದ ಬೇಕಾದಲ್ಲಿ ಅನುಚಿತ ಶೈಲಿಯಾಗಿದೆ. ರಚನಾತ್ಮಕ ಸಂವಹನವು ಉಪಯುಕ್ತ ಮಾತುಕತೆ ಹಾಗೂ ಕೌಶಲ್ಯ ಪೂರ್ಣ ಸಂವಾದವಾಗಿದ್ದು ಹೊಸ ಒಳನೋಟಗಳನ್ನು, ಆರೋಗ್ಯಕರ "ಕೊಡು ಹಾಗೂ ಕೊಳ್ಳುವಿಕೆ" ಯ ಮೂಲಕ ಹುಟ್ಟುಹಾಕುತ್ತದೆ.

2. ಸಂವಹನವು ನಿರ್ಧಾರಗಳು ಮತ್ತು ಕ್ರಿಯೆಗಳನ್ನು ಸ್ಪುಟವಾಗಿ ತೋರಿಸುತ್ತವೆ. ನಾನು ನನ್ನ ಅಭಿಪ್ರಾಯವನ್ನು ಪುನಃ ನೋಡಲು ಇಚ್ಚಿಸುತ್ತೇನೆ ಎಂಬ ಭಾವನೆ ಉಳಿಯುತ್ತದೆ. ಬೇರೆಯವರ ಅನಿಸಿಕೆಗಳನ್ನು ಕೇಳಲು ಅವಕಾಶವಿದ್ದು ವಾಸ್ತವಾಂಶ ಮತ್ತು ಅಭಿಪ್ರಾಯಗಳನ್ನು ವಿನಿಮಯ ಮಾಡಲು ಅವಕಾಶವಿದೆ. ಮಾತುಕತೆಯ ಅಳತೆಗೋಲಿನಲ್ಲಿ ವಿನಂಮ್ರತ ಸಂವಾದವು ಕೌಶಲ್ಯಪೂರ್ಣ ಸಂವಾದಕ್ಕಿಂತ ಭಿನ್ನವಾಗಿದೆ.ವಿನಂಮ್ರತಾ ಸಂವಾದವು ವಾಸ್ತವಿಕತೆಯಲ್ಲಿ ತೆರೆಯ ಮರೆಯಲ್ಲಿರುವ ಚರ್ಚೆ ಸಂಘರ್ಷ, ವಿವಾದ ಮತ್ತು ಕ್ಲಿಷ್ಟಕರ ಸನ್ನಿವೇಶಗಳನ್ನು ಗೌಪ್ಯವಾಗಿರಿಸಿಕೊಂಡು ಮಾಡುವಂತಹ ಚರ್ಚೆಯೇ ವಿನಂಮ್ರತಾ ಚರ್ಚೆ. ವಿನಂಮ್ರತಾ ಚರ್ಚೆಯು ಏನಾದರೂ ಆಗಿರಬಹುದು. ಆದರೆ ಅದು ಅಗೋಚರ ಕಾರ್ಯಸೂಚಿ, ವಠಾರ ಮಾತುಕತೆ ,ಗುಪ್ತ ಪ್ರಚಾರ, ಬೇರ್ಪಡಿಸುವಿಕೆ, ಕೈಚಳಕಮಾಡುವುದು, ಗುಂಪುಗಾರಿಕೆ ಮತ್ತು ಸೂಕ್ಷವಾದ ಸ್ಪರ್ಧೇಯ ಕಗ್ಗಂಟಾಗಿದೆ.

3. ಮಾತುಕತೆಯು ಭಾವನೆಗಳ ಧಾರಕಾರವಾದ ವಿನಿಮಯವನ್ನು ಪ್ರೋತ್ಸಾಹಿಸಲು ವಿನ್ಯಾಸಗೊಂಡಿದ್ದು ಮುಕ್ತ, ಸಮಾನ ಮತ್ತು ಸಹಯೋಗಿ ಸಂವಹನ ವಾತಾವರಣವನ್ನು ಸೃಷ್ಟಿಸುತ್ತದೆ. ಮಾತಿನಲ್ಲಿ ಏಕೆ ಎನ್ನುವ ವಿಚಾರಗಳನ್ನು ನೈಜನಾತ್ಮಕವಾಗಿ ವಿಶೇಷಿಸಿ ಹಲವಾರು ದೃಷ್ಟಿಕೋನ ಹೊರಹೊಮ್ಮಿಸುತ್ತದೆ.

## 1.11 ಉತ್ತಮ ಮೌಖಿಕ ಸಂವಹನ

ಮೌಖಿಕ ಸಂವಹನವು ಪದಗಳು, ಶಬ್ಧ ಭಂಡಾರ, ಸಂಖ್ಯೆಗಳು ಮತ್ತು ಸಂಕೇತಗಳನ್ನು ಒಳಗೊಂಡಿದ್ದುಅದನ್ನು ವ್ಯಾಕಗಳಲ್ಲಿ ಸಂರಚಿಸಿ ಭಾಷೆಯ ಮೂಲಕ ವ್ಯಕ್ತಪಡಿಸಬೇಕಾಗುತ್ತದೆ ಭಾಷಾ ವಿಜ್ಞಾನಿಯ ಪರಿಣಿತಿಯ ಕೌಶಲ್ಯಗಳು ಕೆಲವೇ ಮಂದಿಗೆ ಮೀಸಲಾಗಿರದೆ ಅದು ಪ್ರತಿಯೊಬ್ಬರಿಗೂ ಸಂಬಂಧಗಳು ಮತ್ತು ಮೈತ್ರಿಗಳನ್ನು ಉತ್ತಮಪಡಿಸಲು ರೂಪಿಸಬೇಕಾಗುತ್ತದೆ. ಪ್ರತಿಯೊಬ್ಬರ ಮೆದುಳು ಯಾವಾಗಲೂ ವಿಚಾರ ಲಹರಿಗಳಿಂದ ಕೂಡಿದೆ ಮತ್ತು ಅವುಗಳ ಮೂಲಕ ಪದಗಳಿಂದ ತುಂಬಿದೆ. ಮಾತನಾಡುವ ಪದಗಳು. ಕೇಳುವ ಅಥವಾ ಬರಹದ ಮೂಲಕ ಬರುವ ಪದಗಳು ನಿಮ್ಮ ಮತ್ತು ಇತರರ ಜೀವನವನ್ನು ಪ್ರಭಾವಮಾಡಬಲ್ಲದು. ಅವು ಭಾವಾವೇಶಗಳು ಸೃಷ್ಟಿಸುವ ಶಕ್ತಿಯನ್ನು ಹೊಂದಿದೆ ಮತ್ತು ಜನರನ್ನು ಕಾರ್ಯೋನ್ಮುಖರನ್ನಾಗಿ ಮಾಡುತ್ತದೆ. ಮೌಖಿಕ ಸಂವಹನವು ನಿಖರವಾಗಿ ಮಾತ್ತು ಸ್ಪಷ್ಟವಾಗಿ ಹೇಳಿದ್ದಾಗ ನೀವು ಮನಸ್ಸನ್ನು ಸಕ್ರಿಯಗೊಳಿಸುತ್ತಾ ಹಾಗೂ ಸ್ವಜನಶೀಲತೆಯನ್ನು ಪ್ರೋತ್ಸಾಹಿಸುತ್ತಿರಿ.

ನೀವು ನಿಮ್ಮ ವಸ್ತುವಾಂಶವನ್ನು ಕಣ್ಣುಗಳು, ಕಿವಿಗಳು ಮತ್ತು ಭಾವನೆಯಿಂದ ಇಂದ್ರಿಯಗಳ ಮೂಲಕ ಸೃಷ್ಟಿಸಿ ಮತ್ತು ಪದಗಳ ಮತ್ತು ಸಂಕೇತಗಳನ್ನು ಭಾಷೆಯನ್ನು ಹುಟ್ಟುಹಾಕಲು ಬಳಸುತ್ತೀರಾ. ಇದಕ್ಕಾಗಿ ನೀವು ಮಾಹಿತಿಪೂರ್ಣ ವಿಚಾರಗಳನ್ನು ಓದಿ ಮತ್ತು ನೋಡಲು ಉತ್ಸುಕರಾಗುವಿರಿ. ಪ್ರೇರಣಾತ್ಮಕರ ತರಂಗಗಳು ಅಥವಾ ಸಂದೇಶಗಳನ್ನು ನಿಮ್ಮ ಕಾರ್ಯದ ಹಾದಿ ಅಥಾವಾ ಉದ್ದೇಶಕ್ಕೆ ಅನುಗುಣವಾಗಿ ಬಳಸಿದಾಗ ಸಕರಾತ್ಮಕ್ಕೆ ಮತ್ತು ಉತ್ತೇಜನಕಾರಿ ಮೌಖಿಕ ಅಥವಾ ಲಿಖಿತ ಸಂದೇಶಗಳು ಪ್ರೇರೇಪಿಸಿ ಸ್ಫೂರ್ತಿ ನೀಡುತ್ತವೆ.

## 1.12 ಮೌಖಿಕ ಸಂವಹನದ ಗುಣವರ್ಧನೆ

ಸೀಮಿತ ನಂಬಿಕೆಗಳಿಗೆ ಸವಾಲ್ಲೊಡುವ ಸಕಾರತ್ಮಕ ಪದಗಳ ಬಳಕೆ. ಮೌಖಿಕ ಸಂವಹನವು ಸ್ಪಷ್ಟವಾದ ಮತ್ತು ಸಕಾರಾತ್ಮಕ ಪದಗಳ ಜೋಡನೆಯನ್ನು ಹೊಂದಿದೆ. ನೀವು ಕೊಡುವಂತಹ ನಿಮ್ಮ ಪದಗಳು ಮತ್ತು ವಿವರಣೆಗಳು ವಿಚಾರ ಲಹರಿಗೆ ಬೀರಿ ಪ್ರಭಾವ ಮತ್ತು ಭಾವನೆಗಳನ್ನು ದೃಢೀಕರಿಸುತ್ತದೆ. ಪ್ರಶ್ನೆಗಳನ್ನು ಒಳಗೊಡಂತಹ ಮೌಖಿಕ ಸಂವಹನವು ನಂಬಿಕೆಗಳಿಗೆ ಸವಾಲೊಡ್ಡಲು ಸಹಕರಿಸುತ್ತದೆ.

ಮೈಕಲ್ ಹಾಲ್ ಪ್ರಕಾರ ನಂಬಿಕೆ ಎಂದರೆ ಒಂದು ಅಲೋಚನೆಯಾಗಿದ್ದು ಅದನ್ನು ನೀವು "ಹೌದು" ಎಂದಿರುವಿರಿ ಮತ್ತು "ನಾನು ಇದನ್ನು ನಂಬುತ್ತೇನೆ" ಎಂದು ಹೇಳಿ ಅದನ್ನು ಖಚಿತ ಪಡಿಸುತ್ತಿದ್ದೀರಿ. ಇದನ್ನು ನೀವು ಸಂಪೂರ್ಣವಾಗಿ ಒಪ್ಪಿಕೊಳ್ಳುವ ಮೊದಲು ನಿರ್ದಿಷ್ಟವಾಗಿ ರಚಿಸಿದ ಪದಗಳಿಂದ ಪ್ರಶ್ನಿಸುತ್ತೀರಿ.

ಇತರರಿಗೆ ನಿಮ್ಮ ಸಂದೇಶವನ್ನು ಅರ್ಥೈಸುವ ಮಾರ್ಗಗಳಲ್ಲಿ ಒಂದು ಯಾವುದೆಂದರೆ ಕಥೆ ಹೇಳುವುದು, ಹೇಳಿಕೆಗಳನ್ನು ಓದುವುದು ಅಥವಾ ನಗೆಹನಿಯನ್ನು ಹೇಳುವುದು. ಕಥೆಗಳ ಮೂಲಕ ಮಾಡಿದ ಮೌಖಿಕ ಸಂವಹನವು ಪ್ರಭಾವಶಾಲಿಯಾಗಿದ್ದು ನಿಮ್ಮ ಹೇಳಿಕೆ ಅಥವಾ ಸಲಹೆಗಳನ್ನು ಕೇಳುಗನು ತನಗೆ ಸಂಬಂಧಪಟ್ಟಿದೆ ಎಂದುಕೊಳ್ಳಲು ಪ್ರೇರೇಪಿಸುತ್ತದೆ. ನಗೆಹನಿಯು ಸಾಮಾನ್ಯವಾಗಿ ಜನರು ವಿರಮಿಸಲು ಸಹಕಾರಿಯಾಗಿದ್ದು ಅವರು ನಿಮ್ಮನ್ನು ಕೇಳುವಂತೆ ಮಾಡುತ್ತದೆ.

ನೀವು ಕಥೆ ಹೇಳುವಂತಹ ರೀತಿಯು ಕೇಳುಗನ ಅಲೋಚನೆ, ಭಾವನೆಗಳು ಮತ್ತು ವರ್ತನೆಯ ಮೇಲೆ ಪರಿಣಾಮ ಬೀರುತ್ತದೆ. ಅವನು ಅನುಭವವನ್ನು ಕಲ್ಪಿಸಕೊಂಡು ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ, ನಿರರ್ಗಳವಾಗಿ ಹೇಳಿದ ಕಥೆಯು ಉತ್ತೇಜನವನ್ನು ನಿರೀಕ್ಷಿಸುತ್ತಿರುವ ಜನರಿಗೆ ಆಶಾಭಾವನೆ ಮೂಡಿಸುತ್ತದೆ. *ಸರಿಯಾದ ಪ್ರಶ್ನೆಗಳನ್ನು ಕೇಳುವಿಕೆ. ನಿಕೃಷ್ಟ ಪದಗಳಿಂದ ನಿಮ್ಮನ್ನು ಅಥವಾ ಬೇರೆಯವವರನ್ನು ಪ್ರಶ್ನಿಸಿದರೆ ಉತ್ತರಗಳಿಗೆ ಅನುವು ಮಾಡಿಕೊಡುತ್ತದೆ "ಏಕೆ ಅಥವಾ ಹೇಗೆ" ಪ್ರಶ್ನೆಗಳನ್ನು ನೀವು ಕೇಳಿದರೆ ಅದೇ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಮೊದಲನೆಯ ಪದವು ನಿಮಗೆ ಅನೇಕ ಕಾರಣಗಳು, ಅರ್ಥಗಳು ಮತ್ತು ವಿವರಗಳನ್ನು ನೀಡುತ್ತದೆ. ಎರಡನೆಯ ಪದವು ನಿಮ್ಮ ಮೆದುಳನ್ನು ಮಾರ್ಗೋಪಾಯ, ಉಪಯುಕ್ತ ಮಾಹಿತಿ ಮತ್ತು ಧೋರಣೆಗಾಗಿ ಸಿದ್ಧಗೊಳಿಸುತ್ತದೆ. ನಿರ್ದಿಷ್ಟ ಪದಗಳಿಂದ ಕೂಡಿದ ಪ್ರಶ್ನೆಗಳು ಸಕಾರಾತ್ಮಕ ಚರ್ಚೆ ಮತ್ತು ವಿನಿಮಯವನ್ನು ಆಹ್ವಾನಿಸಿ ಎಲ್ಲರಿಗೂ ಸಹಕಾರಿಯಾಗುತ್ತದೆ. ನೀವು ಉತ್ತಮ ಕೇಳುಗರಾಗಿ ಇತರರನ್ನು ಸಹ ಅದೇ ರೀತಿಯಾಗುವಂತೆ ಮನವೊಲಿಸುತ್ತೀರಿ ನೀವು ನಿಮ್ಮ ಭಾಷಾ ಪ್ರೌಢಿಮೆ ಮತ್ತು ಹಿಡಿತದಿಂದ ಸಂವಹನಿಸಿದರೆ ಅನಾವಶ್ಯಕ ವಾದವಿವಾದ ಕಡಿಮೆಯಾಗುತ್ತದೆ. ನೀವು ಮಾತನಾಡುವ ಮೊದಲು ಯೋಚಿಸಿ ಮತ್ತು ತಯಾರಾಗಿರಿ.

ನೀವು ಸಾರ್ವಜನಿಕರೊಡನೆ, ಮೇಲಾಧಿಕಾರಿಯೊಡನೆ, ಸಂಗಾತಿಯೊಡನೆ ಅಥವಾ ಮಕ್ಕಳೊಂದಿಗೆ ಮಾತನಾಡುವ ಮೊದಲು ಆ ಪದಗಳ ಬಗ್ಗೆ ಆಲೋಚಿಸಬೇಕು. ಆಲೋಚಿಸದೆ ಮಾತನಾಡಿದಲ್ಲಿ ಮೌಖಿಕ ದುರುಪಯೊಗ ಉಂಟಾಗಿ ನಿಮ್ಮ ಭಾವನೆಗಳ ಮೇಲುಗೈಯಾಗುತ್ತದೆ.

ನೀವು ಮಾತಾನಾಡುವ ಮೊದಲು ನಿಮ್ಮ ವಿಚಾರ ಲಹರಿಯನ್ನು ಮನಸ್ಸಿನ್ನಲ್ಲೇ ಅಥವಾ ಬರವಣಿಗೆಯಲ್ಲಿ ಪ್ರಕಟಿಸಿ.ಇದು ನಿಮ್ಮನ್ನು ಯಾವೂದೇ ವಿರೋಧಗಳನ್ನು ತಡೆಯಲು ಸಹಕಾರಿಯಾಗುತ್ತದೆ. ಆಲೋಚನೆ, ತಯಾರಿ ಮತ್ತು ಕಲ್ಪನೆಗಳು ನಿಮ್ಮ ಮನಸ್ಸನ್ನು ಸರಿಪಡಿಸಲು ಅನುವುಮಾಡಿಕೊಳ್ಳುತ್ತದೆ.

ಮಾತನಾಡುವಾಗ ಮೌಖಿಕ ನಿಲುಗಡೆ (verbal pause) ಅಥವಾ, ಸೋಸಿದ ಭಾವನೆಗಳನ್ನು(filter expressions) ವ್ಯಕ್ತಪಡಿಸುವ ಬಳಕೆಯನ್ನು ಕಡಿಮೆಗೊಳಿಸಿ. ನೀವು ಯಾವಾಗಲಾದರೂ ಹೇಗೆ ನೀವು ಮಾತನಾಡಬೇಕೆಂಬುದನ್ನು ಪಟ್ಟಿ ಮಾಡಿದ್ದೀರಾ ಹಾಗೂ ಮಾತುಕತೆಯನ್ನು ಹೇಗೆ ನಿರ್ವಹಿಸದ್ದೀರಿ?, ನೀವು ಮಾಡಿರದಿದ್ದರೆ ಮತ್ತು ಗೊತ್ತಿಲ್ಲದಿದ್ದರೆ ಬೇರೆಯವರಿಗೆ ಹಾಗೆ ಮಾಡಲು ವಿನಂತಿಸಿ. ಎಷ್ಟು ಸಾರಿ ನೀವು ನಿಮ್ಮ ವಾಕ್ಯಗಳನ್ನು ನಿಲ್ಲಿಸಿದ್ದೀರಿ ಮತ್ತು "ಆಹ್" "ಹೂಂ", "ಓಹ್" ಎಂದು ಹೇಳಿದ್ದೀರಾ. ನಿಮ್ಮ ಮೌಖಿಕ ಸಂವಹನವನ್ನು ಧ್ವನಿಸುರುಳಿ ಅಥವಾ ಇತರ ಮಾಧ್ಯಮದ ಮೂಲಕ ದಾಖಲಾಯಿಸಿ ನೀವು ಮಾತನಾಡುವ ಶೈಲಿಯನ್ನು ಪುನಃ ಕೇಳಿರಿ.

ನೀವು ಏನನ್ನಾದರೂ ಮಾತನಾಡುವಾಗ ಬಹಳಷ್ಟು ವಿಚಾರಗಳು ನಿಮ್ಮ ಕೇಳುಗರಿಗೆ ಕಿರಿಕಿರಿ ಮಾಡಬಹುದು ಅಥವಾ ಅದು ಒಂದು ರೀತಿಯ ಸುಲಭವಾಗಿ ಗ್ರಹಿಸಲು ಸಾಧ್ಯವಾಗದ ಅಥವಾ ಅನಿಶ್ಚತೆಯಿಂದ ಕೂಡಿರುವ ಹಾಗೆ ಕೇಳುಗರಿಗೆ ಅನಿಸಬಹುದು.ಅನಗತ್ಯವಾದ ಮೌಖಿಕ ಸಂಕೇತಗಳನ್ನು ಕಡಿಮೆ ಮಾಡುವ ದೃಷ್ಠಿಯಿಂದ ನಿಮಗೆ ನೀವೇ ಕೇಳಿರಿ ಮತ್ತು ಅದರ ಅರಿವು ನಿಮಗಾಗಲಿ. ನಂತರ, ಅದೇ ಸಮಸ್ಯೆ ಬರುತ್ತಿರುವುದ್ದನ್ನು ನೀವು ಮನಗಂಡಾಗ ನೀವಾಗಿಯೇ ಕೇವಲ ಕೆಲ ಕ್ಷಣಗಳ ನಿಲುಗಡೆ ಮಾಡಿ.

ಕ್ಲಿಷ್ಟ ಭಾಷೆಯ ಪ್ರಯೋಗ ಕಡಿಮೆ ಮಾಡಿ. ನಿಮ್ಮ ಅನುಭವ, ವಿಚಾರ ಲಹರಿ ಅಥವಾ ವಿಷಯಗಳು ನಿಖರವಾಗಿ ವಿವರಿಸುವಂತೆ ಮಾತನಾಡುವುದಾಗಲಿ ಅಥವಾ ಬರೆಯುವುದಾಗಲೀ ಮಾಡಬೇಕು. ನೀವು ಏನನ್ನು ಹೇಳಲು ಪ್ರಯತ್ನಿಸುತ್ತಿದ್ದೀರೆಂದು ಜನರು ಭಾವಿಸಲು ಮತ್ತು ಊಹಿಸುವುದನ್ನು ಮನನಮಾಡಿ.

ಮಾತನಾಡುವಾಗ ಯಾವಾಗಲೂ ಇಲ್ಲವೇ ಇಲ್ಲ , ಅಥವಾ ಎಲ್ಲಾ ರೀತಿಯ ಪದಗಳನ್ನು ಕಡಿಮೆ ಮಾಡಿ ಸ್ಪಷ್ಟವಾಗಿ ತಿಳಿಸಿ. ನೀವು ನಿಮ್ಮ ಸಂಗಾತಿಗೆ ಅವನು ಯಾವಾಗಲೂ ತಡವಾಗಿ ಬರುತ್ತಾನೆಂದು, ಅವರು ಕೇವಲ ಎರಡು ಸಲ ತಡಮಾಡಿದ್ದಕ್ಕೆ ಹೇಳಿದರೆ, ನೀವು ಜಗಳವಾಡಲು ಕಾರಣರಾಗುತ್ತೀರಿ.

ತಂದೆ ತಾಯಿಂದಿರು ಅವರ ಮಕ್ಕಳನ್ನು ಕುರಿತು ಈ ಎಲ್ಲಾ ರೀತಿಯ ಹೇಳಿಕೆಗಳನ್ನು ಮಾಡುತ್ತಾರೆ: "ನೀನು ನಿನ್ನ ತಂಗಿಗಿಂತ ಕೆಟ್ಟವನ್ನಾಗಿದ್ದೀಯಾ, ಏನಾಯಿತು ಮತ್ತೆ". ಅದು ಪ್ರತಿರೋಧವನ್ನು ಮತ್ತು ಸೆಡ್ಡು ಹೊಡೆಯುವ ಸ್ವಭಾವನ್ನು ಹುಟ್ಟುಹಾಕುತ್ತದೆ. "ಯಾವಾಗಲಾದರೂ ಪದಗಳನ್ನು ಬಳಸಿ ನಾವು ಭಾಷೆಯನ್ನು ಉಪಯೋಗಿಸುವುದಿದ್ದರೆ, ನಾವು ಯಾವಾಗಲೂ

ಏನಾದರೊಂದನ್ನು ಮಾಡುತ್ತೇವೆ.ನಮ್ಮ ಪದಗಳು, ವಾಕ್ಯಗಳು, ಸಂರಚನೆ ಮುಂತಾದವು ಯಾವಾಗಲೂ ನಿರ್ದಿಷ್ಟ ವಿಷಯಗಳನ್ನು ಸೂಚಿಸುತ್ತವೆ ಹಾಗೂ ಅದನ್ನು ಸಾಧಿಸುತ್ತವೆ".

## 1.13 ಸಾರಾಂಶ

ಸಂವಹನವು ಪ್ರಸಾರಗಳು, ವಾಸ್ತವಾಂಶಗಳು, ಅಭಿಪ್ರಾಯಗಳು ಮತ್ತು ಕೇಳುಗನು ಇನ್ನೊಬ್ಬರೊಂದಿಗೆ ಸಂದೇಶದ ಅರ್ಥವನ್ನು ಮತ್ತು ಮನವರಿಕೆಯನ್ನು ವಿನಿಯೊಗಿಸುವ ರೀತಿಯನ್ನು ಒಳಗೊಂಡ ಪ್ರಕ್ರಿಯೆಯಾಗಿದೆ.

ವಾಹಕ ಅಥವಾ ಸಂವಹನಕಾರ ಅಥವಾ ಸಂದೇಶವನ್ನು ಕಳುಹಿಸುವವನು ಯಾವಾಗ ಮತ್ತು ಏನನ್ನು ಸಂವಹನಿಸಬೇಕೆಂಬುದನ್ನು ಆಯ್ಕೆ ಮಾಡಬೇಕು ಮತ್ತು ವರ್ಗಾವಣೆ ಮಾಧ್ಯಮವನ್ನು ನಿರ್ಣಯಿಸಬೇಕು. ಕೇಳುಗರು ಸಂದೇಶ ಪಡೆದು ಅರ್ಥೈಸಿಕೊಂಡು, ಸರಿಯಾಗಿ ಮನಗೊಂಡು ಅದಕ್ಕೆ ಪ್ರತಿಕ್ರಿಯಿಸುತ್ತಾರೆ. ಸಂಪೂರ್ಣ ಸಂವಹನ ವರ್ತುಲದ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ಮಾನವೀಯ ಭಾಂದವ್ಯಗಳ ಪರಿಮಿತಿಯಲ್ಲಿ ಸಂವಹನದ ಹಲವಾರು ಪ್ರಕಾರಗಳಿವೆ. ಪ್ರತಿಯೊಂದು ವಿಭಿನ್ನ ಸನ್ನಿವೇಶದಲ್ಲಿ ಉಂಟಾಗುತ್ತದೆ. ಒಟ್ಟಾರೆ ಎಲ್ಲವೂ ಹಂಚಿಕೊಳ್ಳುವ ಅಂಶಗಳನ್ನು ಹೊಂದಿದರೂ ಪ್ರತಿಯೊಂದೂ ತನ್ನದೇ ಆದ ಲಕ್ಷಣಗಳನ್ನು ಹೊಂದಿದೆ.

ಯಾವುದೇ ಮಾಧ್ಯಮದ ಮೂಲಕ ಭಾಷೆಯನ್ನು ಬಳಸಿ, ಸಂದೇಶವನ್ನು ಹಂಚಿಕೊಂಡರೆ ಅದನೇ ಮೌಖಿಕ ಸಂವಹನ ಎಂದು ಪರಿಗಣಿಸಲಾಗದು. ಆದ್ದರಿಂದ ಆಡು ಮಾತು,ಲಿಖಿತ ಬರವಣಿಗೆ ಮತ್ತು ಪದಗಳ ಬಳಕೆಯು ಮೌಖಿಕ ಸಂವಹನದ ಪ್ರಕಾರಗಳಾಗಿವೆ.

ಭಾಷಣದ ಅತಿ ಮಹತ್ತರ ಅಂಶವಾದ ಭಾಷೆಯು ಒಂದು ರೀತಿಯಲ್ಲಿ ಉತ್ತಮ ಭಾಷಣಕ್ಕೆ ಕಾರಣವಾಗುತ್ತದೆ ಆದರೂ ಅದು ಭಾಷಣಕ್ಕೆ ಸಮಾನಂತರವಾಗುದಿಲ್ಲ.ಕೆಲವು ರೀತಿಯಲ್ಲಿ ಬಹಳವಾದ ಭಾಷಣದ ಧ್ವನಿಗಳು ಭಾಷೆಯನ್ನು ಆದರಿಸಲ್ಪರೂ ನಮ್ಮ ಭಾಷೆಯ– ಇಂಗ್ಲಿಷ್ ಅದು ಇತರೆ ಭಾಷೆ ಮಾತನಾಡುವವರ ಒಟ್ಟು ಧ್ವನಿಗಳು ಸರಳ ಮಿಶ್ರಣವಲ್ಲ.

ಜನರು ಹೇಗೆ ಭಾಷೆಯ ಕಲಿಕೆ ಮಾಡಿ, ತಾವು ಮಾತನಾಡುವ ಮತ್ತು ಮುದ್ರಿತ ಪದಗಳಿಗೆ ಸರಿಹೊಂದುವ ಅರ್ಥವನ್ನು ನೀಡುವ ಬಗ್ಗೆ ಹಲವಾರು ಸಿದ್ಧಾಂತಗಳಿದ್ದರೂ ಈ ರಹಸ್ಯವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಹಾಗೂ ಸಾರ್ವತ್ರಿಕವಾಗಿ ಎಲ್ಲರೂ ಒಪ್ಪುವ ಯಾವುದೇ ಒಂದು ನಿರ್ದಿಷ್ಠ ನಿಲುವು ಸಾಧ್ಯವಿಲ್ಲ.

ನೀವು ಕೇಳುವ ಮತ್ತು ಬಳುಸುವ ಪದಗಳು ಬೇರೆಯೊಬ್ಬರೊಂದಿಗೆ ನೀವು ಸಾಧಿಸಲಿಚ್ಚಿಸುವ ಸಕಾರಾತ್ಮಕ ಭಾಂದವ್ಯ ಅಥವಾ ಗುಣಮಟ್ಟವನ್ನು ರೂಪಿಸುತ್ತದೆ. ಲೇಖಕ ಮತ್ತು ಸಂಶೋಧಕರಾದ ಡ್ಯಾನಿಯಲ್ ಎಂಕೆಲ್ಲೋಂವಿಚ್ ಸೂಚಿಸುವ ಹಾಗೆ ನಾವು ಇತರರೊಂದಿಗೆ ಮಾತುಕತೆ ನೆಡೆಸುವುದು ಅವರೊಂದಿಗೆ ಅಪ್ಪಟ ಸಂಭಾಷಣೆ ಸಾದಿಸುವುದಷ್ಟೇ ಮುಖ್ಯವಾಗಿದೆಯೇ ಹೊರತು ಯಾವುದೇ ವಿಷಯ ಕುರಿತು ಎದುರಾಳಿಯೊಂದಿಗೆ ವಾಕ್ ಬಲ ಪ್ರದರ್ಶನ ನಡೆಸುವ ಕುಸ್ತಿಯಲ್ಲ.

ಸೀಮಿತ ನಂಬಿಕೆಗಳಿಗೆ ಸವಾಲೊಡ್ಡುವ ಸಕಾರತ್ಮಕ ಪದಗಳ ಬಳಕೆ. ಮೌಖಿಕ ಸಂವಹನವು ಸ್ಪಷ್ಟವಾದ ಮತ್ತು ಸಕಾರಾತ್ಮಕ ಪದಗಳ ಜೋಡನೆಯನ್ನು ಹೊಂದಿದೆ. ನೀವು ಕೊಡುವಂತಹ ನಿಮ್ಮ ಪದಗಳು ಮತ್ತು ವಿವರಣೆಗಳು ವಿಚಾರ ಲಹರಿಗೆ ಬೀರಿ ಪ್ರಭಾವ ಮತ್ತು ಭಾವನೆಗಳನ್ನು ದೃಡೀಕರಿಸುತ್ತದೆ

## 1.14 ನಿಮ್ಮ ಪ್ರಗತಿ ಪರಿಶೀಲನೆ

1. ಸಂವಹನದ ಅಂಶಗಳನ್ನು ಚರ್ಚಿಸಿ
2. ಮೌಖಿಕ ಸಂವಹನದಲ್ಲಿ ಪದಗಳ ಬಳಕೆಯ ಕುರಿತು ಟಿಪ್ಪಣಿ ಬರೆಯಿರಿ
3. ಉತ್ತಮ ಮೌಖಿಕ ಸಂವಹನ ಕುರಿತು ವಿಸ್ತರಿಸಿ ಬರೆಯಿರಿ
4. ಅಮೌಖಿಕ ಸಂವಹನದ ಗುಣಲಕ್ಷಣಗಳಾವುವು?

## 1.15 ಹೆಚ್ಚಿನ ಓದಿಗಾಗಿ


1. Ronald B Adler, George Rooman (2006), *Understanding Human Communication,* Oxford University Press, Inc.
2. Steven A Beebe, Susan J Beebe, Mark V Redmond (2005), *Interpersonal Communication Relating to Others,* Pearson Education, Inc.
3. Michael Burgoon, Frank G Hunsaker, Edwin J Dawson (1994), *Human Communication,* Sage Publications.
4. Andal N, *Communication Theories and Models* (1998), Himalaya Publishing House.

## ಟಿಪ್ಪಣಿ

# ಘಟಕ – 2 : ಪರಿಣಾಮಕಾರಿ ಸಾರ್ವಜನಿಕ ಭಾಷಣ ಕಲೆ

ರಚನೆ


2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಸಾರ್ವಜನಿಕ ಭಾಷಣ ಕಲೆಯ ಗುಣಲಕ್ಷಣಗಳು

2.3 ಅಂಗರಚನೆ

2.4 ಆರಂಭ ಪ್ರಕ್ರಿಯೆ

2.5 ನಿರೂಪಣಾ ವಿಧಾನಗಳು

2.6 ಭಾಷಣ ನೀಡುವ ಆತ್ಮವಿಶ್ವಾಸ

2.7 ಸಾರ್ವಜನಿಕ ಭಾಷಣದಲ್ಲಿ ಭಾಷೆ

2.8 ಮಾಹಿತಿ ಪೂರಕ ಭಾಷಣ

2.9 ಮನವೊಲಿಕಾ ಭಾಷಣ

2.10 ಅಂಜಿಕೆ ಎದುರಿಸುವಿಕೆ

2.11 ಸಾರ್ವಜನಿಕ ಭಾಷಣದ ನೈತಿಕ ಹೊಣೆಗಾರಿಕೆಗಳು

2.12 ಸಾರಾಂಶ

2.12 ನಿಮ್ಮ ಪ್ರಗತಿ ಪರಿಶೀಲನೆ

2.13 ಹೆಚ್ಚಿನ ಓದಿಗಾಗಿ

## 2.0 ಉದ್ದೇಶಗಳು

ಸಾರ್ವಜನಿಕರು ಯಾವುದೇ ವಿಷಯ ನಿರ್ಣಯಿಸುವ ಪ್ರಕ್ರಿಯೆಯಲ್ಲಿ ಅಭಿಪ್ರಾಯ ಮುಖಂಡರು ಗುರುತರ ಪ್ರಭಾವವನ್ನು ಬೀರುತ್ತಾ ಬಂದಿದ್ದಾರೆ. ಈ ದೇಶವನ್ನು ಅಭಿವೃದ್ಧಿ ಪಥದಲ್ಲಿ ನಡೆಸುವಾಗ ಎದುರಾಗುವ ಯಾವುದೇ ತಪ್ಪು ಕಲ್ಪನೆಯ ವಿರುದ್ಧ ಹೋರಾಡುವಲ್ಲಿ ಇವರ ಪಾತ್ರ ಮಹತ್ತರವಾಗಿದೆ. ಅವರು ತಮ್ಮ ಪ್ರಭಾವಿ ಭಾಷಣ ಕಲೆಯಿಂದಾಗಿ ಜನಸ್ತೋಮವನ್ನು ತಲುಪಲು ಸಾಧ್ಯವಾಗಿದೆ. ಹೆಚ್ಚಿನ ಸಂಖ್ಯೆಯ ಜನರನ್ನು ಕುರಿತಾಗಲಿ ಅಥವಾ ತಾವು ಇಷ್ಟಪಡುವ ಯಾವುದೇ ಕೆಲಸದಲ್ಲಿ ಜನರನ್ನು ಪ್ರೇರೇಪಿಸಲು ಎಲ್ಲರಿಂದಲೂ ಸಾಧ್ಯವಾಗುವುದಿಲ್ಲ. ಅದನ್ನು ಪ್ರಭಾವಶಾಲಿಯಾಗಿ ಕರಗತವಾಗಬಲ್ಲ ಕಲೆಯನ್ನಾಗಿ ರೂಪಿಸಬೇಕಿದೆ.

ಈ ಘಟಕವು ನಿಮಗೆ ತಿಳುವಳಿಕೆ ನೀಡುವ ವಿಚಾರವೆಂದರೆ :

- ಸಾರ್ವಜನಿಕ ಭಾಷಣದ ಗುಣಲಕ್ಷಣಗಳು
- ಸಾರ್ವಜನಿಕ ಭಾಷಣದ ಅಂಗರಚನೆಗಳು
- ಭಾಷಣ ನೀಡುವಲ್ಲಿ ಆತ್ಮವಿಶ್ವಾಸ ಪ್ರದರ್ಶಿಸುವುದು
- ಸಾರ್ವಜನಿಕ ಭಾಷಣದ ನೈತಿಕ ಹೊಣೆಗಾರಿಕೆಗಳು

## 2.1 ಪ್ರಸ್ತಾವನೆ

ನೀವು ಹಲವಾರು ಸನ್ನಿವೇಶದಲ್ಲಿ ಕೆಲವು ಮಂದಿ ಸಾರ್ವಜನಿಕ ಭಾಷಣಕಾರರಿಗೆ ಪ್ರೇಕ್ಷಕರಾಗಿರಬಹುದು. ಅವರಲ್ಲಿ ಎಷ್ಟು ಮಂದಿ ತಾತ್ಕಾಲಿಕವಾಗಿ ಅಥವಾ ಖಾಯಮ್ಮಾಗಿ ನಮ್ಮ ಮೇಲೆ ಪ್ರಭಾವ ಬೀರಿದ್ದಾರೆಂದು ನೀವು ಭಾವಿಸುತ್ತೀರಾ ? ಕೇವಲ ಕೆಲವು ಮಂದಿ ಮಾತ್ರ ಪ್ರೇಕ್ಷಕರ ಗಮನ ಸೆಳೆಯುವ ಮತ್ತು ತಾವು ನಂಬಿರುವ ವಿಷಯದತ್ತ ಮನವೊಲಿಸುವ ಸಾಮರ್ಥ್ಯ ಹೊಂದಿದವರಾಗಿದ್ದಾರೆ.

ಸಾರ್ವಜನಿಕ ಭಾಷಣವೆಂಬುದು, ಸಂವಹನ ಪ್ರಕ್ರಿಯೆಯಾಗಿದ್ದು ಅದು ಒಬ್ಬ ವ್ಯಕ್ತಿ ಮತ್ತು ಪ್ರೇಕ್ಷಕರ ನಡುವಿನ ಸಂವಹನ ಪ್ರಕ್ರಿಯೆಯಾಗಿದೆ. ಸಾರ್ವಜನಿಕ ಭಾಷಣ ಅಥವಾ ಸಂವಹನದಲ್ಲಿ ಏಕೈಕ ಮಾತುಗಾರನು ಒಬ್ಬರಿಂದ ಹಲವು ಸಂವಹನ ಪ್ರಕಾರದ ಮೂಲಕ ವಿಶಾಲ ಪ್ರೇಕ್ಷಕರನ್ನು ತಲುಪುತ್ತಾನೆ.

**ಸಾರ್ವಜನಿಕ ಭಾಷಣದಲ್ಲಿ ತೊಡಗುವುದು ಹೇಗೆ ?**

ಜನತಂತ್ರವು ವಿಚಾರಗಳನ್ನು ಮುಕ್ತವಾಗಿ ಪ್ರಚುರಪಡಿಸುವುದನ್ನು ಅವಲಂಬಿಸಿದೆ. ಮತದಾರರ ಅಂತಿಮ ನಿರ್ಧಾರ ಸಾರ್ವಜನಿಕ ಧೋರಣೆಯನ್ನು ಸೂಚಿಸುವ ಸರ್ಕಾರಿ ವ್ಯವಸ್ಥೆಯಾಗಿದೆ. ಸಾರ್ವಜನಿಕ ಚರ್ಚಿತ ವಿಷಯಗಳನ್ನು ಕುರಿತು ಮುಕ್ತ ಸಮಾಜದಲ್ಲಿ ನಾಗರೀಕರು ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳುವ ಹೊಣೆಗಾರಿಕೆಯನ್ನು ಇದು ಒಳಗೊಂಡಿದೆ. ಸಾರ್ವಜನಿಕ ಭಾಷಣವು ನಮಗೆ ಅಂತಹ ನಿಲುವನ್ನು ತಾಳಲು ಸಹಕರಿಸುತ್ತದೆ.

ಸಾರ್ವಜನಿಕ ಭಾಷಣ ಪರಿಣತಿಯು ನಮ್ಮ ಅನಿಸಿಕೆಗಳನ್ನು ಸ್ಪಷ್ಟಪಡಿಸುವುದು ಮತ್ತು ನಮ್ಮ ರಚನಾತ್ಮಕ ಕೌಶಲ್ಯಗಳನ್ನು ಉದ್ದೀಪನಗೊಳಿಸುವುದೇ ಆಗಿದೆ. ಸಾರ್ವಜನಿಕ ಚರ್ಚೆಯಲ್ಲಿ ಭಾಗವಹಿಸುವುದರಿಂದ ವಿವಾದಾತ್ಮಕ ವಿಚಾರಗಳನ್ನು ಅರಿಯಲು ಅನುವು ಮಾಡುತ್ತದೆ. ದೃಢತೆಯನ್ನು ಪರೀಕ್ಷಿಸಲು ಮತ್ತು ಹಲವಾರು ವಿಚಾರಗಳನ್ನು ತಿಳಿದುಕೊಳ್ಳಲು ಅದು ಪ್ರೋತ್ಸಾಹಿಸುತ್ತದೆ. ಇತರ ಸಂವಹನ ಪ್ರಕಾರದಂತೆ, ಸಾರ್ವಜನಿಕ ಭಾಷಣಗಾರಿಕೆಯು ವ್ಯವಸ್ಥಿತವಾಗಿ ಆಲೋಚಿಸುವ ಮತ್ತು ಹೆಚ್ಚಿನ ಪರಿಕಲ್ಪನೆಯನ್ನು

ಭಾವಿಸುವಂತಾಗಿದೆ.

ಒಟ್ಟಾರೆ, ಸಾರ್ವಜನಿಕ ಮಾತುಗಾರಿಕೆಯು ಅತ್ಯಂತ ವೃತ್ತಿಪರ ಮತ್ತು ಆಡಳಿತಾತ್ಮಕ ಮಟ್ಟವನ್ನು ಸೂಚಿಸುವ ಅತ್ಯಾವಶ್ಯಕ ಕೌಶಲ್ಯವಾಗಿದೆ. ವೃತ್ತಿಪರ ಮುನ್ನಡೇ ಮಾಹಿತಿಯನ್ನು ಸ್ಪಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ತಿಳಿಸುವುದು ಬಹಳ ಅಗತ್ಯವಾಗಿದೆ.

## 2.2 - ಸಾರ್ವಜನಿಕ ಭಾಷಣದ ಗುಣಲಕ್ಷಣಗಳು

ಸಾರ್ವಜನಿಕ ಭಾಷಣವು ಇತರ ಸಂವಹನ ಪ್ರಕಾರಗಳಿಗಿಂತ ಭಿನ್ನವಾಗಿದೆ. ಸಾರ್ವಜನಿಕ ಕ್ಷೇತ್ರದೊಳಗೆ ಅದು ನಡೆಯುತ್ತದೆ. ಸಾರ್ವಜನಿಕ ಭಾಷಣದ ಗುಣಲಕ್ಷಣಗಳು ಹೀಗಿವೆ :

ಸಾರ್ವಜನಿಕ ಭಾಷಣವು ಸಾಮಾನ್ಯವಾಗಿ ವಿಶಿಷ್ಟವಾಗಿದ್ದು ಮತ್ತು ಅದು ಹಲವು ಸನ್ನಿವೇಶದಲ್ಲಿ ಮುಖ್ಯ ಘಟನೆ ಅಥವಾ ಚರ್ಚಾ ವಿಷಯಗಳನ್ನು ರೂಪಿಸಲು ಸಾಧ್ಯ.

ಸಾರ್ವಜನಿಕ ಭಾಷಣವು ಹತ್ತಾರು, ನೂರಾರು ಅಥವಾ ಸಾವಿರಾರು ಜನರನ್ನು ಉದ್ದೇಶಿತ ಮಾಡಬಹುದಾಗಿದೆ. ಹೀಗಾಗಿ ಭಾಷಣಕಾರನು ದೊಡ್ಡ ಹಾಗೂ ಕೆಲವೊಮ್ಮೆ ವಿಭಿನ್ನ ವರ್ಗದ ಜನರಿಗೆ ಮನದಟ್ಟುವ ಸಂದೇಶಗಳನ್ನು ರೂಪಿಸುವ ಸವಾಲನ್ನು ಎದುರಿಸಬೇಕಾಗುತ್ತದೆ.

ಸಮಯವೆಂಬುದು ಬಹಳಷ್ಟು ಮುಖ್ಯವಾದ ಅಂಶವಾಗಿದೆ. ಸಾರ್ವಜನಿಕ ಭಾಷಣಕಾರರಿಗೆ ಯಾವುದೇ ನೀರಸ ವಿಚಾರಗಳನ್ನು ಉತ್ತಮಗೊಳಿಸಿ ನಿಧಾನವಾಗಿ ಹೇಳುವ ಲಭ್ಯತೆ ಇರುವುದಿಲ್ಲ. ಬಹುತೇಕ ಸಾರ್ವಜನಿಕ ಭಾಷಣಗಳು ಭಾಷಣಗಾರರಿಗೆ ಒಂದೇ ಬಾರಿ ದೊರೆಯುವ ಅವಕಾಶಗಳಾಗಿರುತ್ತದೆ.

ಸಾಮಾನ್ಯವಾಗಿ ಸಾರ್ವಜನಿಕ ಭಾಷಣಗಳು ಸಾರ್ವಜನಿಕ ಭಾಷಣಗಳು ಸುಧೀರ್ಘವಾಗಿರುತ್ತವೆ. ಮಾತುಗಾರನೊಬ್ಬ ಇಡೀ ಸಭಾಂಗಣದ ಪ್ರೇಕ್ಷಕರನ್ನು ಒಂದು ಅಥವಾ ಇನ್ನೂ ಹೆಚ್ಚು ಅವಧಿಯವರೆಗೆ ತನ್ನ ನಿಯಂತ್ರಣದಲ್ಲಿ ಒಳಪಡಿಸಬಹುದು.

ಸಾರ್ವಜನಿಕ ಭಾಷಣಕಾರನು ಪ್ರೇಕ್ಷಕರೊಂದಿಗೆ ಖುದ್ದಾಗಿ ಅಂತರವನ್ನು ಕಾಯ್ದುಕೊಳ್ಳಬೇಕು.

ಪ್ರೇಕ್ಷಕರು ನಿಷ್ಕ್ರಿಯರಾಗಿ ಭಾಷಣವನ್ನು ಕೇಳಬೇಕಾಗುತ್ತದೆ ; ಮುಂದುವರೆದ ಅವಧಿಯವರೆಗೆ ಏಕಾಗ್ರತೆಯಿಂದ ಕೇಳಲೇಬೇಕಾದ ಅನಿವಾರ್ಯತೆ ಅವರಿಗಿರುತ್ತದೆ.

## 2.3 ಅಂಗರಚನೆ

ಸಾರ್ವಜನಿಕ ಸಂವಹನ ಪ್ರಕ್ರಿಯೆಯ ಒಂದು ಸಂಕೀರ್ಣ ವ್ಯವಸ್ಥೆಯಾಗಿದ್ದು ಹಲವಾರು ಮೂಲ ಅಂಶಗಳ ಸಮನ್ವಯತೆಯಿಂದ ಕೂಡಿರುತ್ತದೆ. ಅಂತಹ ಮೂಲಗಳೆಂದರೆ :

ಮಾಹಿತಿ ಮೂಲ, ಸಂಜ್ಞೆ, ಪರಿಕಲ್ಪನೆ ಹಾಗೂ ನಡಾವಳಿಕೆ, ಸಂದೇಶ, ವಾಹಕ, ಗ್ರಾಹಕ, ಹಿನ್ನುಳಿಸುವಿಕೆ ಮತ್ತು ಪರಿಸರ.

### ಮಾಹಿತಿ ಮೂಲ ಮತ್ತು ಸಂಜ್ಞೆ

ಸಾರ್ವಜನಿಕ ಸಂವಹನ ಪ್ರಕ್ರಿಯೆಯು ಮಾಹಿತಿಯ ಮೂಲದಿಂದ ಆರಂಭವಾಗಿ ಮಾತುಗಾರನೊಬ್ಬ ಯಾವುದೇ ಘಟನೆ, ವಸ್ತು ಅಥವಾ ವಿಚಾರ ಕುರಿತ ಉದ್ದೇಶಪೂರ್ವಕವಾಗಿ ಅಥವಾ ಇಲ್ಲದೆಯೂ ಸಂವಹಿಸಲು ಉತ್ತೇಜಿಸುತ್ತಾನೆ. ಭಾಷಣಕಾರ ತನ್ನ ಸಂದೇಶವನ್ನು ಸೂಕ್ತ ಸಂಜ್ಞೆಯ ಅಂದರೆ ಭಾಷೆಯ ಅಥವಾ ಅಮೌಖಿಕ ಮಾಧ್ಯಮದ ಸಹಾಯದಿಂದ ಕಳುಹಿಸಲು ಪ್ರಯತ್ನಿಸುತ್ತಾನೆ. ಸಂವಾಹಕ ಸಂದೇಶವನ್ನು ರವಾನಿಸಿದ್ದನ್ನು ಕೇಳುಗ ತನ್ನದಾಗಿಸಿಕೊಳ್ಳುತ್ತಾನೆ.

### ಪರಿಕಲ್ಪನೆ ಮತ್ತು ನಡವಳಿಗಳು

ಸಂವಹನದ ಮೂಲವಾಗಿ ಭಾಷಣಕಾರರು ಹಲವಾರು ಅಂಶಗಳಿಂದ ಪ್ರಭಾವಿತರಾಗುತ್ತಾರೆ. ಪರಿಕಲ್ಪನೆ (ಒಬ್ಬ ವ್ಯಕ್ತಿ ಪ್ರಪಂಚವನ್ನು ನೋಡುವ ರೀತಿ) ಸಂವಾಹಕನು ಆರಿಸಿಕೊಳ್ಳಬೇಕಾದ ವಿಷಯ ಮತ್ತು ಶೈಲಿ ಅತಿ ಮುಖ್ಯ. ಇದೇ ರೀತಿಯಲ್ಲಿ, ಸಂವಾಹಕರು ತಮ್ಮದೇ ಸ್ವತಃ ಹಾಗೂ ಕೇಳುಗರ ನಡವಳಿಕೆ (ಪ್ರತಿಕ್ರಿಯಿಸುವ) ಗೆ ಅನುಸಾರವಾಗಿ ತಮ್ಮ ಆಯ್ಕೆಯನ್ನು ಮಾಡುತ್ತಾರೆ. ಭಾಷಣಕಾರರ ಮಾನಸಿಕ ಮತ್ತು ಬೌದ್ಧಿಕ ಮಟ್ಟವು ಸಂವಹನ ನಡೆಸುವ ಶೈಲಿ ಮತ್ತು ಗುಣವನ್ನು ನಿರ್ಧರಿಸುತ್ತದೆ. ಸಂವಾಹಕನು ಸರಿಯಾಗಿ ಸಂವಹಿಸದೆ ತನ್ನದೇ ಯೋಚನೆಯಲ್ಲಿ ತೊಡಗಿದ್ದರೆ ಯಾವುದೇ ಸಂದೇಶವನ್ನು ಕ್ರೋಢೀಕರಿಸಿ ಸಂವಹಿಸುವಲ್ಲಿ ಕಷ್ಟಪಡಬೇಕಾಗುತ್ತದೆ.

### ಸಂದೇಶ

ಭಾಷಣ ಮತ್ತು ಅಮೌಖಿಕ ಸಂಕೇತಗಳು ಮತ್ತು ಪೂರಕ ಪತ್ರಿಕೆ ಸಲಕರಣೆಗಳ ಮೂಲಕ ಸಂವಾಹಕನು ತನ್ನ ವಿಚಾರಗಳನ್ನು ಭಾಷಣದಲ್ಲಿ ಸಂದೇಶದ ರೂಪದಲ್ಲಿ ತಿಳಿಸುತ್ತಾನೆ. ಯಾವುದೇ ವಿಚಾರಗಳು, ವಸ್ತುಗಳು ಮತ್ತು ಘಟನೆಗಳನ್ನು ಸಂವಹನಕಾರ ಪದಗಳ ಹಾಗೂ ಭಾಷೆಯ ಮೂಲಕ ವ್ಯಕ್ತಪಡಿಸುತ್ತಾರೆ.

### ವಾಹಕ

ರವಾನಿಸಲಾಗುವ ಸಂದೇಶಗಳು ವಾಹಕದ ಮೂಲಕ ಪಂಚೇಂದ್ರಿಯಗಳ ಮೂಲಕ ಅಂದರೆ ಮಾತನಾಡುವುದು, ಆರಿಸುವುದು, ನೋಡುವುದು, ಗ್ರಹಿಸುವುದು, ರುಚಿ ನೋಡುವುದು ಮತ್ತು ಸ್ಪರ್ಶದ ರೂಪದಲ್ಲಿ ಪ್ರಸರಿಸುತ್ತದೆ. ಸಂವಾಹಕ ಮತ್ತು ಕೇಳುಗರಾಗಿ ನಾವು ದೃಶ್ಯ ಮತ್ತು ಶ್ರವ್ಯ ಮುಖ್ಯವಾದುದನ್ನು ಅವಲಂಬಿಸಿದರೂ, ಕೆಲವೊಮ್ಮೆ ಭಾಷಣಕಾರನು ಪ್ರೇಕ್ಷಕರ ನಡುವಿನ ವಾಸನೆ, ಸ್ಪರ್ಶ ಅಥವಾ ವಸ್ತುಗಳ ಅನುಭವಿಸುವ ಮೂಲಕ ಸಂದೇಶವನ್ನು ಸರಿಯಾಗಿ ಅರ್ಥೈಸಬಹುದು.

ಕೇಳುಗರಿಗೆ ಸಂದೇಶಗಳು ತಾಂತ್ರಿಕ ಅಥವಾ ವಿದ್ಯುನ್ಮಾನ ವಾಹಕಗಳಾದ ಬಾನುಲಿ, ಟೆಲಿವಿಷನ್, ಓವರ್‌ಹೆಡ್ ಪ್ರೊಜೆಕ್ಟರ್, ಟಾಪ್ ರಿಕಾರ್ಡರ್, ವಿ.ಸಿ.ಆರ್. ಅಥವಾ ಲೇಸರ್ ಡಿಸ್ಕ್‌ಗಳ ಮೂಲಕ ರವಾನಿಸಬಹುದು. ಭಾಷಣಕಾರರು ಸೂಕ್ತ ಮಾಧ್ಯಮಗಳ ಆಯ್ಕೆ ಮತ್ತು ಬಳಕೆ ಕುರಿತು ಜಾಗರೂಕರಾಗಿ ನಿರ್ಧಾರ ಕೈಗೊಳ್ಳಬೇಕು.

### ಮಾಹಿತಿ ಪಡೆಯುವವನು

ಸಂವಹನ ಪ್ರಸರದಲ್ಲಿ ಮಾಧ್ಯಮ ಬಳಕೆಗಿಂತ ಮಿಗಿಲಾಗಿ ಸಂದೇಶವನ್ನು ಸರಿಯಾಗಿ ಸ್ವೀಕರಿಸುವುದು ಅಷ್ಟೇ ಮುಖ್ಯ. ಮಾಹಿತಿ ಪಡೆಯುವವ ಅಥವಾ ಕೇಳುಗ ಭಾಷಿಕ ಮತ್ತು ಮೌಖಿಕ ಸಂಕೇತಗಳನ್ನು ಪಡೆದು ನಂತರ ಅದನ್ನು ಮನವರಿಕೆ ಮಾಡಿಕೊಳ್ಳುತ್ತಾನೆ. ಸಂವಾಹಕರು ಯಾವ ರೀತಿಯಲ್ಲಿ ತಮ್ಮದೇ ಆದ ಗ್ರಹಿಕೆ, ಮನೋಭಾವನೆಗಳು, ಭೌತಿಕ

ಮತ್ತು ಮನೋಸ್ಥಿತಿಗಳಿಂಥ ಪ್ರಭಾವಿತರಾಗುತ್ತಾರೋ ಹಾಗೆಯೇ ಕೇಳುಗರ ಸಹ ಸಾಂದರ್ಭಿಕವಾಗಿ ಅಂತಹ ಅಂಶಗಳಿಂದ ಸಂವಹನ ಪ್ರಕ್ರಿಯೆಯಲ್ಲಿ ಪ್ರಭಾವಿತರಾಗುತ್ತಾರೆ.

**ಹಿನ್ನುಣಿಸುವಿಕೆ**

ಕೇಳುಗನೊಬ್ಬನು ತನಗೆ ತಲುಪಿದ ಸಂದೇಶಗಳನ್ನು ಅರ್ಥೈಸಿದಾಗ ತಾನು ಪ್ರತಿಕ್ರಿಯಿಸಲು ಮುಂದಾಗುತ್ತಾನೆ. ಈ ರೀತಿಯ ಪ್ರತಿಕ್ರಿಯೆಗೆ ಹಿನ್ನುಣಿಸುವಿಕೆ ಎಂದೂ ಅದು ಭಾಷಿಕ ಅಥವಾ ಅಮೌಖಿಕ ಪ್ರತಿಕ್ರಿಯೆ (ಅಥವಾ ಎರಡೂ) ಮೂಲಕ ಸಂದೇಶ, ಸಂವಾಹಕ, ಮಾಧ್ಯಮ ಅಥವಾ ಪ್ರೇಕ್ಷಕರ ನಡುವೆ ಸಾಮರಸ್ಯ ಸಾಧಿಸಬಹುದು. ಸಂವಾಹಕನು ಹಿನ್ನುಣಿಸುವಿಕೆಯನ್ನು ಸರಿಯಾಗಿ ಗಮನಿಸಬೇಕಾಗುತ್ತದೆ. ಏಕೆಂದರೆ ಅದು ಕೇಳುಗ ಅರ್ಥೈಸಿಕೊಳ್ಳುವಿಕೆ (ಉದಾ : ತಲೆ ಕುಣಿಸುವುದು), ಸರಿಯಾಗಿ ಅರ್ಥ ಮಾಡಿಕೊಳ್ಳಲಾಗದು (ಉದಾ : ನನಗೆ ಅರ್ಥವಾಗುತ್ತಿಲ್ಲ), ಸಂವಾಹಕನು ಭಾಷಣ ಮುಂದುವರೆಸಲು ಸೂಚಿಸುವಿಕೆ (ಉದಾ : ಏಕಾಗ್ರತಾ ಸೂಚನೆ) ಅಥವಾ ಒಪ್ಪದೇ ಇರುವುದು (ಉದಾ : ಒಪ್ಪಲು ಸಾಧ್ಯವಿಲ್ಲ) ಎಂಬುದನ್ನು ಸೂಚಿಸುತ್ತದೆ. ಕೇಳುಗ ಸಂವಾಹಕನಿಗೆ ಹಿನ್ನುಣಿಸುವಾಗ ಮಾಹಿತಿ ಪಡೆದವನ ಪಾತ್ರ ಅದಲು ಬದಲಾಗುತ್ತದೆ.

ಸಂವಹನ ಪ್ರಕ್ರಿಯೆಯಲ್ಲಿ ಯಾವುದೇ ಆಂತರಿಕ ಮತ್ತು ಬಾಹ್ಯ ತೊಡಕುಗಳೇ ಕರ್ಕಶ ಗದ್ದಲಕ್ಕೆ ನಾಂದಿಯಾಗುತ್ತವೆ. ಈ ರೀತಿಯ ಗದ್ದಲಗಳು ಪ್ರೇಕ್ಷಕರು ಸಂದೇಶಗಳನ್ನು ವಿಶ್ಲೇಷಿಸುವ ಮತ್ತು ಅರ್ಥೈಸುವ ಹಾಗೂ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಇದು ಬಾಹ್ಯ, ಆಂತರಿಕ ಮತ್ತು ಶಾಬ್ದಿಕ ಅಂಶಗಳಿಂದ ಕಾರಣವಾಗುತ್ತದೆ.

ದೃಶ್ಯ, ಶ್ರವ್ಯ ಮತ್ತಿತರ ಉತ್ತೇಜಕ ಮಾಹಿತಿ ಮೂಲಕವೂ ಬಾಹ್ಯ ಗದ್ದಲ ರೂಪುಗೊಳ್ಳುವ ಸಾಧ್ಯತೆ ಇದ್ದು ಅದರಿಂದಾಗಿ ಉದ್ದೇಶಿತ ಅರ್ಥವನ್ನು ಜನರೆಡೆ ಸೆಳೆಯುವಲ್ಲಿ ವಿಫಲವಾಗುತ್ತದೆ. ಉದಾಹರಣೆಗೆ ವರಮಾನ ತೆರಿಗೆ ಕಾನೂನುಗಳು ಕುರಿತ ನಿಮ್ಮ ಭಾಷಣ ಮಾಡುವಾಗ ಪ್ರೇಕ್ಷಕರ ಗಮನ ಅನ್ಯ ಸದ್ದಿನ ಶಬ್ದಕ್ಕಾಗಲಿ ಅಥವಾ ಹವಾ ನಿಯಂತ್ರಣ ಯಂತ್ರ ಮತ್ತೆ ಚಾಲೂ ಆದಾಗ ಆಗುವ ಶಬ್ದ ಕಡೆ ಹರಿಯಬಹುದು. ಅನ್ಯ ಮತ್ತು ಏರ್‌ಕಂಡೀಶನರ್ ಶಬ್ದಗಳು ಬಾಹ್ಯ ಗದ್ದಲಗಳಾಗಿವೆ.

ಭಾಷಣವೊಂದನ್ನು ಕೇಳುವಾಗ ಕೇಳುಗನ ಭಾವನೆಗಳು ಮತ್ತು ಆಲೋಚನೆಗಳು ಸರಿಯಾದ ಅರ್ಥವನ್ನು ಕಾಣುವುದರಲ್ಲಿ ಗದ್ದಲ ಉಂಟು ಮಾಡುತ್ತದೆ. ಕೇಳುಗನೊಬ್ಬ ಬಾಷಣ ಕೇಳುವಂತೆ ನಟಿಸಿ ಹಗಲುಗನಸು ಕಾಣುತ್ತಿದ್ದರೆ ಅದುವೇ ಇದಕ್ಕೆ ಉದಾಹರಣೆ.

ಸಂವಾಹಕನ ಸಂಕೇತಗಳಿಗೆ ಸಮನಾಂತರ ಅರ್ಥವನ್ನು ಶಾಬ್ದಿಕ ಗದ್ದಲವಾಗುತ್ತದೆ. ಉದಾಹರಣೆಗೆ ಒಂದು ವೇಳೆ ನೀವು ನಿಮ್ಮ ಭಾಷಣದಲ್ಲಿ ಹಲವಾರು ಕಂಪನಿಗಳು ವಲಸೆಗಾರರಿಗೆ ಸಹಯೋಗ ಅಂದರೆ ತಕ್ಕಮಟ್ಟಿಗೆ ಉದಾರತನ ಹೊಂದಿರುತ್ತಾರೆ ಎನ್ನಿ. ಆದರೆ ನಿಮ್ಮ ಪ್ರೇಕ್ಷಕರು ಸಹಯೋಗ ಅರ್ಥವನ್ನು ರಾಜಕೀಯ ತತ್ವವನ್ನಾಗಿ ಸಮೀಕರಿಸಿದ್ದರೆ ನೀವು ಬಹುಶಃ ಇಡೀ ಸಂವಹನ ಅರ್ಥವನ್ನು ಕಳೆದುಕೊಳ್ಳಬೇಕಾಗುತ್ತದೆ.

**ಹಿನ್ನೆಲೆ**

ಸಂವಹನವು ಶೂನ್ಯದಿಂದ ಹೊರಹೊಮ್ಮುವುದಿಲ್ಲ. ಅದು ಸದಾ ಹಲವಾರು ಸನ್ನಿವೇಶ ಮತ್ತು ಹಿನ್ನೆಲೆಯಲ್ಲಿ ಇರುತ್ತದೆ. ನಾವು ಗ್ರಹಿಸುವ ಸಂದೇಶವು ನಾವು ಎಲ್ಲಿದ್ದೇವೆ ಮತ್ತು ನಮ್ಮೊಡನೆ ಯಾರಿದ್ದಾರೆಂಬುದನ್ನು ನಿರ್ಧರಿಸುತ್ತದೆ. ನಮ್ಮ ಸಂವಹನವನ್ನು ಕೊಠಡಿಯ ಗಾತ್ರ, ಗೋಡೆಗಳ ಬಣ್ಣ, ಕುರ್ಚಿಗಳಿಡುವ ವ್ಯವಸ್ಥೆ, ಬೆಳಕು, ಗಾಳಿ ನಿಯಂತ್ರಣ ಮತ್ತು ಪ್ರೇಕ್ಷಕರ ಗಾತ್ರದಂತಹ ಅಂಶಗಳು ಸೂಚಿಸುತ್ತದೆ. ಭಾಷಣವೊಂದು ಪರಿಣಾಮಕಾರಿಯಾಗಿ ನಿರೂಪಿಸಿದ್ದನ್ನು ಹಾಗೂ ಇತರರನ್ನು ತಲುಪಿದ್ದನ್ನು ಬೆಳಕು ನಿಯಂತ್ರಣ ಹಿನ್ನೆಲೆ, ಶಬ್ದ ಮತ್ತು ಕೊಠಡಿಯ ಉಷ್ಣಾಂಶ ನಿರ್ಧರಿಸುತ್ತದೆ.

ಸನ್ನಿವೇಶ ಅಥವಾ ಹಿನ್ನೆಲೆಯೂ ಸಹ ಪ್ರಾಮುಖ್ಯವಾದುದು. ಸಂವಾಹಕ ಮತ್ತು ಕೇಳುಗರಿಬ್ಬರೂ ಯಾವುದು ಅವರನ್ನು ಒಂದೆಡೆ ಬೆಸೆಯುವಂತೆ ಮಾಡುವುದೇ ಅಲ್ಲಿನ ಸನ್ನಿವೇಶದ ಸ್ವರೂಪ. ಭಾಷಣದ ಪ್ರಭಾವ ಅಥವಾ ಒತ್ತಾಸೆಯ ರೂಪುರೇಷೆಯನ್ನು ಇದು ಬಹಳಷ್ಟು ಮಟ್ಟಿಗೆ ತಿಳಿಹೇಳುತ್ತದೆ.

## 2.4 ಆರಂಭವಾಗುವ ಮುನ್ನ

ನಿಮ್ಮ ಗುರಿಯನ್ನು ತಲುಪಬೇಕಾದರೆ ಭಾಷಣದ ಪೂರ್ವ ನಿಯೋಗದ ಧೋರಣೆ ಯಶಸ್ಸುಗಳಿಸುವ ನಿಟ್ಟಿನಲ್ಲಿ ತೀರಾ ಅಗತ್ಯ. ಪ್ರಾಕ್ಟರ್ ಮತ್ತು ಗ್ಯಾಂಬಲ್ ಕಂಪನಿಯ ಜಾಹೀರಾತು ಆಂದೋಲನಕ್ಕಾಗಿ ಮಾರಾಟ ಮಾಡುವ ಖಾಸಾ ಏಜೆಂಟಾಗಲೀ, ಯಾವುದೇ ಆಟದ ಟೀಮಿನ ತರಬೇತುದಾರರಾಗಿ ಪ್ರೇರೇಪಿಸುವಾಗಲೀ ಅಥವಾ ಸೆಮಿನಾರ್ ಪ್ರಬಂಧದ ದಿನಾಂಕವನ್ನು ಮುಂದೂಡಲು ಪ್ರಾಧ್ಯಾಪಕರೊಬ್ಬರಿಗೆ ವಿದ್ಯಾರ್ಥಿಯೊಬ್ಬನು ಮನವರಿಕೆ ಮಾಡುವುದಾಗಲಿ ಅಂತಹ ಧೋರಣೆ ಅನಿವಾರ್ಯ. ಸೂಕ್ತ ಮಾಧ್ಯಮದ ಆಯ್ಕೆ ಮತ್ತು ಬಳಕೆಯನ್ನು ಭಾಷಣಕಾರರು ನಿಗಾವಹಿಸಿ ನಿರ್ಧರಿಸಬೇಕಾಗುತ್ತದೆ.

ಪರಿಣಾಮಕಾರಿ ಭಾಷಣ ಯೋಜನೆಯು ಕೆಳಕಂಡ ಏಳು ಕಾರ್ಯ ಸೂಚಿಯ ಉತ್ಪನ್ನವಾಗಿದೆ :

1. ಗುರಿಯೊಂದನ್ನು ನಿರ್ಧರಿಸಿ
2. ಮಾಹಿತಿಯನ್ನು ಕಲೆಹಾಕಿ
3. ನಿರ್ದಿಷ್ಟ ಧೋರಣೆಯನ್ನು ತಯಾರಿಸಿ
4. ಮಾಹಿತಿಯನ್ನು ವ್ಯವಸ್ಥಿತಗೊಳಿಸಿ
5. ಚಿತ್ರ ಆಧಾರಿತ ಸಲಕರಣೆಗಳನ್ನು ರಚಿಸಿ
6. ಪದಗಳ ಬಳಕೆ ರೂಪಿಸಿ
7. ಉಚ್ಚಾರಣೆ ವಿಧಾನ ರೂಪಿಸಿ

### ಗುರಿಯೊಂದನ್ನು ನಿರ್ಧರಿಸಿ

ಪ್ರೇಕ್ಷಕರನ್ನು ನಿಗಾ ಇಟ್ಟುಕೊಂಡು ನಿಮ್ಮ ಭಾಷಣದ ಗುರಿಯನ್ನು ನಿರ್ಧರಿಸಬೇಕಾಗುತ್ತದೆ. ಭಾಷಣಕ್ಕಾಗಿ ಆಯ್ಕೆ ಮಾಡಿಕೊಂಡ ವಿಷಯ. ಪ್ರೇಕ್ಷಕರನ್ನು ವಿಶ್ಲೇಷಿಸುವುದು, ಸನ್ನಿವೇಶದ ಅವಲೋಕನ ಮತ್ತು ಸ್ಪಷ್ಟವಾದ ಗುರಿಯನ್ನು ಹಮ್ಮಿಕೊಳ್ಳಬೇಕಾಗುತ್ತದೆ.

ಮೊದಲು ನೀವು ಸಾಕಷ್ಟು ಪರಿಜ್ಞಾನವುಳ್ಳ ವಿಷಯವನ್ನು ಭಾಷಣದ ವಸ್ತು ವಿಷಯವಾಗಿ ಆರಿಸಿಕೊಳ್ಳಿ, ಅದು ನಿಮಗೆ ಮತ್ತು ನಿಮ್ಮ ಪ್ರೇಕ್ಷಕರ ಅಗತ್ಯಗಳು ಮತ್ತು ಆಸಕ್ತಿಗಳಿಗೆ ಪೂರಕವಾಗಿರಬೇಕು.

ನಿಮ್ಮ ಪ್ರೇಕ್ಷಕರನ್ನು ವಿಶ್ಲೇಷಿಸಿ – ಇದಕ್ಕಾಗಿ ಪ್ರೇಕ್ಷಕರ ಮೂಲ ಮಾಹಿತಿ ಕಲೆ ಹಾಕಿ ಮತ್ತು ಪ್ರೇಕ್ಷಕರ ಆಸಕ್ತಿಗಳು, ಪರಿಜ್ಞಾನ ಮತ್ತು ಮನೋಭಾವನೆಗಳನ್ನು ಊಹಿಸಲು ಪ್ರಯತ್ನಿಸಿ.

ನಿಮ್ಮ ಸನ್ನಿವೇಶವನ್ನು ವಿಶ್ಲೇಷಿಸಿ – ಇದಕ್ಕಾಗಿ ಮಹತ್ತರ ಅಂಶಗಳಾದ ಪ್ರೇಕ್ಷಕರ ಗಾತ್ರ, ಯಾವಾಗ ಭಾಷಣ

ಮಾಡಲಾಗುವುದು. ಎಲ್ಲಿ ಭಾಷಣ ಮಾಡಲಾಗುವುದು. ಭಾಷಣ ನೀಡಲು ಸೌಲಭ್ಯಗಳು, ಭಾಷಣಕ್ಕೆ ವೇಳಾಪಟ್ಟಿ ಮತ್ತು ನಿರ್ದಿಷ್ಟ ಕಾರ್ಯಸೂಚಿ ಇವುಗಳನ್ನು ಅವಲೋಕಿಸಿ.

ನಿಮ್ಮ ಪ್ರೇಕ್ಷಕರಿಂದ ಬಂದ ಪ್ರತಿಕ್ರಿಯೆ ಅನುಗುಣವಾಗಿ ನಿಮ್ಮ ಗುರಿಯನ್ನು ಸ್ಪಷ್ಟವಾಗಿ ನಿರೂಪಿಸಿ – ಸಂವಾಹಕನು ತನ್ನ ಸಾಮಾನ್ಯ ಮತ್ತು ನಿರ್ದಿಷ್ಟ ಗುರಿಯನ್ನು ಈಡೇರಿಸುವುದು ಪ್ರತಿಯೊಂದು ಪರಿಣಾಮಕಾರಿ ಭಾಷಣದ ಗುರಿಯಾಗಿದೆ. ಸಾಮಾನ್ಯವಾಗಿ ನಿಮ್ಮ ಗುರಿ ಎಂಬುದು ಪ್ರೇಕ್ಷಕರು ತಮಗೆ ದೊರೆತ ವಿಚಾರಗಳನ್ನು ಸವಿಯಬೇಕು, ಮಾಹಿತಿಯನ್ನು ಮನದಟ್ಟು ಮಾಡಿಕೊಳ್ಳಬೇಕು. ಕೆಲವೊಂದು ವಿಷಯಗಳಲ್ಲಿ ವಿಶ್ವಾಸಾರ್ಹತೆ ಅಥವಾ ನಿರ್ದಿಷ್ಟ ದಾರಿಯಲ್ಲಿ ವರ್ತಿಸಬೇಕು ಎಂಬುದು ಅಗತ್ಯ.

**ಮಾಹಿತಿ ಸಂಗ್ರಹ**

ನಿಮ್ಮ ಭಾಷಣಕ್ಕಾಗಿ ಬೇಕಾದ ಅಗತ್ಯ ಮಾಹಿತಿಯನ್ನು ವಿವಿಧ ಮೂಲಗಳ ಸಮೀಕ್ಷೆಗಳ ಮೂಲಕ ಕಲೆಹಾಕಿ, ನಿರ್ದಿಷ್ಟ ಭಾಷಣಕ್ಕಾಗಿ ಪೂರಕ ಮಾಹಿತಿಯನ್ನು ದಾಖಲೀಕರಿಸಿ ಟಿಪ್ಪಣಿ ಕಾರ್ಡ್‌ಗಳಲ್ಲಿ ವಿವರಣೆ ಪಡೆದುಕೊಳ್ಳಿ.

**ಕಾರ್ಯತತ್ಪರತೆಗಾಗಿ ಧೋರಣೆ ರೂಪಿಸಿಕೊಳ್ಳಿ**

ನಿಮ್ಮ ದೃಷ್ಟಿಯಲ್ಲಿ ಪ್ರೇಕ್ಷಕರ ಮೌಲ್ಯಮಾಪನ ಮಾಡಿ, ಅವರಿಗೆ ನೇರವಾಗಿ ಮಾತನಾಡಿ, ಪ್ರೇಕ್ಷಕರನ್ನು ಸೆಳೆದು ಅವರ ಮನವರಿಕಾ ಮುಖ್ಯ ಆಸಕ್ತಿಯನ್ನು ಕಾಯ್ದುಕೊಳ್ಳಿ, ಸಂವಾಹಕ ಮನೋವರ್ಧನೆ ಮತ್ತು ವಸ್ತು ವಿಷಯದ ಬಗ್ಗೆ ಬದಲಾವಣೆ ಮತ್ತು ಪುನರ್ ಒತ್ತಾಯ ಮಾಡಿ.

**ವಿಚಾರಗಳನ್ನು ವ್ಯವಸ್ಥಿತವಾಗಿಡಿ**

ಒಂದು ಉತ್ತಮ ಸಂಘಟಿತ ಭಾಷಣವು ಆರಂಭ, ಮಧ್ಯಭಾಗ ಮತ್ತು ಅಂತ್ಯಗಳನ್ನು ಒಳಗೊಂಡಿದೆ. ಭಾಷಣವೊಂದರ ವಸ್ತು ವಿಷಯವನ್ನು ನಿರ್ಧರಿಸದೆ ಪೀಠಿಕೆ ಬರೆಯುವುದು ಕಷ್ಟಕರವಾದರೂ, ಅದರ ಅಂಗರಚನೆಯನ್ನು ಉತ್ತಮ ಆರಂಭ ಅಥವಾ ಅಂತ್ಯಕ್ಕೂ ಮೊದಲೇ ನಿರ್ಧರಿಸಬೇಕಾಗುತ್ತದೆ. ಇದಾದ ಮೇಲೆ ಭಾಷಣದ ವಿವಿಧ ಅಂಶಗಳನ್ನು ಸ್ಪಷ್ಟಪಡಿಸಿಕೊಂಡು ಉತ್ತಮ ಭಾಷಣದ ಸಂರಚನೆಯ ರೂಪುರೇಷೆಯನ್ನು ಸುಧಾರಿಸಬಹುದು.

ಭಾಷಣದ ಮುಖ್ಯ ಅಂಶಗಳನ್ನು ಹಂತ ಹಂತವಾಗಿ ವಿವಿಧ ಪದಗುಚ್ಛಗಳಿಂದ ರಚಿಸಿ ಅದು ವಿಷಯವನ್ನು ಒತ್ತಿ ಹೇಳುವ ಸ್ಪಷ್ಟತೆ ಹೊಂದಿರಬೇಕು.

ಪೀಠಿಕೆಯನ್ನು ಸಿದ್ಧಪಡಿಸುವಾಗ ಅದು ಭಾಷಣದ ಅಂಗಾಂಶಗಳನ್ನು ಪ್ರಸ್ತಾಪಿಸುವ ಮತ್ತು ವಿಷಯವನ್ನು ಓದುಗರಿಗೆ ಆಸಕ್ತಿದಾಯಕವಾಗಿ ರೂಪಿಸಬೇಕು.

ಮುಕ್ತಾಯವನ್ನು ಮಾಡುವಾಗ ಅದು ಭಾಷಣವನ್ನು ಒತ್ತಿ ಹೇಳುವ ಹಾಗೆ ಮತ್ತು ವಿಷಯವನ್ನು ಸಾರಾಂಶವನ್ನು ಎರಡನ್ನೂ ಗಮನದಲ್ಲಿಟ್ಟುಕೊಳ್ಳಬೇಕು.

ಭಾಷಣದ ರೂಪುರೇಷೆಯನ್ನು ಬರೆಯುವುದು.

**ದೃಶ್ಯ ಸಲಕರಣೆಗಳ ರಚನೆ**

ಭಾಷಣದ ರಚನೆ ಮತ್ತು ರೂಪುರೇಷೆಗಳನ್ನು ಸಿದ್ಧ ಪಡಿಸಿದ ನಂತರ ಪರಿಣಾಮಕಾರಿ ಭಾಷಣಕಾರನು ತನ್ನ ಭಾಷಿತ ಮಾಹಿತಿಯನ್ನು ದೃಶ್ಯ ಸಲಕರಣೆಗಳ ಮೂಲಕ ಸೃಷ್ಟಿಸಲು, ಒತ್ತಿ ಹೇಳಲು ಅಥವಾ ಸೃಷ್ಟಿಸಿ ವಿಶ್ಲೇಷಿಸುತ್ತಾನೆ. ಪ್ರೇಕ್ಷಕರು

ಒಂದಕ್ಕಿಂತ ಮಿಗಿಲಾದ ಇಂದ್ರಿಯ ಮೂಲಗಳಿಂದ ಮಾಹಿತಿಯನ್ನು ಅರ್ಥೈಸಲು ಮತ್ತು ಮನನ ಮಾಡಲು ಸಾಧ್ಯವಾಗುತ್ತದೆ. ಮಾದರಿಗಳು, ರೇಖಾಪಟ್ಟಿಗಳು, ಸಚಿತ್ರ ಬರಹಗಳು, ಚಿತ್ರ ಪ್ರದರ್ಶನಗಳು ಮತ್ತು ಕಂಪ್ಯೂಟರ್ ಗ್ರಾಫಿಕ್ಸ್‌ಗಳನ್ನು ಸೃಜನಾತ್ಮಕ ವಿಧಾನಗಳ ಮೂಲಕ ಪರಿಣಾಮಕಾರಿ ಭಾಷಣಕಾರರು ತಮ್ಮ ಮಹೋನ್ನತ ಮಾಹಿತಿಯನ್ನು ತಲುಪಲು ಸಾಧ್ಯವಾಗಬಲ್ಲದು.

**ಪದಗಳ ಬಳಕೆ ಪ್ರಯೋಗ ಮಾಡುವುದು**

ಭಾಷಣದ ಮುಖ್ಯಾಂಶಗಳು ಮತ್ತು ಪೂರಕ ವಸ್ತುಗಳನ್ನು ಪದ ವಿನ್ಯಾಸವನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಬೇಕು. ನಿಮ್ಮ ಮುಖ್ಯ ವಿಚಾರಗಳನ್ನು ಅತ್ಯುತ್ತಮವಾಗಿ ಪದಗಳ ಸರಣಿಯ ರೂಪದಲ್ಲಿ ಹೇಗೆ ಹೇಳಬಹುದು ಎಂಬುದರ ಬಗ್ಗೆ ನೀವು ಸರಿಯಾಗಿ ಆಲೋಚಿಸದಿದ್ದರೆ ನಿಮ್ಮ ವಿಚಾರಗಳನ್ನು ಪರಿಣಾಮಕಾರಿಯಾಗಿ ಸಂವಹನಿಸುವ ಮಹತ್ತರ ಅವಕಾಶಗಳನ್ನು ಕಳೆದುಕೊಳ್ಳುವ ಗುರುತರ ಅಪಾಯವನ್ನು ಎದುರಿಸಬೇಕಾಗುತ್ತದೆ. ಪ್ರಾಯೋಗಿಕ ಸನ್ನಿವೇಶಗಳಲ್ಲಿ ಭಾಷೆಯ ನಿಖರತೆ, ವೈವಿಧ್ಯತೆ, ಪ್ರಾಮುಖ್ಯತೆ ಮತ್ತು ಸಮಂಜಸತೆಯ ಬಗ್ಗೆ ಕೆಲಸ ಮಾಡಬೇಕಾಗುತ್ತದೆ.

**ಪ್ರಸರಣ ವಿಧಾನ**

ಭಾಷಣವೊಂದನ್ನು ಮತ್ತೊಬ್ಬರಿಗೆ ನೀಡದಿದ್ದರೆ ಅದು ಭಾಷಣವಾಗುವುದಿಲ್ಲ. ವಿಚಾರಗಳು ಪ್ರೇಕ್ಷಕರಿಗೆ ಶಾಬ್ದಿಕ, ಭಾಷಿಕ ಮತ್ತು ಅಮೌಖಿಕ ಮಾಧ್ಯಮಗಳ ಮೂಲಕ ಸಂವಹನಿಸಬಹುದೆಂಬುದನ್ನು ನೆನಪಿಡಿ. ಪರಿಣಾಮಕಾರಿ ಪ್ರಸರಣದಿಂದ ಕಳಪೆಯಾಗಿ ರಚಿಸಲಾದ ಭಾಷಣವನ್ನು ಅತ್ಯುತ್ತಮವಾಗಿ ರೂಪಿಸಬಹುದಾಗಿದೆ.

ನಿಮ್ಮ ಧ್ವನಿ ಮತ್ತು ಶಾರೀರಿಕ ಸಕ್ರಿಯತೆಯಿಂದ ಮಾತನಾಡುವ ಗುಣಮಟ್ಟವನ್ನು ರೂಪಿಸಿ, ಮಾತನಾಡುವಿಕೆಯು ಪ್ರೇಕ್ಷಕರು ನಿಮ್ಮ ಭಾಷಣಕ್ಕೆ ಹೇಗೆ ಪ್ರತಿಕ್ರಿಯೆ ನೀಡುತ್ತಾರೆಂಬುದು ಅತ್ಯಂತ ಮುಖ್ಯವಾದ ಅಂಶವಾಗಿದೆ. ಇದರಿಂದ ನೀವು ನಿಮ್ಮ ಭಾಷಣವನ್ನು ಬಿಗಡಾಯಿಸಿದ್ದರು ಅದು ತೃಪ್ತಿಕರವಾಗಿದೆ ಎಂಬುದನ್ನು ನಿರ್ಧರಿಸಬಲ್ಲದು.

ನಿಗಧಿತ ಕಾಲ ಪರಿಮಿತಿಯಲ್ಲಿ ನಿಮ್ಮ ಭಾಷಣವನ್ನು ಯಾವುದೇ ಸಹಾಯವಿಲ್ಲದೆ ನಿರರ್ಗಳವಾಗಿ ಹೇಳುವವರೆಗೆ ಅಭ್ಯಾಸ ಮಾಡಬೇಕು. ಸನ್ನಿವೇಶಕ್ಕೆ ಭಿನ್ನವಾಗಿ ನಿಮ್ಮ ಭಾಷಣವನ್ನು ಹಲವಾರು ಸಾರಿ ಪ್ರಯೋಗಿಸಬೇಕು. ಒಂದು ವೇಳೆ ನಿಮಗೆ ಪರಿಚಯವಿಲ್ಲದ ವಿಚಾರಗಳನ್ನು ನಿಮ್ಮ ಭಾಷಣದಲ್ಲಿ ಪ್ರಯತ್ನಿಸುವಾಗ ಅದನ್ನು ಕಲಿಯುವವರೆಗೂ ಅಭ್ಯಾಸ ಮಾಡಬೇಕಾಗುತ್ತದೆ. ಇನ್ನೊಂದೆಡೆ, ನಿಮಗೆ ತಿಳಿದಿರುವ ಮಾಹಿತಿ ಕುರಿತು ಭಾಷಣ ಮಾಡುವುದಾದರೆ ನಿಮ್ಮ ಪ್ರಸರಣಾ ಗುರಿಯನ್ನು ಕೆಲವಾರು ಅಭ್ಯಾಸ ವಿಧಾನಗಳಿಂದ ರೂಪಿಸಬೇಕಾಗುತ್ತದೆ.

## 2.5 ಪ್ರಸಾರಣ ವಿಧಾನಗಳು

ನಿಮ್ಮ ಭಾಷಣದ ಮಾತುಗಾರಿಕೆ ಹೆಚ್ಚು ಪ್ರಭಾವಶಾಲಿಯೂ ಮತ್ತು ಸ್ವಾಭಾವಿಕವೂ ಆಗಿದ್ದರೆ ನಿಮ್ಮ ಪ್ರೇಕ್ಷಕರು ಬಹಳ ಸಕಾರಾತ್ಮಕವಾಗಿ ಪ್ರಭಾವಿತರಾಗುತ್ತಾರೆ. ಈ ನಿಟ್ಟಿನಲ್ಲಿ ನಾಲ್ಕು ಪ್ರಸರಣಾ ವಿಧಾನಗಳು ಲಭ್ಯವಿದೆ.

### 1. ನೆನಪಿಸಿಕೊಂಡು ಹೇಳುವುದು

ಅನುಭವಹೀನ ಭಾಷಣಕಾರರು ಇಡೀ ಭಾಷಣವನ್ನು ಪರಿಪೂರ್ಣವಾಗಿ ಮೆಲುಕು ಹಾಕುವುದೇ ಅದು ಪರಿಣಾಮಕಾರಿ ಆಗಬಲ್ಲದೆಂದು ಭಾವಿಸುತ್ತಾರೆ. ವಾಸ್ತವವಾಗಿ ನೀವೊಬ್ಬರು ತರಬೇತಿ ಪಡೆದು ನಟನಾಗದಿದ್ದರೆ, ಮೆಲುಕುಹಾಕುವ ಶಬ್ದಗಳು

ನಿಷ್ಕ್ರಿಯ ಮತ್ತು ಅಸ್ವಾಭಾವಿಕವಾಗಿ ಕಂಡುಬರುತ್ತದೆ. ತಾನು ಮಾತನಾಡಬಲ್ಲ ಎಲ್ಲಾ ಮೌಖಿಕ ಪ್ರದರ್ಶನವನ್ನು ಶಿಫಾರಸ್ಸು ಮಾಡಲಾಗದು. ಇಷ್ಟಾದರೂ, ಭಾಷಣದ ಪ್ರಮುಖ ಅಂಶಗಳಾದ ಪೀಠಿಕೆ, ಮುಕ್ತಾಯ ಅಥವಾ ಮಹತ್ತರ ಹೇಳಿಕೆಗಳು ಮನೋಜ್ಞವೂ ಮತ್ತು ಪರಿಣಾಮಕಾರಿಯೂ ಆಗಿರುತ್ತದೆ.

**2. ಹಸ್ತಪ್ರತಿ ಓದುವ ವಿಧಾನ**

ಭಾಷಣವನ್ನು ಪ್ರೇಕ್ಷಕರ ಎದುರಿಗೆ ಓದುವುದು ನಕಾರಾತ್ಮಕ ಅಭಿಪ್ರಾಯವನ್ನು ಸೃಷ್ಟಿಸುತ್ತದೆ. ಇದು ನಿಮಗೆ ನಿಮ್ಮ ವಸ್ತು ವಿಷಯದ ಬಗ್ಗೆ ಪರಿಜ್ಞಾನ ಇಲ್ಲದಿರುವುದನ್ನು ಸೂಚಿಸುತ್ತದೆ ಮತ್ತು ಇದರಿಂದಾಗಿ ನಿಮ್ಮ ಪ್ರೌಢಿಮೆ ಬಗ್ಗೆ ಪ್ರೇಕ್ಷಕರು ವಿಶ್ವಾಸ ಕಳೆದುಕೊಳ್ಳುವಂತಾಗುತ್ತದೆ. ಬರೀ ಓದುವುದರಿಂದ ಪ್ರೇಕ್ಷಕರೊಂದಿಗೆ ಕಣ್ಣಿನ ಸಂಪರ್ಕ ಸಾಧಿಸುವುದನ್ನು ನಿಲ್ಲಿಸಿದ ಹಾಗಾಗುತ್ತದೆ. ನೀವು ಅವರ ಪ್ರತಿಕ್ರಿಯೆಗಳನ್ನು ನೋಡದಿದ್ದರೆ, ಹಿನ್ನುಣಿಸುವಿಕೆಯ ಸೌಲಭ್ಯದ ವಂಚಿತರಾಗುವಿರಿ. ಎಲ್ಲದಕ್ಕಿಂತ ಕೆಟ್ಟದೆಂದರೆ ಓದುವುದು ಬರೀ ಬೇಸರ ಉಂಟು ಮಾಡುತ್ತದೆ. ನೀವು ನಿಮ್ಮ ಭಾಷಣವನ್ನು ಓದಲೇ ಬೇಕಾದ ಅನಿವಾರ್ಯವಿದ್ದರೆ, ನೀವು ಪ್ರಚುರಪಡಿಸುವ ಮನದಟ್ಟಾದ ವಿಭಾಗ ಬಂದಾಗ ಕೆಲವೊಮ್ಮೆಯಾದರೂ ಕೇಳುಗರನ್ನು ಕತ್ತೆತ್ತಿ ನೋಡುವ ಅಭ್ಯಾಸ ರೂಢಿಸಿಕೊಳ್ಳಬೇಕು.

**3. ಭಾವಾಭಿನಯ**

ನಿಮ್ಮ ಭಾಷಣವನ್ನು ಬಹಳ ಪರಿಣಾಮಕಾರಿಯಾಗಿ ಪ್ರದರ್ಶಿಸಬೇಕಾದ ವಿಧಾನವೇ ಮುಕ್ತ ಹಾಗೂ ನೇರವಾಗಿ ಮಾತನಾಡುವುದು. ಈ ವಿಧಾನದಲ್ಲಿ ನಿಮ್ಮ ಭಾಷಣವನ್ನು ನಿಯೋಜಿಸಿ ಮತ್ತು ಪ್ರಮುಖ ವಾಕ್ಯಗಳನ್ನು ಒಳಗೊಂಡ ಭಾವಾಭಿನಯದಿಂದ ಮಾತನಾಡಿರಿ. ನಿಮ್ಮ ನೋಟ್ಸ್‌ಗಳೊಂದಿಗೆ ಅಭ್ಯಾಸ ಮಾಡುವುದರಿಂದ ನಿಮ್ಮ ಪ್ರೇಕ್ಷಕರೊಂದಿಗೆ ಆಡುಭಾಷೆಯ ಶೈಲಿಯಲ್ಲಿ ಮಾತನಾಡಬಹುದು. ನಿಮ್ಮ ನೋಟ್ಸ್ ಇಡೀ ಪ್ಯಾರವನ್ನಾಗಲಿ ಅಥವಾ ಕೇವಲ ಕೆಲವೇ ಪದಗಳನ್ನಾಗಲೀ ಒಳಗೊಂಡಿರಬಾರದು. ಇದಕ್ಕೆ ಬದಲಾಗಿ ನಿಮ್ಮ ರೂಪುರೇಷೆಗಳನ್ನು ಸಂಪೂರ್ಣ ವಾಕ್ಯಗಳ ಮೂಲಕ ತಿಳಿ ಹೇಳಿ, ಇಂತಹ ಮೂಲ ಮಾಹಿತಿಗಳು ನಿಮ್ಮನ್ನು ಸರಿದಾರಿಯಲ್ಲಿ ಹೋಗಲು ಮತ್ತು ನಿಮ್ಮ ಜ್ಞಾಪನಾಶಕ್ತಿ ಉತ್ತೇಜಿಸಲು ನೀವು ಭಾಷಣವನ್ನು ಪ್ರದರ್ಶಿಸುವ ಉತ್ತಮ ಅಭ್ಯಾಸವನ್ನು ಮಾಡಬೇಕು.

**4. ಧಿಡೀರ್ ಪ್ರದರ್ಶನ**

ಒಂದು ವೇಳೆ ಈ ಕ್ಷಣದಲ್ಲೇ ನಿಮ್ಮನ್ನು ಭಾಷಣ ಮಾಡಲು ಹೇಳಿದರೆ, ನೀವು ಧಿಡೀರ್ ಭಾಷಣ ಪ್ರದರ್ಶಿಸಲು ಮುಂದಾಗಬೇಕಾಗುತ್ತದೆ. ಸಾಮಾನ್ಯವಾಗಿ ನಿಮಗೆ ನಿಮ್ಮ ವಸ್ತು ವಿಷಯದ ಬಗ್ಗೆ ಪರಿಜ್ಞಾನವಿದ್ದರೂ, ಸಮಯದ ಅಭಾವದಿಂದಾಗಿ ನಿಮ್ಮ ಭಾಷಣದ ಯೋಚನೆಗಳನ್ನು ತಯಾರಿಸಲು ಸಾಧ್ಯವಾಗಬೇಕು. ಬಹುತೇಕ ವೃತ್ತಿಪರ ಭಾಷಣಕಾರನಿಗೂ ವಸ್ತು ನಿಷ್ಠತೆ, ಮನವರಿಕೆ ಮತ್ತು ಮಾಹಿತಿ ವ್ಯವಸ್ಥೆಗೆ ಶರಣಾಗಬೇಕಾಗುತ್ತದೆ.

## 2.6 ಭಾಷಣ ನೀಡುವ ಆತ್ಮವಿಶ್ವಾಸ

ಯಾವುದೇ ಗುಂಪಿನೊಂದಿಗೆ ಮಾತನಾಡುವಾಗ ಪ್ರತಿಯೊಬ್ಬರೂ ಸ್ವಲ್ಪ ಮಟ್ಟದ ವೇದಿಕೆ ಹೆದರಿಕೆಗೆ ಗುರಿಯಾಗುವರು. ನಿಮ್ಮ ಭಾಷಣದ ಪೂರ್ವಸಿದ್ಧತೆ ಗಂಭೀರವಾಗಿರಲಿ.

ವೇದಿಕೆಯ ಭಯ ಕಡಿಮೆಮಾಡಲು ಬಳಸುವ ಪರಿಣಾಮಕಾರಿ ವಿಧಾನವೆಂದರೆ ನಿಮ್ಮ ವಸ್ತು ವಿಷಯದ ಬಗ್ಗೆ ಪರಿಜ್ಞಾನದ ಬಗ್ಗೆ ಆತ್ಮವಿಶ್ವಾಸ ಹೊಂದಿರಬೇಕು. ನಿಮ್ಮ ಆತ್ಮ ವಿಷಯದ ಬಗ್ಗೆ ಸಮಂಜಸವಾದ ಸಂಶೋಧನೆ ನಡೆಸಿದ

ನಂತರವೇ ವಾಕ್ಯ ರಚನೆಯ ರೂಪುರೇಷೆ ತಯಾರಿಸಬೇಕು.

**ಅಣುಕಿನ ಪುನರಾವರ್ತನೆ**

ನಿಮ್ಮ ಒಟ್ಟಾರೆ ಪ್ರದರ್ಶಿಕೆಯನ್ನು ಅಭ್ಯಾಸ ಮಾಡಿ, ಆದರೆ ಮೊದಲ ಅರ್ಧದಷ್ಟು ಮಾತ್ರ ಸಾಲದು. ನಿಮ್ಮ ವಾಕ್ಯಗಳು ರೂಪು ರೇಷೆಯನ್ನು ಕಾರ್ಡೊಂದರಲ್ಲಿ ಬರೆದಿಟ್ಟುಕೊಳ್ಳಿ. ಇಂತಹ ಕಾರ್ಡ್‌ಗಳನ್ನು ಭಾಷಣ ಅಭ್ಯಾಸ ಮಾಡುವಾಗ ಉಪಯೋಗಿಸಿ ಹಾಗೂ ಸದಾ ಜೊತೆಗೆ ಶ್ರವ್ಯ ಸಲಕರಣೆಗಳನ್ನು ಸೇರಿಸಿ ಅಣುಕನ್ನು ಮಾಡಿ. ನಿಮ್ಮ ಅಣುಕಿನ ಧ್ವನಿಮುದ್ರಣ ಮಾಡಿ ಅದು ಹೇಗೆ ಬಂದಿದೆ ಎಂಬುದನ್ನು ತಿಳಿಯಿರಿ.

**ಸಮಯವನ್ನು ಪಾಲಿಸಿ**

ನಿಮ್ಮ ಭಾಷಣದ ಪ್ರದರ್ಶಿಕೆಯನ್ನು 20 ನಿಮಿಷಗಳಿಗೆ ಮೀರದಂತೆ ಸಮಯದ ಚೌಕಟ್ಟಿನಲ್ಲಿ ಹೇಳಲು ಪ್ರಯತ್ನಿಸಿ. ಉದ್ದನೆಯ ಭಾಷಣಗಳು ಪ್ರೇಕ್ಷಕರ ಗಮನ ಹರಿಸುವಲ್ಲಿ ವಿಫಲವಾಗದು, ನೀವು ಮಾತನಾಡುವ ಅವಧಿಯನ್ನು ತಿಳಿಯಲು ಗಡಿಯಾರ ಬಳಸಿ ಅಣಕುಮಾಡುವಾಗ ಬಳಸಿರಿ.

**ಭಾಷಣ ಸ್ಟಾಂಡ್ ಬಳಸಲು ಸೂಚಿಸಿ**

ಪ್ರತಿಯೊಬ್ಬ ಆರಂಭಿಕ ಸಂವಾಹಕನು ತನ್ನ ಭಾಷಣವನ್ನು ನೀಡುವಾಗ ಎತ್ತರದ ಮೇಜು ಅಥವಾ ಉದ್ದನೆಯ ಸ್ಟಾಂಡ್ ಬಳಸುವ ಅಗತ್ಯವಿದೆ. ಇದರಿಂದ ಭಾಷಣದ ವಿವಿಧ ಹಾಳೆಗಳನ್ನು ಇಟ್ಟು ಹಾಗೂ ನಿಮ್ಮ ಕೈ ಮತ್ತು ತೋಳುಗಳ ಅಸಂಬದ್ಧ ಚಲನೆಗಳನ್ನು ನಿಯಂತ್ರಿಸುವ ಸಾದನವಾಗುತ್ತದೆ.

**ಕೊಠಡಿಯನ್ನು ಪರಿಶೀಲಿಸಿ**

ಉದ್ದನೆಯ ಮೇಜು ಇರುವುದನ್ನು ಖಚಿತಪಡಿಸಿಕೊಳ್ಳಿ. ಒಂದು ವೇಳೆ ನೀವು ಕಂಪ್ಯೂಟರ್, ಶಬ್ದಾರಿತ ಸಲಕರಣೆ ಅಥವಾ ಚಿತ್ರ ಪ್ರದರ್ಶಿಕ ಬಳಸುವುದಾದರೆ ಅವು ಸರಿಯಾಗಿ ಕೆಲಸ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳಿ. ನೀವು ಅಗತ್ಯಕ್ಕೆ ಸರಿಯಾಗಿ ಆಸನ ವ್ಯವಸ್ಥೆ ಮಾಡಲಾಗಿದೆ ಎಂಬುದನ್ನು ದೃಢಪಡಿಸಿಕೊಳ್ಳಿ.

ಆತಂಕ ಕಡಿಮೆ ಮಾಡುವುದನ್ನು ಅಭ್ಯಾಸ ಮಾಡಿ. ನೀವು ಭಾಷಣ ಮಾಡುವ ನಿರೀಕ್ಷೆಯಲ್ಲಿ ಆತಂಕ ಮತ್ತು ಭಯದ ವಾತಾವರಣ ಇದ್ದಲ್ಲಿ ಅಂತಹದನ್ನು ಕಡಿಮೆಗೊಳಿಸುವ ತಂತ್ರಗಳನ್ನು ಬಳಸಿ ಬಹಳ ಧೀರ್ಘವಾದ ಉಸಿರನ್ನು ತೆಗೆದುಕೊಳ್ಳಿರಿ. ಒಂದರಿಂದ ಹತ್ತು ಎಣಿಸುವವರೆಗೆ ಉಸಿರನ್ನು ಎಳೆದು, ಅದೇ ಅವಧಿಯಷ್ಟು ಉಸಿರುಕಟ್ಟಿ, ಮತ್ತದೇ ಹತ್ತು ಸೆಕೆಂಡುಗಳಷ್ಟು ಉಸಿರನ್ನು ಹೊರಬಿಡಿ. ನೀವು ಉಸಿರಾಟದ ಬಗ್ಗೆ ಕೇಂದ್ರೀಕರಿಸಬೇಕೆ ಹೊರತು ಪ್ರೇಕ್ಷಕರು ನಿಮ್ಮನ್ನು ಎದುರು ನೋಡುತ್ತಿರುವುದರ ಬಗ್ಗೆ ಅನಗತ್ಯ ಆತಂಕ, ದುಗುಡ ಬೇಕಿಲ್ಲ.

**ನಿಮ್ಮ ಪ್ರದರ್ಶಿಕತೆಯ ಸನ್ನಿವೇಶದಲ್ಲಿ**

**ನಿಧಾನಗತಿಯಲ್ಲಿ ಆರಂಭಿಸಿ**

ನೀವು ಮೊದಲು ಪ್ರೇಕ್ಷಕರನ್ನು ಎದುರಾದಾಗ ಕ್ಷಣಕಾಲ ನಿಮ್ಮ ನೋಟ್ಸ್‌ಗಳನ್ನು ಸರಿಹೊಂದಿಸಿಕೊಳ್ಳಿ ಹಾಗೂ ಸಾವಾಕಾಶದಿಂದಿರಿ. ಆ ಸನ್ನಿವೇಶವನ್ನು ನಿಮ್ಮ ನಿಯಂತ್ರಣದಲ್ಲಿಡಿ.

**ಕಣ್ಣು ಸಂಪರ್ಕ ಕಾಯ್ದುಕೊಳ್ಳಿರಿ**

ನಿಮ್ಮ ಪ್ರೇಕ್ಷಕರನ್ನು ನೋಡಿರಿ. ಒಂದು ವೇಳೆ ಭಾಷಣ ಕೇಳುವ ಮಂದಿಯ ಗಾತ್ರ ಹೆಚ್ಚಾಗಿ ಹೆದರಿಕೆಯಾಗಿದ್ದರೆ, ಎಡಬಲದಿಂದ ಪ್ರತ್ಯೇಕವಾಗಿ ಇಬ್ಬರನ್ನು ಆಯ್ಕೆ ಮಾಡಿ. ಆ ಜನರೊಂದಿಗೆ ನೇರವಾಗಿ ಮಾತನಾಡಿರಿ.

**ನಿಮ್ಮ ಧ್ವನಿ ಮತ್ತು ಶಬ್ದ ಭಂಡಾರವನ್ನು ನಿಯಂತ್ರಿಸಿ**

ಸಾಧಾರಣ ಧಾಟಿಯಲ್ಲಿ ಅಂದರೆ ಪ್ರೇಕ್ಷಕರು ಗಟ್ಟಿಯಾಗಿ ಕೇಳುವಂತೆ ಮಾತನಾಡಿರಿ. ಹೊಸ ವಿಚಾರಗಳನ್ನು ಯೋಚಿಸುವಾಗ ಅರ್ಥಪೂರ್ಣವಲ್ಲದ ವಿಷಯಗಳಿಗಿಂತ ನಿಶಬ್ದವೇ ಹೆಚ್ಚು ಮಹತ್ವವಾಗಿದೆ.

**ನಿಲುಗಡೆಗೆ ಚಾಲನೆ ನೀಡಿ**

ಹೊಸದಾಗಿ ಬಂದ ಹಲವಾರು ಭಾಷಣಕಾರರು ಬಹಳ ವೇಗವಾಗಿ ಮಾತನಾಡುತ್ತಾ ಅವರ ಅಂಜುಗುಳಿತನವನ್ನು ಪ್ರದರ್ಶಿಸುತ್ತಾ ಪ್ರೇಕ್ಷಕರು ವಿಚಾರಗಳನ್ನು ತಿಳಿದುಕೊಳ್ಳಲು ಬಹಳ ತೊಡಕಬೇಕಾಗುತ್ತದೆ. ನಿಧಾನವಾಗಿ ಮಾತನಾಡುತ್ತಾ ನೀವು ಏನು ಹೇಳುತ್ತಿದ್ದಿರೆಂಬುದನ್ನು ನೀವೇ ಅನುಭವಿಸಿ.

**ಸ್ವಾಭಾವಿಕತೆಗೆ ಮುನ್ನಡೆಯಿರಿ**

ನಿಮ್ಮ ನೋಟ್ಸ್‌ಗಳನ್ನು ಹಿಡಿದಿಟ್ಟುಕೊಳ್ಳಲು ಭಾಷಣ ಸ್ಟಾಂಡ್ ಬಳಸಿ ಸಾಂದರ್ಭಿಕವಾಗಿ ಮತ್ತು ಸಹಜವಾಗಿ ನೀವು ಓಡಾಡಲು ನಿಮ್ಮ ನೋಟ್ಸನ್ನು ನಿಲ್ಲಿಸಿ ನಿಮ್ಮ ಬಟ್ಟೆ ಬರೆ ಅಥವಾ ಇತರೆ ವಸ್ತುಗಳು ನಿಮ್ಮ ಪಾಕೆಟ್‌ನಲ್ಲಿಯ ಯಾವುದೇ ವಿಷಯವನ್ನು ತಿಳಿಸಲು ಪ್ರಯತ್ನಿಸಿ.

ನಿಮ್ಮ ರೂಪುರೇಷೆ ಮತ್ತು ನೋಟ್ಸ್‌ಗಳ ಸಹಾಯದಿಂದ ನೀವು ಮಾತನಾಡುವಾಗ ಅದನ್ನು ಧಿಡೀರ್ ಆಗಿ ಪ್ರದರ್ಶಿಸಬೇಡಿ. ಕೆಲವೊಮ್ಮೆ ಪ್ರೇಕ್ಷಕರು ನಿಮ್ಮ ವಸ್ತು ವಿಷಯದ ಬಗ್ಗೆ ಆಸಕ್ತಿ ತೋರದೇ ಇರಬಹುದು.

ನಿಮ್ಮ ಮುಖ್ಯಾಂಶಗಳನ್ನು ಮನನ ಮಾಡಿ ನಿಮ್ಮ ಭಾಷಣದಲ್ಲಿ ಕೆಲವು ಮುಖ್ಯಾಂಶಗಳನ್ನು ಉಲ್ಲೇಖಿಸುವುದು ಒಳಿತು. ಪ್ರೇಕ್ಷಕರನ್ನು ಹೆಚ್ಚುವರಿ ಐದು ಅಥವಾ ಹತ್ತು ನಿಮಿಷ ಮಾತನಾಡಿ ಅವರನ್ನು ಕಿರಿಕಿರಿಮಾಡಬಾರದು.

**ನಿಮ್ಮ ಪ್ರದರ್ಶಿಕೆಯ ನಂತರ**

**ಕೈಬರಹ ಮಾಹಿತಿಯನ್ನು ಹಂಚಿ**

ನಿಮ್ಮ ಭಾಷಣ ಮುಗಿದ ನಂತರ ಒಂದು ವೇಳೆ ನಾವು ಮಾಹಿತಿ ಆಧರಿಸಿದ ಕೈಬರಹವನ್ನೇನಾದರೂ ತಯಾರಿಸಿದ್ದರೆ ಅದು ಕಡೆಯಲ್ಲಿ ಅವರಿಗೆ ಒದಗಿಸಿ.

**ಪ್ರಶ್ನೆ ಕೇಳಲು ಪ್ರೋತ್ಸಾಹಿಸಿ**

ಸನ್ನಿವೇಶಕ್ಕೆ ಅನುಗುಣವಾಗಿ ನಿಮ್ಮ ಪ್ರದರ್ಶಿಕೆಯ ಆರಂಭದಲ್ಲೇ ಪ್ರೇಕ್ಷಕರು ಪ್ರಶ್ನೆಗಳನ್ನು ಕೇಳಿ ಸಂವಾದ ಏರ್ಪಡಿಸಲು ಹೇಳಿ, ನೀವು ಭಾಷಣ ನಿಲ್ಲಿಸಿದ ನಂತರ ಪ್ರಶ್ನೆ ಕೇಳಲು ತಿಳಿಸಿ. ಪ್ರಶ್ನೋತ್ತರವಾಗಿ ಇಂತಿಷ್ಟೇ ಸಮಯದ ಪರಿಮಿತಿಯನ್ನು ನಿರ್ಧರಿಸಿ.

**ಪ್ರಶ್ನೆಗಳನ್ನು ನೇರವಾಗಿ ಉತ್ತರಿಸಿ**

ಪ್ರಶ್ನೆ ಕೇಳಿದವರನ್ನು ಸ್ವಯಂ ರಕ್ಷಣೆಗಾಗಿ ನಿರೀಕ್ಷಿಸದಿರಿ ಅಥವಾ ಅವರೊಂದಿಗೆ ಚರ್ಚೆಗೆ ತೊಡಗಬೇಡಿ.

**ನಿಯಂತ್ರಣ ಸಾಧಿಸಿ**

ಯಾವುದೇ ಒಬ್ಬ ವ್ಯಕ್ತಿಯು ಭಾಷಣವನ್ನು ನಿಯಂತ್ರಿಸಲು ಅವಕಾಶ ನೀಡಬೇಡಿ. ಒಟ್ಟಾರೆ ಎಲ್ಲಾ ಪ್ರೇಕ್ಷಕರನ್ನು ಭಾಷಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಿರಿ.

**ಸಂತೃಪ್ತಿಯಿಂದ ಸರಿಸಮಾಪ್ತಿ ಮಾಡಿ**

ಕಡೆಯ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಾ ನಿಮ್ಮ ಭಾಷಣ ಮುಗಿಯಲಿರುವ ಸೂಚನೆಯನ್ನು ಹೀಗೆ ಹೇಳಬಹುದು : "ನಾವು ಇನ್ನೊಂದು ಪ್ರಶ್ನೆಯನ್ನು ಕೇಳಲು ಮಾತ್ರ ಸಮಯ ದೊರೆಯಲಿದೆ". ಕೊನೆಯ ಪ್ರಶ್ನೆಗೆ ಉತ್ತರಿಸಿದ ನಂತರ ಪ್ರೇಕ್ಷಕರಿಗೆ ಅವರೊಂದಿಗೆ ಮಾತನಾಡುವ ಅವಕಾಶ ದೊರಕಿದ್ದಕ್ಕಾಗಿ ನೀವು ಅಭಾರಿ ಎಂದು ಹೇಳಿ.

## 2.7 ಸಾರ್ವಜನಿಕ ಭಾಷಣದಲ್ಲಿ ಭಾಷೆ

ಸಾರ್ವಜನಿಕ ಭಾಷಣ ಸನ್ನಿವೇಶದಲ್ಲಿ ಭಾಷೆಯ ಬಳಕೆ ಕುರಿತಂತೆ ಈ ಕೆಳಕಂಡ ಕೆಲವು ಸಲಹೆಗಳನ್ನು ಗಮನಿಸಬಹುದು.

1. ನಿರ್ದಿಷ್ಟ ಪ್ರೇಕ್ಷಕರ ಮಟ್ಟಕ್ಕೆ ಅನುಗುಣವಾಗಿ ಭಾಷೆಯನ್ನು ಆರಿಸಿಕೊಳ್ಳಿ

ಸಾರ್ವಜನಿಕ ಭಾಷಣಕಾರ ಸಾಧ್ಯವಾದಷ್ಟು ಔಪಚಾರಿಕೆ ಅಥವಾ ಜನ ಸಾಮಾನ್ಯರು ಬಳಸುವ ಪದಗಳನ್ನು ಬಳಸಿ. ನೀವು ರಸ್ತೆಯಲ್ಲಿ ಅಥವಾ ಆಪ್ತ ಮಿತ್ರರೊಂದಿಗೆ ಸಂಭಾಷಿಸುವಾಗ ಬಳಸುವ ಭಾಷೆಯನ್ನೇ ಸಾರ್ವಜನಿಕ ಭಾಷಣದಲ್ಲೂ ಬಳಸಬೇಕು. ಪ್ರೇಕ್ಷಕರ ವಾಸ್ತವ ಮಟ್ಟ ಗಮನಿಸಿ ಅದಕ್ಕನುಗುಣವಾಗಿ ಭಾಷೆಯನ್ನು ಅನುಸರಿಸಬೇಕಾಗುತ್ತದೆ.

2. ಪ್ರೇಕ್ಷಕರು ಅರ್ಥ ಮಾಡಿಕೊಳ್ಳುವ ಭಾಷೆ ಆಯ್ಕೆ ಮಾಡಿ

ಪ್ರೇಕ್ಷಕರಿಗೆ ಅರ್ಥವಾಗುವಂತಹ ಪದವಿನ್ಯಾಸ ಬಳಸಿದರೆ ಅವರು ನಿಮ್ಮ ಪದ ಶಬ್ದಭಂಡಾರದ ಬಗ್ಗೆ ಮೆಚ್ಚುಗೆ ಪಟ್ಟರೂ ಅವರಿಗೆ ಮನವರಿಕೆ ಆಗದ ಭಾಷೆಯು ಅವರಿಗೆ ಏನನ್ನೂ ತಿಳಿಸುವುದಿಲ್ಲ, ಇಲ್ಲಾ ಮನವೊಲಿಸಲು ಸಾಧ್ಯವಿಲ್ಲ. ಒಂದು ವೇಳೆ ನೀವು ಪ್ರೇಕ್ಷಕರಿಗೆ ಗೊತ್ತಾಗದ ಭಾಷೆ ಬಳಸುವುದಾದರೆ ಅದನ್ನು ವ್ಯಾಖ್ಯಾನಿಸಿ ಅಥವಾ ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಬೇಕಾಗುತ್ತದೆ.

3. ನಿಮ್ಮಲ್ಲಿ ವಸ್ತು ವಿಷಯ ಮತ್ತು ಸನ್ನಿವೇಶದ ಬಗ್ಗೆ ಭಾಷಾ ದೃಢತೆ ಆಯ್ಕೆ

ಸಾಮಾನ್ಯವಾಗಿ ಕಾನೂನು ಮತ್ತು ವೈದ್ಯಕೀಯ ಪದಗುಚ್ಛಗಳನ್ನು ಸಾರ್ವಜನಿಕ ಭಾಷಣದಲ್ಲಿ ಉಪಯೋಗಿಸಿದಲ್ಲಿ ನಿಮಗೆ ಒಂದು ರೀತಿಯ ಅಸಂತೃಪ್ತಿಯ ಭಾಷೆ ಬರುತ್ತದೆ. ನಿಮ್ಮ ಪರಿಜ್ಞಾನ ಮತ್ತು ಅನುಭವಕ್ಕೆ ತಕ್ಕ ಹಾಗೆ ಭಾಷಾ ದೃಢತೆ ಇರಬೇಕಾಗುತ್ತದೆ. ವಸ್ತು ವಿಷಯವನ್ನು ಹೆಚ್ಚು ವೈಭವೀಕರಿಸಿ ಬಳಸುವ ಅಸಂಬದ್ಧ ಪದಗಳಾಗಲಿ ಮತ್ತು ಅದರ ವಿಶ್ಲೇಷಣೆ ಎದುರಿಸುವ ಸಮಸ್ಯೆಗಳನ್ನು ಅರಿತು ಸರಿಯಾದ ಭಾಷಾ ಪ್ರಯೋಗ ಮಾಡಬೇಕಾಗುತ್ತದೆ. ಸನ್ನಿವೇಶ ಅಥವಾ ಸಂದರ್ಭವೂ ಸಹ ಕೆಲವು ರೀತಿಯ ಭಾಷೆಯ ಅಗತ್ಯತೆಯನ್ನು ಆಗ್ರಹಿಸುತ್ತದೆ.

4. ಉತ್ತಮ ನೈತಿಕ ಮಟ್ಟ ಸೂಚಿಸುವ ಭಾಷೆ ಆಯ್ಕೆ

ನಿಮ್ಮ ಭಾಷೆಯ ಅತಿಶಯೋಕ್ತಿಯಿಂದ ಮತ್ತು ಅತಿ ಸರಳೀಕರಣದಿಂದ ದೂರವಿರಬೇಕು. ನಿಮ್ಮ ಭಾಷೆಯ ಪದಗಳು ಸೂಚಿಸುವ ದೃಷ್ಟಿಕೋನವನ್ನು ಗುರುತಿಸುವ ಅಗತ್ಯವನ್ನು ಹೊಂದಿರಬೇಕು. ಕೇಳುಗರನ್ನು ಅವರ ಜನಾಂಗ, ಗಂಡು/ಹೆಣ್ಣು ಅಥವಾ ಶಾರೀರಿಕ ಅಥವಾ ಮಾನಸಿಕ ವಿಕಲತೆಗಳನ್ನು ತೆಗಳುವ ಭಾಷೆ ವರ್ಜಿತ ಮಾಡಬೇಕು. ನಿಮ್ಮ ಗುರಿಯು ಯಾರನ್ನಾಗಲಿ ವಿರೋಧಿಸುವುದಾಗಲೀ ಇರದೆ ಜನರಿಗೆ ಮಾಹಿತಿ, ಮನವೊಲಿಕೆ ಅಥವಾ ಮನರಂಜನೆ ನೀಡುವುದಾಗಿದೆ.

## 2.8 ಮಾಹಿತಿಪೂರ್ಣ ಮಾತುಗಾರಿಕೆ

ಪ್ರೇಕ್ಷಕರಿಗೆ ಯಾವುದೇ ವಿಷಯ ಅಥವಾ ಚಿಂತನೆ ಬಗ್ಗೆ ಜ್ಞಾನದ ಅರಿವನ್ನು ಹೆಚ್ಚಿಸಿಕೊಳ್ಳುವುದನ್ನು ಮಾಹಿತಿ ಪೂರ್ಣ ಮಾತುಗಾರಿಕೆ ಎಂದು ವ್ಯಾಖ್ಯಾನಿಸಬಹುದು.

ಮಾಹಿತಿ ಪೂರ್ಣ ಮಾತುಗಾರಿಕೆಯ ಉದ್ದೇಶಗಳು ಹೀಗಿವೆ :

1. ಮಾಹಿತಿ ಹಸಿವನ್ನು ಸೃಷ್ಟಿಸುವುದು
2. ಮಾಹಿತಿಯನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಹಕರಿಸುವುದು
3. ಮಾಹಿತಿ ಮತ್ತು ಪ್ರೇಕ್ಷಕರು ನೆನಪಿಸಿಕೊಳ್ಳುವಂತೆ ಮಾಡಲು ಸಹಾಯ ಮಾಡುವುದು
4. ಅಂತಹ ಮಾಹಿತಿಯನ್ನು ಪ್ರೇಕ್ಷಕರು ಅನ್ವಹಿಸಲು ಸಹಕರಿಸುವುದು

**ಮಾಹಿತಿ ಹಸಿವು ಸೃಷ್ಟಿಸುವುದು**

ಮಾಹಿತಿ ಪೂರಕ ಮಾತುಗಾರಿಕೆಯ ಮೊದಲ ಗುರಿಯೆಂದರೆ, ಅದು ಮಾಹಿತಿ ಪಡೆಯುವ ಆಸೆಯನ್ನು ಹಾಗೂ ಮಾಹಿತಿ ಹಸಿವು ಸೃಷ್ಟಿಸುವುದೇ ಆಗಿದೆ. ಹೊಸ ಮಾಹಿತಿಯನ್ನು ಪ್ರೇಕ್ಷಕರು ಯಾವಾಗಲೂ ಸದಭಿರುಚಿಯಿಂದ ಸ್ವಾಗತಿಸುವುದಿಲ್ಲ. ಪ್ರೇಕ್ಷಕರನ್ನು ನಿಮ್ಮ ಭಾಷೆಯ ಮೇಲೆ ಆಸಕ್ತಿ ಕೆರಳಿಸುವಂತೆ ಮಾಡುವುದೇ ಒಂದು ಸವಾಲಾಗಿದೆ.

**ಪ್ರೇಕ್ಷಕರು ಮಾಹಿತಿಯನ್ನು ಮನಗಾಣಲು ಸಹಕರಿಸುವುದು**

ಮಾಹಿತಿ ಪೂರ್ಣ ಮಾತುಗಾರಿಕೆಯಲ್ಲಿ ಪ್ರೇಕ್ಷಕರು ವಸ್ತು ವಿಷಯವನ್ನು ಚೆನ್ನಾಗಿ ಅರ್ಥೈಸಿಕೊಳ್ಳಲು ಸಹಕರಿಸುವುದೇ ಎರಡನೆಯ ಗುರಿಯಾಗಿದೆ. ಪರಿಣಾಮಕಾರಿ ಮಾಹಿತಿ ನೀಡುವ ಸಂವಾಹಕರು ಎಷ್ಟರ ಮಟ್ಟಿಗೆ ಪ್ರೇಕ್ಷಕರು ಮೂಲ ವಿಷಯದ ಬಗ್ಗೆ ಪರಿಜ್ಞಾನ ಹೊಂದಿದ್ದರೆ, ಅಂತಹವರಿಗೆ ಬೇಸರಪಡಿಸುವುದಾಗಲಿ ಅಥವಾ ಮಾಹಿತಿ ತಿಳಿದಿಲ್ಲದವನಿಗೆ ಪೂರಕ ಮಾಹಿತಿ ನೀಡುವ ಕೆಲಸ ಮಾಡಬೇಕು. ನಿಗದಿತ ಕಾಲ ಮಿತಿಯಲ್ಲಿ ಪರಿಣಾಮಕಾರಿ ಆತುಗಾರಲು ಸಂಬಂಧಪಟ್ಟ ವಿಷಯದ ಗಾತ್ರವನ್ನು ಸಮೀಕರಿಸಿ ಮಾಡಬೇಕಾಗುತ್ತದೆ. ಕಡೆಯದಾಗಿ, ಪರಿಣಾಮಕಾರಿ ಮಾತುಗಾರರು ತಮ್ಮದೇ ಆದ ಪರಿಜ್ಞಾನಕ್ಕೆ ಅನುಗುಣವಾಗಿ ವಸ್ತು ವಿಸಯವನ್ನು ಸರಳವಾಗಿ ಮತ್ತು ಸ್ಪಷ್ಟವಾಗಿ ತಿಳಿಹೇಳಬೇಕಾಗುತ್ತದೆ.

**ಪ್ರೇಕ್ಷಕರು ಮಾಹಿತಿಯನ್ನು ನೆನಪಿಡಲು ಸಹಕರಿಸುವಿಕೆ**

ಮಾಹಿತಿ ಪೂರಕ ಮಾತುಗಾರಿಕೆಯ ಮೂರನೆಯ ಉದ್ದೇಶವೆಂದರೆ, ಪ್ರೇಕ್ಷಕರು ನಿಮ್ಮ ಭಾಷಣದ ಪ್ರಮುಖ

ಅಂಶಗಳನ್ನು ನೆನಪಿಸಿಕೊಳ್ಳುವಂತೆ ಮಾಡುವುದೇ ಆಗಿದೆ. ನಿಮ್ಮ ಭಾಷಣದಿಂದ ವಿಶೇಷವಾಗಿ ಪ್ರೇಕ್ಷಕರು ಏನನ್ನು ಕಲಿಯಬೇಕೆಂಬುದು ಒಂದು ವಿಧಾನವಾಗಿದೆ. ಯಾವ ಅಂಶಗಳು ಮುಖ್ಯವಾದವು ಯಾವುದರಲ್ಲಿ ಎಂಬುದನ್ನು ತಿಳಿಸುವುದು ಎರಡನೆಯ ಮಾರ್ಗವಾಗಿದೆ. ಭಾಷಣದಲ್ಲಿ ಪ್ರಮುಖ ಮಾಹಿತಿಯನ್ನು ಎರಡು ಅಥವಾ ಮೂರು ಸರಿ ಪುನರಾವರ್ತಿಸಿ ಅದನ್ನು ಪ್ರೇಕ್ಷಕರು ನೆನಪಿನಲ್ಲಿರುವಂತೆ ಮಾಡುವುದು ಮೂರನೆಯ ವಿಧಾನವಾಗಿದೆ.

**ಪ್ರೇಕ್ಷಕರು ಮಾಹಿತಿಯನ್ನು ಅನ್ವಯಿಸುವಂತೆ ಸಹಕರಿಸುವುದು**

ಭಾಷಣ ಮಾಡಿದ ಅಥವಾ ನಂತರ ಪ್ರೇಕ್ಷಕರು ಮಾಹಿತಿಯನ್ನು ಬೆಳೆಸುವಿಕೆ ಅಥವಾ ಅದನ್ನು ಅಳವಡಿಸಿಕೊಳ್ಳುವಂತೆ ಮಾಡಿ ಹೆಚ್ಚಿಸುವುದೇ ಮಾಹಿತಿ ಪೂರಕ ಮಾತುಗಾರಿಕೆಯ ನಾಲ್ಕನೆಯ ಉದ್ದೇಶವಾಗಿದೆ ಇದಕ್ಕೆ ಕಾರಣವೆಂದರೆ :

ಅ) ತಕ್ಷಣದಿಂದಲೇ ಮಾಹಿತಿಯನ್ನು ಅಳವಡಿಸುವುದರಿಂದ ಅದು ಬಹಳಕಾಲ ನಿಲ್ಲುತ್ತದೆ ಮತ್ತು,

ಆ) ಮಾರ್ಗದರ್ಶನದಲ್ಲಿ ನಿರತವಾದ ಕೆಲಸ ಮಾಡಲು ಸಾಧ್ಯ. ಮಾಹಿತಿ ಪೂರಕ ಮಾತುಗಾರಿಕೆಯ ಮಹತ್ತರ ಉದ್ದೇಶವೆಂದರೆ ಪ್ರೇಕ್ಷಕರ ನಡವಳಿಕೆಗಳಲ್ಲಿ ಬದಲಾವಣೆ, ಪ್ರತಿಸ್ಪಂದನೆ ಹಾಗೂ ಕಾರ್ಯದ ಮೂಲಕ ಪ್ರೇಕ್ಷಕರ ಮನ ಬದಲಾಯಿಸುವಿಕೆಗೆ ನಾಂದಿ ಹಾಡುವುದು.

## 2.9 ಮನವೊಲಿಕಾ ಮಾತುಗಾರಿಕೆ

ಯಾವುದೇ ಒಂದು ವಿಚಾರ, ಸಮಸ್ಯೆ, ಪರಿಕಲ್ಪನೆ ಅಥವಾ ಉತ್ಪನ್ನ ಕುರಿತ ಸಂದೇಶಕ್ಕೆ ಪೋಷಕ ಸದಸ್ಯರ ಅನುಭೂತಿ, ಒತ್ತಾಸೆ ಅಥವಾ ಅವರ ಭಾವನೆಗಳನ್ನು ಬದಲಾಯಿಸುವುದೇ ಮನವೊಲಿಕಾ ಮಾತುಗಾರಿಕೆ ಆಗಿದೆ. ಪ್ರೇಕ್ಷಕರನ್ನು ರೂಪಿಸಿ, ಒತ್ತಾಸೆ ಮೂಡಿಸಿ ಮತ್ತು ಯಾವುದೇ ಸಂದೇಶದ ಕಡೆ ಅವರ ಪ್ರತಿಕ್ರಿಯೆಯನ್ನೂ ಬದಲಾಯಿಸುವುದೇ ಮನವೊಲಿಸಲು ಮೂರು ಉದ್ದೇಶಗಳಾಗಿವೆ.

**ಪ್ರೇಕ್ಷಕರ ಪ್ರತಿಕ್ರಿಯೆಯನ್ನು ರೂಪಿಸುವಿಕೆ**

ಪೂರ್ವಭಾವಿ ನಿಗದಿಪಡಿಸಿದ ಗುರಿಯತ್ತ ಪ್ರೇಕ್ಷಕರನ್ನು ಮತ್ತು ಅವರ ಅನಿಸಿಕೆಗಳನ್ನು ರೂಪಿಸುವ' ಪ್ರಯತ್ನವನ್ನು ಮನವೊಲಿಕಾ ಮಾತುಗಾರ ಭಾಷಣಕಾರ ಮಾಡಬೇಕಾಗುತ್ತದೆ. ಭಾಷಣಕಾರನ ಪರಿಹಾರ ಸಾಧ್ಯತೆಯೆಡೆ ಪ್ರೇಕ್ಷಕರನ್ನು ಹತ್ತಿರ ಹತ್ತಿರ ಸಣ್ಣ ಮತ್ತು ಮನವರಿಕಾ ವಿಚಾರದ ಹಂತಗಳಿಂದ ಸೆಳೆಯಬೇಕಾಗುತ್ತದೆ.

**ಪ್ರೇಕ್ಷಕರ ಪ್ರತಿಕ್ರಿಯೆಗಳ ಒತ್ತಾಯಿಸುವಿಕೆ**

ಪ್ರೇಕ್ಷಕರನ್ನು ಅವರ ನಂಬಿಕೆಗಳು, ಭಾವನೆಗಳು ಮತ್ತು ಮೌಲ್ಯಗಳತ್ತ ಸರಿಹೊಂದಿಸುವುದೇ ಒತ್ತಾಯಿಸುವಿಕೆ ಎಂದರ್ಥ. ವಿದ್ಯಾರ್ಥಿಗಳನ್ನು ಹೇಗೆ ಓದಬೇಕು, ಬರೆಯಬೇಕು ಮತ್ತು ಮಾತನಾಡಬೇಕೆಂದು ಹಾಗೂ ಹಲವಾರು ವಿಷಯಗಳ ವಿಶಾಲ ಪರಿಜ್ಞಾನ ಹೊಂದಿರುವುದು ಶಿಕ್ಷಣ ಕಲಿತವನ ಮೂಲ ಗುರುತು ಎಂದು ಶಿಕ್ಷಣ ತಜ್ಞರು ಮನವೊಲಿಸುವುದೇ ಇದಕ್ಕೆ ಉದಾಹರಣೆ.

ಪ್ರೇಕ್ಷಕರ ಪ್ರತಿಕ್ರಿಯೆಯನ್ನು ಬದಲಾಯಿಸುವಿಕೆ

ಯಾವುದೇ ಉತ್ಪನ್ನ, ಪರಿಕಲ್ಪನೆ ಅಥವಾ ವಿಚಾರದೆಡೆಗೆ ಪ್ರೇಕ್ಷಕರನ್ನು ಪ್ರತಿಕ್ರಿಯೆಯನ್ನು ಬದಲಾಯಿಸುವುದೇ ಮನವೊಲಿಕಾ ಮಾತುಗಾರಿಕೆಯ ಮೂರನೆಯ ಉದ್ದೇಶವಾಗಿದೆ.

## 2.10 ನಡುಕತನವನ್ನು ನಿವಾರಿಸುವುದು

ಭಾಷಣ ಮಾಡುವಾಗ ಬಹಳಷ್ಟು ಜನರಲ್ಲಿ ಒಂದು ರೀತಿಯ ನಡುಕತನದ ಭಾವನೆ ಎದುರಿಸುತ್ತಾರೆ. ಇದನ್ನು ನೀವು ಯಾವುದೇ ಹೆಸರಿನಲ್ಲಿ ಕರೆಯಬಹುದು. ಅಂಜುಗುಳಿತನ ಅಥವಾ ವೇದಿಕೆ ಹೆದರಿಕೆ, ಭಯ, ಭಾಷಣ ಭಯ, ನಾಚಿಕೆತನ, ಭಾಷಣ ದುಗುಡ; ಇದನ್ನು ಇಂಗ್ಲೀಷ್‌ನಲ್ಲಿ ಸ್ಪೀಚ್‌ಫೋಬಿಯಾ ಮನೋವೈಜ್ಞಾನಿಕ ಪದವಾಗಿ ಭಾಷಣ ಭಯ ಎನ್ನುತ್ತಾರೆ. ಒಟ್ಟಾರೆ ಅವೆಲ್ಲವೂ ಸಾರ್ವಜನಿಕ ಭಾಷಣ ಮಾಡುವ ಹೆದರಿಕೆ ಅಥವಾ ಆತಂಕ ಎನ್ನಬಹುದು.

ಸಾರ್ವಜನಿಕ ಭಾಷಣ ಮಾಡುವಿಕೆಯ ನಡುಕತನವೆಂಬುದು ಬೌದ್ಧಿಕ (ಮನಸ್ಸಿನಲ್ಲಿ) ಅಥವಾ ನಡವಳಿಕೆಗಳಲ್ಲಿ (ಶಾರೀರಿಕವಾಗಿ ಪ್ರಕಟಗೊಳ್ಳುವ) ವ್ಯಕ್ತವಾಗುತ್ತದೆ. ಬೌದ್ಧಿಕವಾಗಿ, ಸಾರ್ವಜನಿಕವಾಗಿ ಭಾಷಣ ಮಾಡುವಾಗಲೇ ಮಾತುಗಾರ್‍ನ ನಡುಕತನ ಆರಂಭವಾಗುತ್ತದೆ. ಮನೋಭಾವನೆ ದೃಷ್ಟಿಯಲ್ಲಿ ಹೊಟ್ಟೆಯಲ್ಲಿ ತಳಮಳ, ಕೈಗಳ ಬೆವರುವಿಕೆ, ಒಣಗಿದ ಬಾಯಿ ಮತ್ತು ಅಂತಹ ತುಂಬುಗ ಅಂಶಗಳಾದ "ಉಂ", "ಹೀಗೆ", "ಮತ್ತು", "ನಿಮಗೆ ಗೊತ್ತಿರುವಾಗ" ಅಂತಹ ಪದಗಳು ಭಾಷಣಕಾರನ ನಡುಕತನದ ಸಾಕ್ಷಿಯಾಗುತ್ತದೆ.

ಕೆಲವೊಮ್ಮೆ ಅಂತಹ ವ್ಯಕ್ತಿಗಳು ಸಾರ್ವಜನಿಕವಾಗಿ ಮಾತನಾಡಲು ಹಿಂಜರಿಯುವುದು ಅಥವಾ ಭಾಷಣವು ತೀರಾ ಅಗತ್ಯವಿದ್ದರೂ ಅತ್ಯಲ್ಪ ಅವಧಿಯವರೆಗೆ ಮಾತ್ರ ಮಾತನಾಡುತ್ತಾರೆ.

ಸಾರ್ವಜನಿಕವಾಗಿ ಮಾತನಾಡುವಾಗ ಹೆದರುವಿಕೆ ಸಹಜ. ದಶಕಗಳ ಕಾಲ ಸಾರ್ವಜನಿಕ ಭಾಷಣಕಾರರ ನಡುಕತನದ ಬಗ್ಗೆ ಅಧ್ಯಯನ ಕೈಗೊಂಡಿರುವ ಭಾಷಣ ವಿದ್ವಾಂಸರಾದ ಗೆರಾಲ್ಡ್ ಪಿಲಿಪ್ಸ್ ಹೇಳುವ ಹಾಗೆ, "ಆತಂಕದ ಸ್ಥಿತಿದಲ್ಲಿ ಉದ್ದೀಪನವು ಬಹಳವಾಗಿ ಕಲಿಯುವಿಕೆಗೆ ಅನುವಾಗುತ್ತದೆ". ವಾಸ್ತವವಾಗಿ, ನಿಮ್ಮ ಕೆಲಸವನ್ನು ಮಾಡುವಾಗ ತಕ್ಕ ಮಟ್ಟಿಗೆ ಮುಜುಗರತನ ಉಂಟು ಮಾಡುತ್ತದೆ ; ಒಂದು ವೇಳೆ ನೀವು ಭಾಷಣ ಮಾಡಲು ಹಿಂದೇಟು ಹಾಕುತ್ತಿದ್ದರೆ, ನೀವು ಉತ್ತಮ ಕೆಲಸ ಮಾಡಲು ಸಾಧ್ಯವಾಗುವಿದಿಲ್ಲ. ಏಕೆಂದರೆ, ಕೆಲವು ಆತಂಕಗಳು ಸಕಾರಾತ್ಮಕವಾಗಿದ್ದು, ನಿಮ್ಮ ಗುರಿಯು ನಡುಕತನವನ್ನು ಸರಿದೂಗಿಸುವುದೇ ಹೊರತು ಅದನ್ನು ನಿವಾರಿಸುವುದಲ್ಲ.

ಸಾರ್ವಜನಿಕ ಮಾತುಗಾರಿಕೆಯ ಆತಂಕಗಳನ್ನು ಸಂಪೂರ್ಣ ಹೋಗಲಾಡಿಸುವ ಖಾತರಿಯನ್ನು ಯಾವುದೇ ನಿರ್ದಿಷ್ಟ ಸಂಶೋಧನೆಗಳು ಪ್ರಕಟಿಸದಿದ್ದರೂ ಕೆಲವಾರು ಪರಿಕಲ್ಪನೆಗಳು ಪರಿಗಣಿಸಬಹುದು. ಸಿದ್ಧತೆ ಎನ್ನುವುದು ಬಹಳ ಮಹತ್ತರ ಅಂಶ. ಇದಲ್ಲದೆ, ಹಲವಾರು ಅನುಭವಿ ಭಾಷಣಕಾರರು ತಮ್ಮ ನಡುಕತನವನ್ನು ಕಡಿಮೆಗೊಳಿಸಲು ಹಲವಾರು ತಂತ್ರಗಳನ್ನು ಬಳಸುತ್ತಾರೆ. ವಿಶ್ರಮಿಸುವ ತಂತ್ರಗಳು, ನಿರೀಕ್ಷೆಯನ್ನು ಸೃಷ್ಟಿಸುವಿಕೆ. ಮುಂಬರುವುದನ್ನು ಸಚಿತ್ರಿಸುವುದು, ಆರಂಭಿಕ ಅಣುಕು ಮಾಡುವಿಕೆ ಮತ್ತು ಕಣ್ಣಿನ ನೋಟ ಇವುಗಳಂತಹ ತಂತ್ರಗಳಲ್ಲಿ ಸಾರಿವೆ.

### ವಿರಮಿಸುವ ತಂತ್ರಗಳು

ಭಾಷಣ ಆರಂಭದಲ್ಲಿ ಹಲವು ಸಲ ಧೀರ್ಘ ಉಸಿರು ತೆಗೆದುಕೊಳ್ಳಿ ಮತ್ತು ಶ್ವಾಸಕೋಶದ ಮೂಲಕ ಗಾಳಿಯನ್ನು ಹೊರಹಾಕಿ. ಕೆಲವರು ನಡುಕತನ ನಿವಾರಿಸಲು ಕೈ ಹಿಡಿ ಅಥವಾ ಕೈ ಕುಲುಕುತ್ತಾರೆ. ಕೆಲವಾರು ಮಂದಿ ತಮ್ಮ ಕುರ್ಚಿಯ ಆಸನವನ್ನು ಎರಡೂ ಕೈಗಳಿಂದ ಕೆಳಮುಖವಾಗಿ ಸುಮಾರು ಐದು ಸೆಕೆಂಡುಗಳಷ್ಟು ಹಿಡಿದು ತಮ್ಮ ಕಡೆಗೆ ಎಳೆದುಕೊಳ್ಳುವ

ಅಭ್ಯಾಸವನ್ನು ಐದಾರು ಸಾರಿ ಮಾಡುತ್ತಾರೆ. ಹೀಗೆ ಮಾಡುವುದರಿಂದ ಮಾಂಸ ಖಂಡಗಳ ಹಿಡಿತ ಮತ್ತು ಸಡಿಲಿಕೆಗೆ ಕಸರತ್ತು ನೀಡಿ ಶಾರೀರಿಕ ಆತಂಕವನ್ನು ಮುದಗೊಳಿಸುತ್ತದೆ.

ಜೆಸ್ಟಾಲ್ಟ್ ಮನೋವಿಜ್ಞಾನಿ ಸೂಚಿಸುವ ಹಾಗೆ ಸಾಂಪ್ರದಾಯಿಕವಾಗಿ ಬಹಳಷ್ಟು ಭಾಷಣಕಾರರು ತಮ್ಮ ಆತಂಕವನ್ನು ನಿವಾರಿಸುವಲ್ಲಿ ಅವರ ಭಾವನೆಗಳಿಗೆ ಸ್ಪಂದಿಸಬೇಕೆಂಬ ಹೊಸ ಮಾರ್ಗವನ್ನು ಪ್ರಯತ್ನಿಸಬಹುದು. ಕೆಲವರು ಶಿಫಾರಸ್ಸು ಮಾಡುವಂತೆ, ನಿಮ್ಮ ಆತಂಕವನ್ನು ಹೊರದೋಡಿಸುವುದಕ್ಕಿಂತ, ಅದಾಗದೇ ನಮ್ಮಿಂದ ಹೋಗುವ ಹಾಗೆ ಮಾಡುವುದೇ ಒಳಿತು. ಸಾಮಾನ್ಯವಾಗಿ ನಿಮ್ಮ ಆತಂಕವು ಏಣಿಯ ಮೇಲೇರಿ ಮತ್ತೆ ಅದಾಗಿಯೇ ಕೆಳಕ್ಕೆ ಇಳಿಯುತ್ತದೆ.

**ನಿರೀಕ್ಷೆಯ ಸಂರಚನೆ**

ನೀವು ಚೆನ್ನಾಗಿ ಕಾರ್ಯನಿರ್ವಹಿಸುವಿರಾಗಿ ನಿರೀಕ್ಷೆಯಲ್ಲಿ, ಆಗ ನೀವು ಚೆನ್ನಾಗಿಯೇ ಕಾರ್ಯತತ್ಪರರಾಗುವಿರಿ ಎಂಬುದರ ಆಧಾರದಲ್ಲಿಯೇ ನಿರೀಕ್ಷೆಯ ಸಂರಚನೆ ಮಾಡಲಾಗುವುದು. ನಿಮ್ಮಲ್ಲಿ ನಕಾರಾತ್ಮಕ ನಿರೀಕ್ಷೆಗಳಿದ್ದರೆ, ಅದನ್ನು ನೀವು ಸಕಾರಾತ್ಮಕವಾಗಿ ಪರಿವರ್ತಿಸಬೇಕು. ನಿಮ್ಮ ಹೆದರಿಕೆಯನ್ನು ಹೋಗಲಾಡಿಸಲು ಮೊದಲು ಉತ್ತಮ ಸಂರಚನೆ ಮತ್ತು ಸಹಕಾರವುಳ್ಳ ಭಾಷಣವನ್ನು ತಯಾರಿಸಿ, ಆ ಮಾಹಿತಿಯು ಸಂಬಂಧಪಟ್ಟವರಿಗೆ ತಲುಪುವುದಾಗಿ ನೀವು ಆತ್ಮ ವಿಶ್ವಾಸಹೊಂದಿರಿ. ನೀವು ಅಂದುಕೊಂಡದನ್ನು ಸಫಲವಾಗಿ ಭಾಷಣದ ಮೂಲಕ ಪ್ರದರ್ಶಿಸುವ ತಂತ್ರವನ್ನು ಪ್ರಯೋಗಿಸಿ. ಹೀಗೆ ನೀವು ಭಾಷಣವನ್ನು ಮಾಡುವಾಗ ಸಕಾರಾತ್ಮಕ ಅನುಭವದೊಂದಿಗೆ ಮುನ್ನುಗ್ಗಿದ್ದರೆ ನಿಟ್ಟಿನಲ್ಲಿ ನೀವು ಯಶಸ್ವಿಯಾಗುವಿರಿ.

**ಪೂರ್ವಾಭ್ಯಾಸ**

ಭಾಷಣವನ್ನು ಪರಿಣಾಮಕಾರಿಯಾಗಿ ನೀಡಲು ಬಳಸುವ ಉತ್ತಮ ಮಾರ್ಗಗಳಲ್ಲಿ ಮಾತುಗಾರಿಕೆಯ ವಿಶಿಷ್ಟ ಕಲೆಯನ್ನು ಪ್ರದರ್ಶಿಸುವುದು ಒಂದಾಗಿದೆ. ಅದೆಂದರೆ, ಬಹಳಷ್ಟು ಮುಂದಾಲೋಚನೆಯಿಂದ ಪೂರ್ವಭಾವಿಯಾಗಿ ಭಾಷಣದ ಸಾಕಷ್ಟು ಮಾಹಿತಿಗಳನ್ನು ಬಳಸಿ ಉತ್ತಮವಾಗಿ ರಚಿಸಿ ಮತ್ತು ಸುಸಂಘಟನೆಯ ಲಹರಿಯಿಂದ ತಯಾರಿಸಿ ಮತ್ತು ಅದನ್ನು ಅಭ್ಯಾಸ ಮಾಡಲು ಅಥವಾ ಪೂರ್ವಾಭ್ಯಾಸ ಮಾಡುವ ಅವಕಾಶವನ್ನು ಸದುಪಯೋಗಿಸಿಕೊಳ್ಳಿರಿ.

**ವಿಡಿಯೋ ಮುದ್ರಿಕೆ**

ನಿಮ್ಮ ಭಾಷಣವನ್ನು ವಿಡಿಯೋ ಮುದ್ರಿಕೆ ಮಾಡುವುದು ನಿಮ್ಮ ಭಾಷಣದ ಪ್ರದರ್ಶಿಕತೆಯನ್ನು ಸುಧಾರಿಸುವುದು ಮತ್ತು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುವ ಪ್ರಭಾವಶಾಲಿ ಧೋರಣೆಗಳಲ್ಲಿ ಒಂದು. ನಿಮ್ಮ ಭಾಷಣ ಮಾಡುವ ಅಭ್ಯಾಸದ ಅವಧಿಯಲ್ಲಿ ವಿಡಿಯೋ ಮುದ್ರಿಕೆ ಉಪಯೋಗಿಸಿ ಅಥವಾ ನಿಮ್ಮ ಮಾತುಗಾರಿಕಾ ಶೈಲಿಯನ್ನು ವಿಡಿಯೋ ಬಳಸಿ ಭಾಷಣದ ನಂತರ ನೋಡಲು ಮತ್ತು ಆತ್ಮಾವಲೋಕನ ಮಾಡಲು ಬಳಸಿರಿ.

ನಿಮ್ಮ ನಡಿಗೆ

ನೀವು ಹೇಗೆ ನಡೆಯುವಿರಿ ಎಂಬುದು ನಿಮ್ಮ ಮಾತುಗಾರಿಕೆ ಶೈಲಿಯನ್ನು ಪ್ರಭಾವ ಬೀರಲಿದೆ. ಭಾಷಣ ಮಾಡುವಾಗ ನಿಮ್ಮ ನೀವು ಸಮತಟ್ಟವಾಗಿ ಮತ್ತು ಸಂತೃಪ್ತರಾಗಿ ನಿಲ್ಲಿರಿ. ನೀವು ಕಾಲೀನ ಹಿಮ್ಮಡಿಗಳನ್ನು ಬೀಗ ಮುದ್ರೆಯ ಹಾಗೆ ಹಾಕುವುದರಿಂದ ಶರೀರವೇ ಬಿಗಿಮುಷ್ಠಿಯಾಗಿ ಉಸಿರಾಡಲು ತೊಂದರೆಯನ್ನು ಸೃಷ್ಟಿಸುತ್ತದೆ ಮತ್ತು ಕೆಲವೊಮ್ಮೆ.............................. ಬಾಯಿ ಒಣಗುವಿಕೆ ಹಾಗೂ ಧ್ವನಿ ಕ್ಷೀಣಿಸುವುದು ಸಹಜವಾಗುತ್ತದೆ. ಭಾಷಣ ನೀಡುವ ಪೋಡಿಯು ಸ್ಟಾಂಡ್ ಮೇಲೆ ಒರಗಬೇಡಿ ; ಏಕೆಂದರೆ ನಿಮ್ಮ ಅನುಭವಗಳನ್ನು ಮತ್ತು ಸ್ವಾಭಾವಿಕ ಚಲನೆಯನ್ನು ಅದು ಮರೆಮಾಚುತ್ತದೆ.

## 2.11 ಸಾರ್ವಜನಿಕ ಭಾಷಣಕಾರನ ನೈತಿಕ ಹೊಣೆಗಾರಿಕೆಗಳು

ನೈತಿಕ ಕಾಳಜಿ ಹೊಂದಿರುವ ಸಾರ್ವಜನಿಕ ಭಾಷಣಕಾರರೆಂದರೆ ಸಮಾಜವು ಸಂವಹನಕಾರರಿಗೆಂದು ರೂಪಿಸಲಾದ ಮೌಲ್ಯ ಮಟ್ಟವನ್ನು ವ್ಯಾಖ್ಯಾನಿಸುತ್ತದೆ. ಭಾಷಣ ಮಾತುಗಾರಿಕೆಯ ತರಬೇತಿದಾರರು ದಶಕಕ್ಕೂ ಮಿಗಿಲಾಗಿ ಹೇಳುತ್ತಿರುವ ಹಾಗೆ ಸಮರ್ಥಪೂರ್ಣ ಸಾರ್ವಜನಿಕ ಭಾಷಣಕಾರರು ಅಗತ್ಯ ಪೂರ್ಣವಾಗಿ ಹಾಗೂ ನೈತಿಕ ಮಾತುಗಾರಿಕೆವುಳ್ಳವರಾಗಿದ್ದು ಉತ್ತಮ ನಿರ್ಧಾರಗಳನ್ನು ಕೇಳುಗರು ತೆಗೆದುಕೊಳ್ಳವು ಅನುವು ಮಾಡುವುದು ಮತ್ತು ಏನನ್ನೂ ಹೇಳುವುದರ ಬಗ್ಗೆ ಮುಂದಾಗಿ ತಿಳಿಸಿ. ಸಾಮಾಜಿಕ ಸಿದ್ಧಾಂತಗಳನ್ನು ಪರಿಣಿಸಬೇಕು.

ಮರುಸೃಷ್ಟಿಸುವಿಕೆ ಮತ್ತು ಕೃತಿ ಚಾರ್ಯ ಎಂಬುವುದು ನೈತಿಕ ಭಾಷಣಗಾರಿಕೆ ಕುರಿತ ಎರಡು ಪ್ರಮುಖ ಅತಿಶಯೋಕ್ತಿಗಳಾಗಿವೆ. ಕೃತಿ ಚಾರ್ಯವೆಂದರೆ ಮಾತುಗಾರರೊಬ್ಬರು ಬೇರೊಬ್ಬರು ಬಳಸುವ ವಿಚಾರಗಳು, ಬೇರೆಯವರು ಬಳಸುವ ಪದಗಳನ್ನು ತಮ್ಮದೆಂದು ಮೂಲ ಮಾಹಿತಿಗಳಾಗಿ ಸೂಕ್ತ ಪರಿಹಾರ ನೀಡದೆ ಇರುವುದಾಗಿದೆ.

ಮರುಸೃಷ್ಟಿ ಎಂಬುದು ಮಾಹಿತಿಯನ್ನು ಒಗ್ಗೂಡಿಸುವುದು ಅಥವಾ ಮಾಹಿತಿಯನ್ನು ಅತ್ಯಂತ ಮರುದೃಷ್ಟಿ ಮಾಡುವುದು ಮಾಹಿತಿಯನ್ನು ನಿರೀಕ್ಷಿಸುವುದೇ ಆಗಿದೆ.

**ನೈತಿಕ ಭಾಷಣಕಾರನ ಗುಣಲಕ್ಷಣಗಳು**

ನೈತಿಕ ಭಾಷಣಕಾರನಲ್ಲಿರಬೇಕಾದ ಗುಣಲಕ್ಷಣಗಳನ್ನು ಭಾಷಣ ಕ್ಷೇತ್ರದಲ್ಲಿನ ಸಂಶೋಧನೆಗಳು ನೈತಿಕ ಭಾಷಣಕಾರ. ಈ ಸಂಶೋಧನೆಯ ಆಧಾರದಲ್ಲಿ ನೈತಿಕ ಭಾಷಣಕಾರರೆಂದರೆ :

ವಿಶ್ವಾಸದಿಂದ ಮಾತನಾಡಬೇಕು

ಪ್ರೇಕ್ಷಕರನ್ನು ಗೊತ್ತಿದ್ದು ಸುಳ್ಳುದಾರಿಗೆ ಅಥವಾ ಅರ್ಧಸತ್ಯದ ಗುರುತರ ಹಾನಿಯನ್ನು ಮಾಡಲಾಗದು

ಸತ್ಯವನ್ನು ಪೂರ್ವಭಾವಿಯಾಗಿ ಬದಲಾಯಿಸದಿರಿ

ಅಗತ್ಯ ವಾಸ್ತವಾಂಶಗಳು, ವ್ಯಾಖ್ಯಾನಗಳು, ವಿವರಣೆಗಳು ಮತ್ತು ಮಾಹಿತಿ ಸಮಜಾಯಿಷಿ ನೀಡಿ ಕೇಳುಗರ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವುದು

ಮಾನಸಿಕ ಮತ್ತು ಶಾರೀರಿಕ ಅಡಚಣೆಗಳಿಂದ ಮುಕ್ತವಾದ ಸಂದೇಶವನ್ನು ಉಪಯೋಗಿಸಬೇಕೆ ಹೊರತು ಕೇಳುಗರ ಆತ್ಮ ಸಾಕ್ಷಿಗೆ ವಿರುದ್ಧವಾಗಿ ಯಾವುದೇ ಕಾರ್ಯವನ್ನು ಮಾಡುವಂತೆ ಯಾರನ್ನೂ ಒತ್ತಾಯಿಸಬಾರದು.

ಯಾವುದೇ ಒಂದು ಸಮರ್ಥನೆ ಅಥವಾ ನಂಬಿಕೆಗೆ ಪುರಾವೆಯಾಗಿ ಅಂಕಿ ಅಂಶಗಳು ಅಥವಾ ಇತರೆ ಮಾಹಿತಿಯನ್ನು ಸೃಷ್ಟಿಸುವುದಾಗಲೀ ಅಥವಾ ಹುಟ್ಟು ಹಾಕುವುದಾಗಲೀ ಮಾಡಬಾರದು.

ಮಾಹಿತಿ ಮೂಲವು ಸರಿಯಿಲ್ಲದಿದ್ದರೂ ಅದನ್ನೇ ನೈಜವೆಂದು ನಟಿಸದ ಸೂಕ್ತ ಮೂಲ ಮಾಹಿತಿಯನ್ನು ಗೌರವಿಸಬೇಕು.

ನೈತಿಕವಾಗಿ ಮಾತನಾಡುವಿಕೆಯನ್ನು ಮೂಲಕಲ್ಪನೆಯನ್ನು ಹೀಗೆ ಹೇಳಬಹುದು : ನೀವು ಒಬ್ಬ ನೀತಿ ಬೋಧಕರಾಗಿ ನೀವು ಬೇರೆಯವರೊಂದಿಗೆ ಸಂವಾದಿಸುವಾಗ ಮತ್ತು ನಿಮ್ಮ ಮತ್ತು ಇತರರ ಮೇಲೆ ಪರಿಣಾಮ ಬೀರುತ್ತವೆ : ನಿಮ್ಮ ಕಾರ್ಯಗಳಿಗೆ ಮಾನವೀಯ ಪರಿಣಾಮಗಳಿರುವುದರಿಂದ ನಿಮಗೆ ಒಂದು ರೀತಿಯ ತಾತ್ವಿಕ ಹೊಣೆಗಾರಿಕೆ ಇರುತ್ತದೆ.

## 2.12 ಸಾರಾಂಶ

ಸಾರ್ವಜನಿಕ ಭಾಷಣವೆಂಬುದು, ಸಂವಹನ ಪ್ರಕ್ರಿಯೆಯಾಗಿದ್ದು ಅದು ಒಬ್ಬ ವ್ಯಕ್ತಿ ಮತ್ತು ಪ್ರೇಕ್ಷಕರ ನಡುವಿನ ಸಂವಹನ ಪ್ರಕ್ರಿಯೆಯಾಗಿದೆ. ಸಾರ್ವಜನಿಕ ಭಾಷಣ ಅಥವಾ ಸಂವಹನದಲ್ಲಿ ಏಕೈಕ ಮಾತುಗಾರನು ಒಬ್ಬರಿಂದ ಹಲವು ಸಂವಹನ ಪ್ರಕಾರದ ಮೂಲಕ ವಿಶಾಲ ಪ್ರೇಕ್ಷಕರನ್ನು ತಲುಪುತ್ತಾನೆ.

ಸಾರ್ವಜನಿಕ ಭಾಷಣವು ಹತ್ತಾರು, ನೂರಾರು ಅಥವಾ ಸಾವಿರಾರು ಜನರನ್ನು ಉದ್ದೇಶಿತ ಮಾಡಬಹುದಾಗಿದೆ. ಹೀಗಾಗಿ ಭಾಷಣಕಾರನು ದೊಡ್ಡ ಹಾಗೂ ಕೆಲವೊಮ್ಮೆ ವಿಭಿನ್ನ ವರ್ಗದ ಜನರಿಗೆ ಮನದಟ್ಟುವ ಸಂದೇಶಗಳನ್ನು ರೂಪಿಸುವ ಸವಾಲನ್ನು ಎದುರಿಸಬೇಕಾಗುತ್ತದೆ.

ಸಾರ್ವಜನಿಕ ಸಂವಹನ ಪ್ರಕ್ರಿಯೆಯ ಒಂದು ಸಂಕೀರ್ಣ ವ್ಯವಸ್ಥೆಯಾಗಿದ್ದು ಹಲವಾರು ಮೂಲ ಅಂಶಗಳ ಸಮನ್ವಯತೆಯಿಂದ ಕೂಡಿರುತ್ತದೆ. ಅಂತಹ ಮೂಲಗಳೆಂದರೆ :

ಮಾಹಿತಿ ಮೂಲ, ಸಂಜ್ಞೆ, ಪರಿಕಲ್ಪನೆ ಹಾಗೂ ನಡಾವಳಿಕೆ, ಸಂದೇಶ, ವಾಹಕ, ಗ್ರಾಹಕ, ಹಿನ್ನುಳಿಸುವಿಕೆ ಮತ್ತು ಪರಿಸರ.

ಭಾಷಣವೊಂದನ್ನು ಕೇಳುವಾಗ ಕೇಳುಗನ ಭಾವನೆಗಳು ಮತ್ತು ಆಲೋಚನೆಗಳು ಸರಿಯಾದ ಅರ್ಥವನ್ನು ಕಾಣುವುದರಲ್ಲಿ ಗದ್ದಲ ಉಂಟು ಮಾಡುತ್ತದೆ. ಕೇಳುಗನೊಬ್ಬ ಬಾಷಣ ಕೇಳುವಂತೆ ನಟಿಸಿ ಹಗಲುಗನಸು ಕಾಣುತ್ತಿದ್ದರೆ ಅದುವೇ, ಇದಕ್ಕೆ ಉದಾಹರಣೆ.

ನೈತಿಕ ಕಾಳಜಿ ಹೊಂದಿರುವ ಸಾರ್ವಜನಿಕ ಭಾಷಣಕಾರರೆಂದರೆ ಸಮಾಜವು ಸಂವಹನಕಾರರಿಗೆಂದು ರೂಪಿಸಲಾದ ಮೌಲ್ಯ ಮಟ್ಟವನ್ನು ವ್ಯಾಖ್ಯಾನಿಸುತ್ತದೆ. ಭಾಷಣ ಮಾತುಗಾರಿಕೆಯ ತರಬೇತಿದಾರರು ದಶಕಕ್ಕೂ ಮಿಗಿಲಾಗಿ ಹೇಳುತ್ತಿರುವ ಹಾಗೆ ಸಮರ್ಥಪೂರ್ಣ ಸಾರ್ವಜನಿಕ ಭಾಷಣಕಾರರು ಅಗತ್ಯ ಪೂರ್ಣವಾಗಿ ಹಾಗೂ ನೈತಿಕ ಮಾತುಗಾರಿಕೆವುಳ್ಳವರಾಗಿದ್ದು ಉತ್ತಮ ನಿರ್ಧಾರಗಳನ್ನು ಕೇಳುಗರು ತೆಗೆದುಕೊಳ್ಳವು ಅನುವು ಮಾಡುವುದು ಮತ್ತು ಏನನ್ನೂ ಹೇಳುವುದರ ಬಗ್ಗೆ ಮುಂದಾಗಿ ತಿಳಿಸಿ. ಸಾಮಾಜಿಕ ಸಿದ್ಧಾಂತಗಳನ್ನು ಪರಿಣಿಸಬೇಕು.

## 2.13 ನಿಮ್ಮ ಪ್ರಗತಿ ಪರಿಶೀಲನೆ

1. ಸಾರ್ವಜನಿಕ ಭಾಷಣ ಕಲೆಯ ಗುಣಲಕ್ಷಣಗಳನ್ನು ವಿವರಿಸಿ

2. ಸಾರ್ವಜನಿಕ ಭಾಷಣದಲ್ಲಿ ಭಾಷೆಯ ಪ್ರಾಮುಖ್ಯತೆಯನ್ನು ವಿಷದೀಕರಿಸಿ

3.ಸಾರ್ವಜನಿಕ ಭಾಷಣದ ನೈತಿಕ ಹೊಣೆಗಾರಿಕೆಗಳನ್ನು ಚರ್ಚಿಸಿ

## 2.14 ಹೆಚ್ಚಿನ ಓದಿಗಾಗಿ


1. Paul E Nelson and Judy C Pearson (2004), *Confidence in Public Speaking*, Jaico Publishing House.
2. Andrew D Wolvin, Roy M Berko, Darlyn R Wolvin (2005), *Handbook of Public Communication*, Jaico Publishing House.
3. Mary Ellen Guffey, *Essentials of Business Communication* (4th ed.), South Western College Publishing.
4. Rudolph F Verderber, *The challenge of Effective Speaking* (10th ed.), Wadsworth Publishing Company.
5. Dennis S Gouran, William E Wiethoff, Joel A Doelger, *Mastering Communication* (2nd ed.), Allyn and Bacon.
6. Sarah Trenholm, *Thinking Through Communication*, Allyn and Bacon.

## ಟಿಪ್ಪಣಿ

# ಘಟಕ –3 ಮೌಖಿಕ ಸಂವಹನ ಧ್ವನಿ, ಉಚ್ಚಾರಣೆ ಮತ್ತು ಪದಪ್ರಯೋಗ

ರಚನೆ


3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ಧ್ವನಿ

3.2.1 ಸಮಂಜಸತೆ

3.2.2 ಶಬ್ದದ ಅಂಶಗಳು

3.2.3 ಸಾಮಾನ್ಯ ಧ್ವನಿ ಸಮಸ್ಯೆಗಳು

3.2.4 ಮಾತಿನ ಜೋಡಣೆ

3.3 ಉಚ್ಚಾರಣೆ

3.3.1 ಭಾಷಣದ ಸಮನ್ವಯತೆ

3.3.2 ನೀವು ಇಂಗ್ಲೀಷ್ ಉಚ್ಚರಣೆಯನ್ನು ಏಕೆ ಅಧ್ಯಯನ ಮಾಡಬೇಕು

3.3.3 ಉಚ್ಚರಣಾ ಸಮಸ್ಯೆಗಳು

3.3.4 ಉಚ್ಚಾರಣೆ ಏಕೆ ಮಹತ್ವದ್ದಾಗಿದೆ ?

3.3.5 ಉತ್ತಮ ಇಂಗ್ಲೀಷ್ ಉಚ್ಚಾರಣೆ ಎಂದರೇನು?

3.4 ಪದ ವಿನ್ಯಾಸ (Diction)

3.5 ಸಾರಾಂಶ

3.6 ನಿಮ್ಮ ಪ್ರಗತಿ ಪರಿಶೀಲನೆ

3.7 ಹೆಚ್ಚಿನ ಓದಿಗಾಗಿ

## 3.0 ಉದ್ದೇಶಗಳು

ಧ್ವನಿ ಎಂಬುದು ನೀವು ಪ್ರೇಕ್ಷಕರನ್ನು ಉದ್ದೇಶಿಸಿ ಮಾತನಾಡುವ ಭಾಷಣದ ಪದಗಳನ್ನು ಸಂವಹಿಸುವ ವಾಹನವಾಗಿದೆ. ನೀವು ಮಾತನಾಡುವಾಗ ಪದವಿನ್ಯಾಸಗಳನ್ನು ನೀವು ಉಚ್ಚರಿಸುವಿರಾ ಎಂಬುದು ಅದರ ಅರ್ಥವನ್ನು, ಅರ್ಥಕ್ಕೆ ಪೂರಕವಾಗಿ ಹಾಗು ಕೆಲವೊಮ್ಮೆ ವ್ಯತಿರಿಕ್ತವಾಗಿ ಅರ್ಥವನ್ನು ನೀಡುತ್ತದೆ. ಇದರ ಪರಿಣಾಮ, ನೀವು ಹಾಗೆ ಧ್ವನಿಗೈಯುವಿರಿ ಎಂಬುದು ನಿಮ್ಮ ಮಾತುಗಾರಿಕೆ ಅಥವ ಭಾಷಣದ ಸಾಫಲ್ಯ ಅಥವ ಸೋಲಿನ ವ್ಯತ್ಯಾಸವನ್ನು ಸೂಚಿಸುತ್ತದೆ. ಪರಿಣಾಮಕಾರಿ ಸಂವಹನದಲ್ಲಿ ಉಚ್ಚಾರಣೆ ಮತ್ತು ಪದ ವಿನ್ಯಾಸಗಳೂ ಸಹ ಮಹತ್ತರ ಪಾತ್ರ ವಹಿಸುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಧ್ಯಯನವನ್ನು ಮಾಡಿದ ನಂತರ ನಿಮಗೆ ಕೆಳಕಂಡ ಅಂಶಗಳು ಅರಿವಿಗೆ ಬರುವುದು.

- ಧ್ವನಿ, ಶಬ್ದದ ಅಂಶಗಳು, ಸಾಮಾನ್ಯ ಧ್ವನಿ ಸಮಸ್ಯೆಗಳು,
- ಉಚ್ಚಾರಣೆ, ಮಾತುಗಾರಿಕೆ ಸಂರಚನೆ ಸಾಮಾನ್ಯ ಉಚ್ಚಾರಣಾ ಸಮಸ್ಯೆ,
- ಪದ ವಿನ್ಯಾಸ ಮತ್ತು ಪದವಿನ್ಯಾಸದ ಪ್ರಕಾರಗಳು.

## 3.1 ಪ್ರಸ್ತಾವನೆ

ಮಾತನಾಡುವ ಮುಖ್ಯ ಉದೇಶವೇನೆಂದರೆ ಮೌಖಿಕವಾಗಿ ಮತ್ತು ಪರಿಣಾಮಕಾರಿಯಾಗಿ ಸಂವಹಿಸುವುದೇ ಆಗಿದೆ. ಧ್ವನಿ ಮತ್ತು ಅಭಿವ್ಯಕ್ತಿಸುವಿಕೆ ಪರಿಣಾಮಕಾರಿಯಾಗಿ ವ್ಯವಹರಿಸುವುದಕ್ಕೆ ಪ್ರಮುಖ ಪಾತ್ರ ವಹಿಸುತ್ತದೆ. ಧ್ವನಿ ಎಂಬುದು ಗಂಟಲೊಳಗಿನ ಹಾಗು ಮೌಖಿಕ ಭಾವಗಳು ಅದುರುವಿಕೆಯಿಂದಾಗಿ ಅದು ಹಲವಾರು ಪ್ರಕಾರದ ಏರಿಳಿತಗಳನ್ನು ಒಳಗೊಂಡಿದೆ.

## 3.2 ಧ್ವನಿ

ಧ್ವನಿಯು ಗಂಟಲು, ಮುಖ ಮತ್ತು ಮೂಗಿನಲ್ಲಿ ಹಲವಾರು ಬದಲಾವಣೆ ಹೊಂದಿ ಹೊರ ಬರುತ್ತವೆ. ಶಬ್ದಗಳನ್ನು ಹೊರಹೊಮ್ಮಿಸುವ ಪ್ರಕ್ರಿಯೆ ಯೆಂದರೆ ಬಾಯಿಯಿಂದ ಹೊರಹೋಗುವ ಉಸಿರನ್ನು ನಾನಾ ರೀತಿಯಲ್ಲಿ ಸಂಕುಚಿತ ಗೊಳಿಸಿ, ಅಗಲಿಸಿ ಅಥವಾ ಮುಚ್ಚಿ ಅದನ್ನೇ ಹಲವು ಪ್ರಕಾರದ ಮಾತಿನ ಧ್ವನಿಗೆ ರೂಪಾಂತರ ಗೊಳಿಸುವುದು ಧ್ವನಿ ಎಂಬುದನ್ನು ಗಂಟಲೊಳಗಿನ ಪೆಟ್ಟಿಗೆಯಿಂದ ಮೂಡಿ ಬರುತ್ತದೆ. ಬಾಯಿಯಿಂದ ಉಸಿರು ಬಿಡುವಾಗ ನಿಮ್ಮ ಧ್ವನಿ ಕವಾಟವು ಗಂಟಲು ಬಾಯಿ ಮತ್ತು ಕೆಲವೊಮ್ಮೆ ಮೂಗಿನ ಕವಾಟದಿಂದ ಹೊರ ಬರುತ್ತದೆ. ಈ ಹಿತವಾದ ಶಬ್ದವು ನಮ್ಮ ಭಾಷಾ ವ್ಯವಸ್ಥೆಯ ಪ್ರತ್ಯೇಕ ಶಬ್ದಗಳನ್ನು ನಾಲಿಗೆ ತುಟಿ ಪಾಲೇಟ್ ಮತ್ತು ಹಲ್ಲುಗಳಿಂದ ಒಂದು ನಿರ್ದಿಷ್ಟ ರೂಪತಾಳುತ್ತದೆ. ಹೀಗೆ ವೈಯಕ್ತಿಕ ಶಬ್ದಗಳು ಒಟ್ಟು ಸೇರಿ ಪದಗಳಾಗಿ ಅಥವಾ ಗುರುತಿಸಲ್ಪಡುವ ಮೌಖಿಕ ಸಂಕೇತಗಳಾಗುತ್ತವೆ.

ಧ್ವನಿ ಮತ್ತು ಮಾತುಗಾರಿಕೆಯು ನಿಮ್ಮನ್ನು ಅತ್ಯುತ್ತಮವಾಗಿ ಪರಿಣಾಮಕಾರಿಯಾಗಿ ನಿರೂಪಿಸುತ್ತವೆಂದರೆ, ಜನರು ಅದನ್ನು ಬರೀ ಕೇಳಿದರಷ್ಟೇ ಸಾಲದು, ನೆನಪಿನಲ್ಲೂ ಇಡುವಂತಿರಬೇಕು. ಮೌಖಿಕ ಸಂವಹನದ ಕಾರ್ಯವು ಮಾತುಗಾರಿಕೆ ಮತ್ತು ಭಾಷಾಮಟ್ಟದ ಗುಣಮಟ್ಟವನ್ನು ನಿರೀಕ್ಷಿಸುತ್ತದೆ. ಹಾಗು ಇದು ಜನಪರವಲ್ಲದ ಭವಿಷ್ಯಕ್ಕಿಂತ ಭಿನ್ನವಾಗಿರುತ್ತದೆ. ಉತ್ತಮ ಮಾತುಗಾರಿಕೆಯ ಅಪೇಕ್ಷೆ ಪ್ರೋತ್ಸಾಹಿಸುವ ವೃತ್ತಿ ಜೀವನ ಅಧ್ಯಾಪನರಂಗ ಮಾದ್ಯಮಗಳು, ವಾಣಿಜ್ಯ, ಕಾನೂನು ಮತ್ತು ಅಧಿಕಾರ ಶಾಹಿ ವರ್ಗಗಳಲ್ಲಿ ಹಾಗು ವೈಯಕ್ತಿಕ ಜೀವನದಲ್ಲಿ ಮಹತ್ವ ಪಡೆದಿದೆ.

### 3.2.1 ಸಮಂಜಸತೆ

ಮಾತುಗಾರಿಕೆ ಅಥವಾ ಭಾಷಣವನ್ನು ಸ್ಪಷ್ಟವಾಗಿ ಕೇಳುಗರಿಗೆ ಸುಲಭವಾಗಿ ಅರ್ಥವಾಗುವಂತೆ ಇರಬೇಕೆಂಬುದರ ಜೊತೆಗೆ ಸಮಂಜಸವಾಗಿರಬೇಕು. ಶೂನ್ಯದಲ್ಲಿ ಮಾತುಗಾರಿಕೆ ಮೂಡಿ ಬರುವುದಿಲ್ಲ; ನಿರ್ದಿಷ್ಟ ಉದ್ದೇಶವೊಂದನ್ನು ಅದು ಹೊಂದಿದ್ದು ಅದನ್ನು ಸರಿಯಾಗಿ ಸಮರ್ಥಿಸಲು ನೀವು ಮನವೊಲಿಸ ಬೇಕಾತ್ತದೆ. ಯಾರೊಬ್ಬರೂ ನಿಮ್ಮನ್ನು ಭಾಷಾ ತೊಡುಕುಗಾರರಾಗಿ ಅಥವಾ ನಗೆಕಾರನಾಗಿ ನೋಡಲು ಬಯಸುವುದಿಲ್ಲ.

ನೀವು ಇಚ್ಚಿಸುವ ಧ್ವನಿ ಮತ್ತು ಮಾತುಗಾರಿಕೆಗೆ ರೋಪಿಸುವಲ್ಲಿ ಅದಕ್ಕೆ ಸರಿಯಾಗಿ ಹೊಂದಾಣಿಕೆ ಮಾಡಬೇಕಾಗುತ್ತದೆ. ನಿಮ್ಮ ಧ್ವನಿಮಟ್ಟ ಗುಣಮಟ್ಟ ಮತ್ತು ಧ್ವನಿ ಕೇಳಿಸುವಿಕೆ ಅಗತ್ಯಕ್ಕೆ ತಕ್ಕುದಾಗಿರುತ್ತದೆ.

ಮಾತಿನ ಸಮಂಜಸತೆ ಎಂದರೆ 'ಸಾರ್ವಜನಿಕ ಧ್ವನಿಮಟ್ಟವೆಂದರೂ' ಅದು ಪ್ರತಿಯೊಂದು ಮಾತುಗಾರಿಕಾ ಸನ್ನಿವೇಶಕ್ಕೆ ಹೊಂದಿಕೊಂಡಿರುತ್ತದೆ. ಯಾವುದೇ ಸಂಧರ್ಭಗಳು ಸಾರ್ವಜನಿಕ ಭಾಷಣ, ಟೆಲಿಫೋನ್ ಕರೆ, ಸಂಭಾಷಣೆ ಅಥವಾ ಶಬ್ದಿಕಗಳು ಮೌಖಿಕ ವಿಷಯವನ್ನು ನಿರ್ಧರಿಸುತ್ತವೆ ಇದನ್ನೇ 'ಮಾತುಗಾರಿಕೆ ಪರಿಸರ' ಎನ್ನುತ್ತೇವೆ. ಪ್ರತಿಯೊಂದು ಧ್ವನಿ ಮತ್ತು ಪ್ರಸ್ತುತಪಡಿಸುವಿಕೆಗೆ ಶಾಬ್ದಿಕ ವೈಫಲ್ಯತೆಯ ಪ್ರಬಲ ಹಂಬಲ ಕಾರಣವಾಗುತ್ತದೆ. ಉತ್ತಮ ಮತ್ತು ಸುಶ್ರಾವ್ಯ ಧ್ವನಿಯ ಮಹತ್ವ ವೈವಿಧ್ಯತೆ ಇಲ್ಲದೆ ಹೆಚ್ಚಿನ ಬೆಲೆ ಬಾರದು; ಪ್ರತ್ಯೇಕವಾಗಿ ಯಾವುದೆ ಕೌತುಹಲಕಾರಿ ಅಥವಾ ಆಸಕ್ತಿ ಇಲ್ಲದ ಉತ್ತಮ ಶಬ್ದದ ಧ್ವನಿಗಳು ಪರಿಣಾಮಕಾರಿಯಾಗಲಾರವು.

**ಉಸಿರಿನ ಸದ್ಬಳಕೆ**

ಉತ್ತಮ ಧ್ವನಿ ಮತ್ತು ಮಾತುಗಾರಿಕೆ (ಭಾಷಣ)ಗೆ ಉಸಿರಿನ ಸರಿಯಾದ ಸದ್ಬಳಕೆ ಮತ್ತು ಸದುಪಯೋಗ ಮೂಲಮಾತ್ರವಾಗಿದೆ. ಮಾನವರಿಗೆ ಉಸಿರುತೆಗೆದುಕೊಳ್ಳುವುದು ಮತ್ತು ಬಿಡುವುದು ಎರಡು ಮುಖ್ಯ ಕಾರ್ಯಗಳಾಗಿವೆ. ಉಸಿರಿನ ಮಹತ್ತರ ಕಾರ್ಯವೆಂದರೆ ನಿರಂತರವಾದ ಉಸಿರಾಡುವಿಕೆ. ಇಡೀ ವ್ಯವಸ್ಥೆಯನ್ನು ಸದೃಡವಗಿಟ್ಟು ಎರಡನೆಯ ಕಾರ್ಯವಾದ ಮಾತುಗಾರಿಕೆ ಸಹಾಯವಾಗುತ್ತದೆ. ಉಸಿರನ್ನು ತೆಗೆದು ಕೊಳ್ಳವುದು ಮತ್ತು ಹೊರಹಾಕುವುದು ಬಹುತೇಕ ಒಂದೇ ಸಮಯದಲ್ಲಿದ್ದು ಅದು (vegetative) ಉಸಿರಾಡುವಿಕೆಯನ್ನು ಸೂಚಿಸುತ್ತದೆ. ಇಷ್ಟಾದರೂ, ಭಾಷಣಕ್ಕಾಗಿ ಉಸಿರು ಎಳೆದುಕೊಂಡರೆ, ಶರೀರದೋಳಗೆ ಎಳೆದುಕೊಳ್ಳುವ ಸಮಯವು ಕಡಿಮೆ ಅವದಿಯದಾಗಿದೆ. ಹಾಗೂ ಹೊರಚೆಲ್ಲುವ ಉಸಿರಿನ ಅವಧಿಯು ನಾವು ತಿಳಿಯ ಹೇಳುವ ಆರೋಪಗಳನ್ನು ನಿರ್ಧರಿಸುತ್ತದೆ. ಇದಲ್ಲದೆ, ಭಾಷಣ ಮಾಡಲು ಸುದೀರ್ಘ ಉಸಿರು ಅಗತ್ಯವಾಗಿದೆ

## ಉಸಿರಾಟದ ಪ್ರಕಾರಗಳು

ಉಸಿರಾಟದಲ್ಲಿ ಮೂರು ಮುಖ್ಯ ಅಂಶಗಳನ್ನು ವಿಂಗಡಿಸಬಹುದು

1) ಕಿಬ್ಬೊಟ್ಟೆಯದು
2) ವ್ಯತ್ಯಯನ ಉಸಿರಾಟ (Variation)
3) ಗಂಟಲೊರಗಿಂದ ಉಸಿರಾಡುವಿಕೆ

ಕಿಬ್ಬೊಟ್ಟೆಯಿಂದ ಉಸಿರಾಡುವಿಕೆಯು ಬಹುತೇಕ ತರಬೇತಿಯುಳ್ಳ ಧ್ವನಿ ಮತ್ತು ಭಾಷಣ ವಿಶೇಷತಜ್ಞರ ಕಾರ್ಯಕ್ಷೇತ್ರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಮಾದರಿಯಲ್ಲಿ ಕೆಳಗಿನ ಮೂಳೆಯ ಹಂದರದ ವಿಸ್ತೃತತೆಯು ಕೆಳಮುಖ ಚಲನೆಯನ್ನು ಸೂಚಿಸುತ್ತದೆ. ಉಸಿರನ್ನು ಹೊರಬಿಡುವುದನ್ನು ಪರಿಣಾಮಕಾರಿಯಾಗಿ ತಂತ್ರವು ನಿರ್ವಹಿಸುತ್ತದೆ.

2. ವ್ಯತ್ಯಯನ (Variation) ಉಸಿರಾಟದಲ್ಲಿ ಮಾತುಗಾರನು ತನ್ನ ಭುಜಗಳನ್ನು ಕತ್ತು ಪಟ್ಟಿಯನ್ನು ಮೇಲಕ್ಕೇರಿಸುತ್ತಾನೆ ಇದು ಬಹಳ ತ್ರಾಸದಾಯಕ ಹವ್ಯಾಸವಾಗಿದೆ. ಇದು ಧ್ವನಿಯನ್ನು ಕೆಲವೊಮ್ಮೆ ಧ್ವನಿಪೆಟ್ಟಿಗೆ ಪ್ರವೇಶಕ್ಕೆ ತೊಂದರೆ ಉಂಟುಮಾಡುವುದರಿಂದ ಧ್ವನಿಯು ಹಲವಾರು ಸಾರಿ ಕರ್ಕಶ ಮತ್ತು ಏರುಧ್ವನಿಗೆ ಕಾರಣವಾಗುತ್ತದೆ.

**ಗಂಟಲು ಮೇಲ್ಭಾಗದ ಉಸಿರಾಡುವಿಕೆ:** ಇದರಲ್ಲಿ ಎದೆಯ ಮೂಳೆಗಳ ಹಂದರವು ಒಳ ಉಸಿರಾಟದ ಮೂಲಕ ಹೆಚ್ಚಾಗುತ್ತದೆ ಮತ್ತು ಕೆಳಗಿನ ಎದೆಗೂಡಿನೊಳಗೆ ಉಸಿರನ್ನು ಸೆಳೆಯುತ್ತದೆ.

### 3.2.2 ಶಬ್ದದ ಅಂಶಗಳು

ಧ್ವನಿ ಪ್ರಕಾರಗಳನ್ನು ರೂಪಿಸುವಲ್ಲಿ ಮೂಲಭೂತ ಏರಿಳಿತಗಳನ್ನು ನಾಲ್ಕು ಶಾಬ್ಧಿಕ ಅಂಶಗಳು ನಿರ್ಧರಿಸುತ್ತವೆ. ಅವುಗಳೆಂದರೆ

1) ಶ್ರುತಿ (Piter) 2) ನಾದ ಪ್ರಮಾಣ (Volume) 3) ಗುಣಮಟ್ಟ (Quality)

**1) ಶ್ರುತಿ** (Piter) :ನಿಮ್ಮ ಧ್ವನಿಯ ಏರಿಳಿತವನು ಸೂಚಿಸುವುದೇ Pitch ಈ ಮೊದಲೆ ಗಮನಿಸಿದ ಹಾಗೆ ಧ್ವನಿ ಪೆಟ್ಟಿಗೆಯಲ್ಲಿ ನಿಮ್ಮ ಶಾಬ್ಧಿಕ ಪದಗಳ ಕಂಪನದಿಂದ ಧ್ವನಿ ರೂಪುಗೊಳ್ಳುತ್ತದೆ. ಇದು ಸಮಯದ ಪ್ರತಿ ಘಟಕದಲ್ಲಿ ಕಂಪನಗಳ ಸಂಖ್ಯೆಯಿಂದ ನಿರ್ಧರಿಸಲ್ಪಡುತ್ತದೆ. ಧ್ವನಿಯಲ್ಲಿನ ಈ ವ್ಯತ್ಯಯಗಳು ಶಾಬ್ಧಿಕ ಪ್ರಕಾರಗಳ (ಒಗ್ಗೂಡುವಿಕೆ ಹೆಚ್ಚಿದಂತೆ ಪಿಚ್ ಕಡುಮೆಯಾಗುತ್ತದೆ.) ಶಾಬ್ಧಿಕ ಪ್ರಕಾರಗಳ ಉದ್ದ (ಸಾಂದ್ರತೆ ಹೆಚ್ಚಿದಂತೆ ಪಿಚ್ ಕಡಿಮೆಯಾಗುತ್ತದೆ.), ಮತ್ತು ಶಾಬ್ಧಿಕ ಪ್ರಕಾರಗಳಲ್ಲಿ ಆತಂಕದ ಪ್ರಮಾಣವನ್ನು (ಆತಂಕದ ಹೆಚ್ಚಿದಂತೆ ಪಿಚ್ ಹೆಚ್ಚಾಗುತ್ತದೆ). ನಿರ್ಧರಿಸುತ್ತದೆ. ಯಾವ ರೀತಿ ಪಟೀಲಿನ ತಂತಿಯನ್ನು ಬಿಗಿಮಾಡಿ ಅಥವಾ ಸಡಿಲಗೊಳಿಸಲಾಗುವುದೋ, ಅದೇ ರೀತಿಯಲ್ಲಿ ನಿಮ್ಮ ಧ್ವನಿಯ ಪಿಚ್ ಶಾಬ್ಧಿಕ ಪ್ರಕಾರಗಳನ್ನು ಬಿಗಿಯಾಗಿ ಅಥವಾ ಸರಾಗವಾಗಿ ಉಪಯೋಗಿಸುವ ಮೂಲಕ ಬದಲಾಯಿಸಬಹುದು. ಬಹಳಷ್ಟು ಮಂದಿ ತಾವು ಮಾತನಾಡುವಾಗ ತಮಗೆ ಸರಿ ಎನಿಸಿದಷ್ಟು ಪಿಚ್‌ಮಟ್ಟದಲ್ಲಿ ಹೇಳುತ್ತಾರೆ. ಮತ್ತೆ ಕೆಲವರು ಪಿಚ್ ಮಟ್ಟದ ತೊಡಕುಗಳನ್ನು ಹೊಂದಿದ್ದು ತಮ್ಮ ಉತ್ತಮ ಧ್ವನಿಗಳ ಏರಿಳಿತವನ್ನು ಅತಿ ಹೆಚ್ಚಾಗಿಯೂ ಅಥವಾ ಕಡಿಮೆಯಾಗಿಯೋ ಮಾಡುತ್ತಾರೆ.

ನಾದಪ್ರಮಾಣ ನಾವು ಎಷ್ಟು ಗ್ಟಟ್ಟಿಯಾಗಿ ಮಾತನಾಡುವಿರಿ ಎಂಬುದಾಗಿದೆ. ನೀವು ದೇಹದಿಂದ ಉಸಿರನ್ನು ಹೊರಬಿಡುವಾಗ ಎದೆಗೂಡಿನಿಂದ ಗಾಳಿ ಹೊರಹೋಗುತ್ತದೆ. ಹೀಗೆ ಹಾಕಿದ ಗಾಳಿಯು ದೇಹದ ಮಧ್ಯಭಾಗದ ಮಾಂಸ ಖಂಡಗಳೊಂದಿಗೆ ಸ್ಪಂದಿಸಿ ಮಾತನಾಡಲು ಸಹಾಯವಾಗುತ್ತದೆ. ಹೊರ ಹಾಕುವ ಗಾಳಿಯ ಪ್ರಮಾಣವು ಹೆಚ್ಚಿನ ಶಕ್ತಿಯಿಂದ ನಿಮ್ಮ ಮಾತಿನ ಧ್ವನಿಯಲ್ಲಿ ಹೆಚ್ಚು ಉಂಟಾಗುತ್ತದೆ. ಮಾಂಸ ಖಂಡಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ತಿಳಿಯಲು ನಿಮ್ಮ ಎರಡು ಕೈಗಳನ್ನು ನಿಮ್ಮ ಕಡೆಮಾಡಿ ಬೆರಳುಗಳನ್ನು ಹೊಟ್ಟೆಯ ಮೇಲೆ ಹರಡಿದ ಹಾಗೆ ಮಾಡಿ. ಉದಾಹರಣೆಗೆ 'ah' (ಹಾ) ಎಂದು ಸಾಮಾನ್ಯ ಧ್ವನಿಯಲ್ಲಿ ಹೇಳಿ ಈಗ ನಿವು 'ಯ' ಎಂಬುದನ್ನು ನಿಮಗೆ ಸಾದ್ಯವಾದಷ್ಟು ಗಟ್ಟಿಯಾಗಿ ಜೋರಾಗಿ ಮಾತನಾಡಿರಿ ಯಾವುದೇ ವ್ಯಕ್ತಿಯು ತನ್ನ ಗಾತ್ರಕ್ಕೆ ಅನುಗುಣವಾಗಿರದೆ ತನ್ನ ಧ್ವನಿಯನ್ನು ಗಟ್ಟಿಯಾಗಿ

ಮಾಡಬಹುದು. ಬಹಳಷ್ಟು ವಿದ್ಯಾರ್ಥಿಗಳಿರುವ ತರಗತಿಯಲ್ಲಿ ನೀವು ಗಟ್ಟಿಯಾಗಿ ಮಾತನಾಡಲು ತೊಂದರೆಯಾದರೆ ಕಿಬ್ಬೊಟ್ಟೆಯ ಪ್ರದೇಶದಿಂದ ಉಸಿರನ್ನು ಒತ್ತಡ ಮಾಡಿ ಹೊರಹಾಕಿ.

**2) ನಾದಪ್ರಮಾಣ (Volume) :** ನೀವು ಮಾತನಾಡುವ ವೇಗವು ನಿಮ್ಮ ಗತಿ ಯಾವ ಮಾತಿನ ದಾಟಿಯಲ್ಲಿ ಉತ್ತಮವಾಗಿ ಮಾತನಾಡಬೇಕೆಂಬುದು ವೈಯಕ್ತಿಕ ವಿಷಯವಾದರೂ ಬಹಳಷ್ಟು ಜನರು ಸಾಮಾನ್ಯ ಸಂಭಾಷಣೆಯನ್ನು ಪ್ರತಿ ನಿಮಿಷಕ್ಕೆ 130 ರಿಂದ 180 ಪದಗಳನ್ನು ಬಳಸುತ್ತಾರೆ. ಸರಿಯಾದ ಮಾತನಾಡುವ ಧಾಟಿ ಎಂಬುದು ಕೇಳುಗರು ಎಷ್ಟರ ಮಟ್ಟಿಗೆ ನೀವು ಹೇಳುತ್ತಿರುವುದನ್ನು ಅರ್ಥೈಸಬಹುದು ಎಂಬುದನ್ನು ನಿರ್ಧರಿಸುತ್ತದೆ. ಸಾಮಾನ್ಯವಾಗಿ ಬಹಳ ವೇಗವಾಗಿ ಮಾತನಾಡುವುದು ಸಹ ಕೇಳುಗರಿಂದ ಸ್ವೀಕೃತವಾಗುತ್ತದೆ. ಅದು ನೀವು ಪದಗಳನ್ನು ಹೇಗೆ ಉಪಯೋಗಿಸುತ್ತೀರಾ ಹಾಗೂ ಒತ್ತು ನೀಡಿ ಮತ್ತು ಸಾಕಷ್ಟು ಮೌಖಿಕ ವೈವಿಧ್ಯತೆಯಿಂದ ಕೂಡಿರುತ್ತದೆ ಎಂಬುದನ್ನು ಸೂಚಿಸುತ್ತದೆ ನೀವು ಮಾತುಮುಗಿಸಿದಾಗ ನೀವು ಹೇಳಿ/ ಓದಿ ಮುಗಿಸಿದ ಒಟ್ಟು ಪದಗಳನ್ನು ಮೂರರಿಂದ ಭಾಗಿಸಿದರೆ ಅದುವೇ ಪ್ರತಿ ನಿಮಿಷಕ್ಕೆ ಇಂತಿಷ್ಟು ಪದದ ಬಳಕೆಯನ್ನು ಸೂಚಿಸುತ್ತದೆ. ಒಂದು ವೇಳೆ ನಾವು ಓದುತ್ತಿರುವುದು ಅತಿ ವೇಗ ಅಥವಾ ನಿಧಾನವಾಗಿದೆ ಎಂದು ಭಾವಿಸುವುದಾದರೆ, ಅದೇ ವಿಷಯವನ್ನು ಮತ್ತೆ ಮೂರು ನಿಮಿಷಕಾಲ ಓದಿನೋಡಿ; ಆಗ ಓದುತ್ತಿರುವ ಪದಗಳನ್ನು ಹೆಚ್ಚಿಸಿ ಅಥವಾ ಕಡಿಮೆಗೊಳಿಸಬಹುದು ಎಂಬುದನ್ನು ಮನಗಾಣಿರಿ ಪುನಃ ಒಟ್ಟು ಪದಗಳನ್ನು ಎಣಿಸಿ ಮತ್ತು ಅದನ್ನು ಮೂರರಿಂದ ಭಾಗಿಸಿ. ಮುದಲಭಾರಿಗೆ ಮಾತನಾಡುವ ವೇಗವನ್ನು ಗಣನೀಯವಾಗಿ ಬದಲಾಯಿಸುವುದು ಕಷ್ಟಸಾಧ್ಯ. ಆದರೂ ಅನುಭವದಿಂದ ನೀವು ವೇಗವಾಗಿ ಅಥವಾ ಮಂದಗತಿಯಲ್ಲಿ ನೀವು ಇಚ್ಚಿಸಿದ ಹಾಗೆ ಓದಬಹುದೆಂಬುದನ್ನು ಮನಗಾಣಬಹುದು.

**3) ಗುಣಮಟ್ಟ (Quality):** ನಿಮ್ಮ ಧ್ವನಿ ಅಥವಾ ಧಾಟಿಯೇ ಗುಣಮಟ್ಟ, ಉತ್ತಮ ಧ್ವನಿ ಗುಣಮಟ್ಟವು ಸ್ಪಷ್ಟವೂ ಮತ್ತು ತೃಪ್ತಿದಾಯಕವೂ ಆಗಿದ್ದು ಕಂಪನದ ಸಂಕೀರ್ಣತೆ ಮತ್ತು ಪ್ರಸರಿಸುವಿಕೆಯನ್ನು ಸೂಚಿಸುತ್ತದೆ. ಉದಾಹರಣೆಗೆ ಧ್ವನಿ ಪ್ರಕಾರಗಳು ಮೂಲಭೂತವಾಗಿ ಒಟ್ಟಾರೆ ಕಂಪಿಸುವುದರಿಂದ ರೂಪಿತವಾಗಿದೆ. ಈ ರೀತಿಯ ಕಂಪನ ಕ್ರಿಯೆಯು ಹಲವಾರು ವಿಧಗಳನ್ನು ಹೊಂದಿದೆ. ಪ್ರತಿಯೊಂದು ಧ್ವನಿಯು ತನ್ನದೇ ಆದ ಕಂಪನ ಶಕ್ತಿಯಿಂದ ಕೂಡಿದ ಹಾಗೂ ಪ್ರತಿಧ್ವನಿಯನ್ನು ಗ್ರಹಿಸಲು ಸಾಧ್ಯವಾಗುತ್ತದೆ.

### 3.2.3 ಸಾಮಾನ್ಯ ಧ್ವನಿ ಸಮಸ್ಯೆಗಳು

ಈ ಅಧ್ಯಾಯವು ತರಬೇತಿ ಪಡೆಯದೆ ಕೆಲವೊಮ್ಮೆ ನುರಿತ ಮಾತುಗಾರರು/ ಭಾಷಣಕಾರರ ಸಾಮಾನ್ಯ ಧ್ವನಿ ಸಮಸ್ಯೆಗಳು ಕುರಿತಾಗಿದೆ. ಮೊದಲನೆ ಗುಂಪಿನ ತಪ್ಪುಗಳ (Volume) ಅಶಕ್ತ ನಿಯಂತ್ರಣದಿಂದಾಗಿದೆ. ಗಂಟಲುನಾಳದ ಒಳಗಿನ ಪ್ರದೇಶದಲ್ಲಿನ ಆತಂಕದ ಹೆಚ್ಚಳ ಎರಡನೆಯ ಗುಂಪಿಗೆ ಸೇರಿದ್ದಾಗಿದೆ. ಪ್ಯಾರಂಜಿಲ್ ಗೋಡೆಯೊಂದಿಗೆ ಸೂಕ್ತ ಸಂಪರ್ಕ ಹೊಂದದಿದ್ದರೆ ಅದು ಹಲವಾರು ಸಮಸ್ಯೆಗಳನ್ನು ಸೃಷ್ಟಿಸಬಹುದು.

**(Assimilation)** ಭಾಷಣದಲ್ಲಿ ಅಸಿಮಿಲೇಶನ್ ಎಂಬುದು ಒಂದು ಶಬ್ದದ ಮೇಲೆ ಮತ್ತೊಂದರ ಪ್ರಭಾವವಾಗಿದೆ. ಬೌ ಎಂಬ ಪದವನ್ನು ಹೇಳುವುದಾಗಿ ಭಾವಿಸಿ ಇದಕ್ಕಾಗಿ 'ಬಿ' ಶಬ್ದದ ಉಚ್ಚಾರಣೆ ಮುಗಿಸಲು ತುಟಿಗಳನ್ನು ಒಟ್ಟಿಗೆ ಸೇರಿಸಬೇಕಾಗಿ ಭಾವಿಸಿ, ನಾಲಿಗೆಯು ಈ ಶಬ್ದವನ್ನು ರೂಪಿಸಲು ಸಾಧ್ಯವಾಗದ ಕಾರಣ, ಬಿ ಎಂಬುದು ಎಲ್ಲಾ ಸಾಧ್ಯತೆಗಳಿಂದಲೂ ಬಾಯಿಯ ಅಂಚಿನಡಿ ನಿಲುಗಡೆಯಾಗುತ್ತದೆ. ಈಗ ಬ್ರೌನ್ ಎಂಬ ಪದವನ್ನು ರೂಪಿಸಿ, ಈಗ ನಾಲಿಗೆಯ ಸ್ಥಾನವು ಬದಲಾಗಿದೆ;

ಬಾಯಿಯ ಅಂಚಿನಡಿಯಲ್ಲಿ ರೂಪಿಸಲು ನಾಲಿಗೆಯು ನಿರೀಕ್ಷಿಸುತ್ತದೆ. ಈಗ ನಾವು ತಿಳಿದಿರುವಂತೆ ನಾಲಿಗೆಯ ತುದಿಯ, ಸ್ವಲ್ಪ ಮಟ್ಟಿಗೆ ನಾಲಿಗೆಯ ಮೇಲ್ಭಾಗಕ್ಕೆ ತಿರುಗುತ್ತದೆ. ಹಲ್ಲುಗಳ ಸಹಾಯದಿಂದ ನಾನಾ ರೀತಿಯ ಶಬ್ದಗಳನ್ನು ಉಂಟುಮಾಡುತ್ತದೆ.

ಮೂಗಿನಿಂದ ಬರುವ ಶಬ್ದಗಳು **ಅನುನಾಸಿಕತೆ :** ಮೂಗಿನಲ್ಲಿ ಒಂದು ರೀತಿಯ ಹಚ್ಚಾದ ಧ್ವನಿ Restoration ಧ್ವನಿಗುಣಮಟ್ಟವನ್ನು ಈ ಮೂಗಿನಿಂದ ಉಚ್ಚರಿಸುಚ ವಾಕ್ಯಗಳು ರೂಪುಗೊಳ್ಳುತ್ತದೆ ಇದಕ್ಕೆ ತಾರಾ ವ್ಯಕ್ತಿತ್ವವಾದ Relate ಭಾಷಣವು Palatal structure ಮೂಗಿನಿಂದ ಗಾಳಿಯನ್ನು ಹೊರಹಾಕಲು ಬಳಸಬಹುದು ಪ್ಯಾರೇಟ್ಗಳು ಮೂಗಿನಿಂದ ಬರುವ ಶಬ್ದಗಳ ಕೂಡಿದ್ದರೆ ಹಾನಿಕಾರಕ Palate ಇದ್ದವರೂ ಹೆಚ್ಚಿನ ನಾಸಿಕರಾಗಿರುತ್ತಾರೆ. ಮೂಗಿನಿಂದ ಹೊರಸೂಸುವ ಶಬ್ಧವನ್ನು ಸಾಮಾನ್ಯ Palate ಉಳ್ಳವರೂ ಮಾಡುತ್ತಾರೆ.

**Denasality** ಅಗತ್ಯಕ್ಕೆ ಕಡಿಮೆಯಾಗಿ ಮೂಗಿನಿಂದ ಬಾಯಿಯಲ್ಲಿ ಉಚ್ಚರಿಸುವಾಗ ಡಿನಾಸಿರಿಟಿಗೆ ಉಂಟಾಗುತ್ತದೆ. ನಿಮಗ **Denasality** ಆದಾಗ ನೀವು ಸಂಜೆ ಶೀತಕ್ಕೆ ತುತ್ತಾದಾಗ ಹಾಗೆ ಇರುತ್ತೀರಿ. **Denasality** ಹಲವಾರು ಸಂಭವನೀಯ ಕಾರಣಗಳಿವೆ. ಮೂಲತಃ ಮೂಗು ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲ. ಎರಡೂ ಮೂಗಿನ ಹೊಳ್ಳಗಳು ಸರಿಯಾಗಿರದಿದ್ದರೆ ಅದರಿಂದ ಉಂಟಾಗುವ ಮಾತುಗಳು ಮೂಗಿನಿಂದ ಸ್ಪಷ್ಟವಾಗಿ ಹೊರಬರದೆ ಈ ರೀತಿಯ ಅಸಹಜ ಶಾಬ್ದಿಕ ಸಮಸ್ಯೆ ತಂದೊಡ್ಡುತ್ತದೆ. ಮತ್ತೆ ಕೆಲವರಿಗೆ ನೆಗೆಡಿ ಸೈನಸ್ ಸೊಂಕು ಅಥವಾ ಮೂಗಿನ ಅಲರ್ಜಿಯ ಕಾರಣದಿಂದಾಗಿ ಮೂಗಿನ ದ್ವಾರಗಳು ಉದರಲಾರಂಭಿಸುತ್ತದೆ. ಇದಲ್ಲದೆ ಇತರ ಕಾರಣಗಳೆಂದರೆ ಶ್ವಾಸಕೋಶದಲ್ಲಿ ಒಂದು ರೀತಿಯ ಎದೆ ಕಟಿಕೊಳ್ಳುವಿಕೆ, ಮೂಗಿನೊಳಗೆ ಹೆಚ್ಚುವರಿ ಬೆಳವಣಿಗೆ, ಅಲರ್ಜಿಗಳು, ಉಬ್ಬಿದ ಗಂಟಲುನಾಳ ಅಥವಾ ಊಕವಾದ turbinates.

### 3.2.4 ಮಾತಿನ ಜೋಡಣೆ

ಉಚ್ಚಾರಣೆಯು ಒಂದು ಉತ್ತಮ ಮಾತಿನ ಜೋಡಣೆಯಾಗಿದ್ದು ಅದು ಮೌಖಿಕ ವೈವಿಧ್ಯತೆ ಮತ್ತು ಮಹತ್ವವನ್ನು ಒಳಗೊಂಡಿದೆ. ವೈವಿಧ್ಯತೆ ಎಂಬುದು ಶೃತಿ, ಪ್ರಮಾಣ ಮತ್ತು ಗುಣಮಟ್ಟದ ಸಮತೋಲನದ ಸೂಚಕವಾಗಿದೆ. ಈ ಎಲ್ಲಾ ವೈಯಕ್ತಿಕ ಅಂಶಗಳೆಲ್ಲವೂ ತೃಪ್ತಿಕರವಾಗಿದ್ದಲ್ಲಿ, ಒಟ್ಟಾರೆ, ಜನರ ಮೇಲೆ ಸಕಾರಾತ್ಮಕ ಅಥವಾ ನಕರಾತ್ಮಕ ಪರಿಣಾಮ ಬೀರುತ್ತದೆ. ಪದಗುಚ್ಚಗಳ ಪರಿಣಾಮಕಾರಿ ಬಳಕೆಯು ನಾವು ಹೇಳುವುದನ್ನು ಒತ್ತು ನೀಡಿ ಹೇಳಲು ಸಾಧ್ಯ.

ವಿಷಯವೆಂದರೆ, ಭಾಷಣಕಾರರು ತಾವು ಬಳಸುವ ವಾಕ್ಯಗಳನ್ನು ಹೇಗೆ ಅಭಿವ್ಯಕ್ತ ಪಡಿಸುತ್ತಾರೆಂದು ಹಲವಾರು ರೀತಿಯಲ್ಲಿ ಅರ್ಥೈಸಬಹುದು, ಇದನ್ನು ತಿಳಿಸಲು ಈ ಕೆಳಕಂಡ ವಾಕ್ಯವನ್ನು ಸದ್ದಿಲ್ಲದೆ ಓದಿ.

"ನಾನು ವರದಿಯನ್ನು ಸಿದ್ದಪಡಿಸಲು ಕಛೇರಿಗೆ ಹೋಗುವುದಿಲ್ಲ. ಇದನ್ನು ಬರೆದವರು ಈ ವಾಕ್ಯದಿಂದ ಏನನ್ನು ಹೇಳಲು ಪ್ರಯತ್ನಿಸಿದರು? ಸನ್ನಿವೇಶದ ಹಿನ್ನಲೆಯಿಲ್ಲದೆ, ಯಾರಿಗೆ ಗೊತ್ತು? ಈ ವಾಕ್ಯವನ್ನು ಮೂರು ಸಾರಿ ಗಟ್ಟಿಯಾಗಿ ಓದಿ ಹೇಳಿ. ಮೊದಲನೆಯ ಸಾರಿ 'ನಾನು' ಎರಡನೇಯ ಸಾರಿ 'ಕಛೇರಿಗೂ', ಮತ್ತು ಮೂರನೆಯ ಸಲ 'ವರದಿ'ಗೆ ಒತ್ತು ನೀಡಲು ಪ್ರಯತ್ನಿಸಿ.

ನೀವು ಮೊದಲು 'ನಾನು' ಎಂಬುವುದನ್ನು ಒತ್ತಿ ಹೇಳಿದರೆ, ಅದು ಯಾರು ಹೋದರು ಎಂಬುದಕ್ಕೆ ಉತ್ತರಿಸುತ್ತದೆ. ನೀವು 'ಕಛೇರಿ'ಗೆ ಒತ್ತು ನೀಡಿದ್ದರೆ ಅದು "ನೀವು ಎಲ್ಲಿಗೆ ಹೋಗುತ್ತಿದ್ದೀರಾ" ಪ್ರಶ್ನೆಗೆ ಉತ್ತರ ಸಿಗುತ್ತದೆ. ನೀವು ವರದಿಗೆ ಒತ್ತು ನೀಡಿದರೆ ಪದಗಳ ಮೂಲಕ ಸಂವಹಿಸುವಾಗ ಅರ್ಥವನ್ನಷ್ಟೇ ವೈವಿಧ್ಯವಾಗಿ ಒತ್ತು ನೀಡುವುದು ಬಹಳ ಮುಖ್ಯವಾಗಿದೆ. ಎಷ್ಟರಮಟ್ಟಿಗೆ ಪ್ರೇಕ್ಷಕರು ನಿಮ್ಮನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಾರೆ ಎಂಬುದು ನೀವು ಹೇಗೆ ಮೂರು ಪದಗಳ ವೈವಿಧ್ಯತೆ ಮತ್ತು ಒತ್ತು ನೀಡುವಿಕೆಗಳಿಂದ ಬಹಳಷ್ಟು ಮಟ್ಟಿಗೆ ನಿರ್ಧಾರವಾಗುತ್ತದೆ.

ಮಾತಿನ ಮೂಲಕ ಅಭಿವ್ಯಕ್ತಿಸುವಿಕೆಯನ್ನು ಈ ಕೆಲವು ಹಂತಗಳಿಂದ ನಿರ್ಧರಿಸಬಹುದು :

1. ನಿಮಗೆ ಪರಿಚಯವಿರುವ ಚಿಕ್ಕ ಹೇಳಿಕೆಗಳನ್ನು ಆಯ್ಕೆ ಮಾಡಿ ಮತ್ತು ಅದನ್ನು ಗಟ್ಟಿಯಾಗಿ ಓದಲು ಸಿದ್ಧರಾಗಿ. ನೀವು ಓದಲು ಸಿದ್ಧರಾಗುತ್ತಿದ್ದಂತೆ ಅರ್ಥೈಸುವುದಕ್ಕೆ ಗಮನಹರಿಸಿ ಯಾವ ಪದಗಳನ್ನು ಒತ್ತಿ ಹೇಳಬೇಕೆಂಬುದನ್ನು ನಿರ್ಧರಿಸಿ.
2. ನೀವು ಹೇಳಿಕೆಗಳನ್ನು ಓದುತ್ತಿದ್ದಂತೆ ಅದನ್ನು ಕೇಳುವಂತೆ/ಯಾರಿಗಾದರೂ ಸೂಚಿಸಿ. ಯಾವ ಯಾವ ಪದಗಳು ಎತ್ತರದ ಧಾಟಿ, ಗಟ್ಟಿಯಾಗಿ ಅಥವಾ ಮೃದುವಾಗಿ ಬಂದಿದೆ ಮತ್ತು ಯಾವ ಪದಗಳಿಗೆ ವಿಶೇಷ ಮಹತ್ವ ನೀಡಲಾಗಿದೆ ಎಂಬುದನ್ನು ಆ ವ್ಯಕ್ತಿಯಿಂದ ತಿಳಿದುಕೊಳ್ಳಿರಿ.
3. ಫಲಿತಾಂಶವನ್ನು ನಿಮ್ಮ ಯೋಜನೆಯೊಂದಿಗೆ ಹೋಲಿಸಿ. ಆ ವ್ಯಕ್ತಿಯು ನೀವು ಒತ್ತು ನೀಡಲು ಪ್ರಯತ್ನಿಸಿದ ಪದಗಳನ್ನು ಆಯ್ಕೆ ಮಾಡಿದ್ದನ್ನು ಒಂದು ವೇಳೆ ಓದುವುದಾದರೆ, ನೀವು ನಿಮ್ಮ ಮಾತುಗಾರಿಕೆಯ ಅರ್ಥವನ್ನು ಸ್ಪಷ್ಟೀಕರಣ ನೀಡಲು ಶಾಬ್ದಿಕ ಅಭಿವ್ಯಕ್ತಿಯನ್ನು ಬಳಸುತ್ತೀರಾ.

## 3.3 ಉಚ್ಚಾರಣೆ

ಸಾಂಪ್ರದಾಯಿಕ ಅಥವಾ ವ್ಯವಸ್ಥಿತ ಭಾಷಣದಲ್ಲಿ ಮೂರು ಪ್ರಕ್ರಿಯೆಗಳು ಅಗತ್ಯವಾಗಿದೆ. ಮೊದಲನೆಯದಾಗಿ, ಗಂಟಲಿನಿಂದ ಶಬ್ದವು ಮೂಡಿ ಬರುತ್ತದೆ. ಎರಡನೆಯದಾಗಿ, ಶಬ್ದಗಳು ನಾನಾ ರೀತಿಯ ಪದಗಳಾಗಿ ಪರಿವರ್ತಿತವಾಗುತ್ತವೆ. ಮೂರನೆಯದಾಗಿ, ಭಾಷಣದ ಶಬ್ದಗಳು ಒಂದಕ್ಕೊಂದು ಒಗ್ಗೂಡಿ ಪದಗುಚ್ಛವಾಗಿ ತದನಂತರ ಅದು ಪ್ರಮುಖ ಅಥವಾ ನಿರಂತರ ಭಾಷಣವಾಗುತ್ತದೆ.

ಉಚ್ಚಾರಣೆಯೆಂಬುದು ಭಾಷಣ/ಮಾತಿನ ಶಬ್ದಗಳನ್ನು ಮುಖ್ಯವಾಗಿ ದವಡೆ, ನಾಲಿಗೆ ಮತ್ತು ತುಟಿಯ ಸಹಾಯದಿಂದ ರೂಪಿತವಾಗಿರುತ್ತದೆ. ಯಾವುದೇ ವಿಷಯ ಕುರಿತು ಸಂವಾಹಕನ ಪಾತ್ರ ಮತ್ತು ಉದ್ದೇಶಕ್ಕೆ ಅನುಗುಣವಾಗಿ ಸಾಮಾನ್ಯವಾಗಿ ಭಾಷಣವನ್ನು ನಿರ್ಧಿಷ್ಟವಾಗಿ ಹಾಗು ಉಚ್ಚಾರಣೆಯನ್ನು ಸೂಕ್ತ ರೀತಿಯಲ್ಲಿ ಬಳಸಬೇಕಾಗುತ್ತದೆ. ಕೇಳುಗರ ಆಸಕ್ತಿ ಮತ್ತು ತೀರ್ಮಾನಗಳನ್ನು ಉಲ್ಲಂಘಿಸದಂತೆ ಸೂಕ್ತ ಉಚ್ಚಾರಣೆಯಿಂದ ಭಾಷಣವನ್ನು ಎತ್ತರಕ್ಕೆ ಒಯ್ಯಬಹುದು.

ಸ್ವರಗಳು ಒಗ್ಗೂಡುವಿಕೆ ಉಚ್ಚಾರಣೆಯನ್ನು ಸೃಷ್ಟಿಸುತ್ತದೆ. ಪದವೆಂಬುದು ಕಿವಿಗೆ ಕಟ್ಟು ಚಿತ್ರದ ಹಾಗೆ ಇದ್ದು ಸ್ವರಗಳು ಪೇಂಡಿಂಗ್ ಮತ್ತು ವ್ಯಂಜನ ಚಿತ್ರದ ಚೌಕಟ್ಟಾಗುವುದಾಗಿ ಒಂದು, ಇನ್ನೊಂದನ್ನು ಬಿಟ್ಟು ಸಣ್ಣದಾಗಿ ಕಾಣುತ್ತದೆಂದು ಹೇಳಲಾಗಿದೆ. ಈ ಘಟಕವು ಸ್ವರ ಮತ್ತು ವ್ಯಂಜನಗಳ ಸಮನ್ವಯತೆಯಿಂದ ಪದ ವಿನ್ಯಾಸಗೊಳಿಸಿ ಹಾಗೂ ಅದನ್ನು ಸರಿಯಾಗಿ ಹೇಳಬೇಕಾಗುತ್ತದೆ. ಮತ್ತು ಈ ಮೂಲಕ ಪರಿಣಾಮಕಾರಿಯಾದ ಭಾಷಣ ನೀಡಲು ಸಹಾಯ ಮಾಡುತ್ತದೆ. ಸುಲಭ ಉಚ್ಚಾರಣೆಯು ಈ ಕೆಳ ಕಂಡದನ್ನು ಸೂಚಿಸುತ್ತದೆ :

- ಸಾಮಾನ್ಯವಾಗಿ ಪದಗಳ ಅಥವಾ ಭಾಷೆಯನ್ನು ಮೌಖಿಕವಾಗಿ ಹೇಳುವುದು
- ಯಾರು ಪದವನ್ನು ಹೇಗೆ ಹೇಳುತ್ತಾರೆ ಎಂಬ ವಿಧಾನ.

### 3.3.1 ಭಾಷಣದ ಸಮನ್ವಯತೆ

ಭಾಷಣದ ನಿರೂಪಣಾ ವ್ಯವಸ್ಥೆಗಳಲ್ಲಿ ಪ್ರತಿಯೊಂದು ಪದವನ್ನು ಅದರ ಒಂದೊಂದು ಅಕ್ಷರಗಳನ್ನು ಆಧರಿಸಿ ಉಚ್ಚರಿಸುವ ಎರಡು ಮೂಲ ಮಾರ್ಗಗಳು ಬಳಕೆಯಲ್ಲಿವೆ. ಭಾಷಾ ತಜ್ಞರು ಇದನ್ನು ತಮ್ಮದೇ ದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ.

ಒಂದು ಸರಳ ಮಾರ್ಗವೆಂದರೆ, (ಪಠ್ಯ) ವಸ್ತುವಿನಿಂದ ವಿಶಿಷ್ಟ ಶಬ್ದಗಳ ಬಳಕೆಗೆ ಪದಕೋಶ ಆಧಾರಿತ ವ್ಯವಸ್ಥೆ ಮಾಡುವುದು. ಇದರಲ್ಲಿ ಭಾಷೆಯೊಂದರ ಎಲ್ಲಾ ಪದಗಳು ಮತ್ತು ಅದರ ಸರಿಯಾದ ಉಚ್ಚಾರಣೆಗಳನ್ನು ಕಾರ್ಯಕ್ರಮವೊಂದರಲ್ಲಿ ಸಂಗ್ರಹಿಸಿಡುವುದು ಸೇರಿದೆ. ಇದರ ಪ್ರಕಾರ ಪ್ರತಿಯೊಂದು ಪದವನ್ನು ಪದಕೋಶಗಳಲ್ಲಿ ಕಂಡು ಬರುವ ನಿರ್ದಿಷ್ಟ ಅಕ್ಷರ ಜೋಡಣೆಯ ಅನುಸಾರವಾಗಿ ಉಚ್ಚರಿಸುವ ಇನ್ನೊಂದು ಮಾರ್ಗವು ನಿಯಮನುಸಾರವಾಗಿದ್ದು ಅದರಂತೆ ಎಲ್ಲಾ ಪದಗಳಿಗೂ ಉಚ್ಚಾರಣೆ ನಿಯಮದಂತೆ ಆಯಾ ಪದಗಳ ಅಕ್ಷರ ಜೋಡಣೆಯಂತೆ ಉಚ್ಚರಿಸಬೇಕು. ಇದು ಗಟ್ಟಿಯಾಗಿ ಹೇಳುವುದು ಅಥವಾ ಸಿಂಥಿಟಿಕ್ ಫೋನಿಕ್ಸ್ ವಿಧಾನದ ಕಲಿಕೆ ಮತ್ತು ಓದುಗಾರಿಕೆಗೆ ಹೋಲುತ್ತದೆ.

ಪ್ರತಿಯೊಂದು ಮಾರ್ಗವೂ ಸಾಧಕ ಮತ್ತು ಭಾಧಕಗಳನ್ನು ಹೊಂದಿದೆ. ಪದಕೋಶ ಆದಾರಿತ ವಿಧಾನವು ಅತಿ ಶಿಘ್ರವೂ ಮತ್ತು ವಸ್ತು ನಿಷ್ಠವಾಗಿದ್ದು, ಆದರೆ ಅದು ಪದಕೋಶದಲ್ಲಿ ಕಾಣ ಸಿಗದ ಯಾವುದೇ ಪದವನ್ನು ನೀಡುವುದಾದರೆ ಅದರ ಉದ್ದೇಶವು ಸಂಪೂರ್ಣವಾಗಿ ಸಾಕಾರವಾಗುವುದಿಲ್ಲ. ಪದಕೋಶಗಳ ಗಾತ್ರ ಹೆಚ್ಚಿದಷ್ಟು ನಿರುಪಣಾ ವ್ಯವಸ್ಥೆಗೆ ಲಬ್ಯವಿರುವ ಜ್ಞಾಪನಾ ಸ್ಥಳದಲ್ಲೂ ಹೆಚ್ಚಳ ಕಾಣಬಹುದು. ಇನ್ನೋಂದೆಡೆ, ನಿಯಮಾನುಸಾರ ಮಾರ್ಗವು ಯಾವುದೇ ಒಳಹರಿವುಗಳೊಂದಿಗೆ ಕಾರ್ಯನಿರ್ವಹಿಸುತ್ತದೆ. ಆದರೆ ವ್ಯವಸ್ಥೆಯು ಅನಿಯಮಿತ ಅಕ್ಷರ ಜೋಡಣೆ ಅಥವಾ ಉಚ್ಚಾರಣೆಯ ಸಂಕೀರ್ಣ ಅಂಶಗಳನ್ನು ಒಳಗೊಂಡಿದೆ.

ಸ್ಪಾನಿಷ್ ನಂತಹ ಹಲವಾರು ಬಾಷೆಗಳು ಅದರದೇ ಆದ ಬಹಳ ನಿಯಮಿತ ಬರವಣಿಗೆ ವ್ಯವಸ್ಥೆ ಹೊಂದಿದ್ದು, ಪದಗಳ ಸ್ಪೆಲಿಂಗ್ ಆಧಾರದ ಮೇಲೆ ಉಚ್ಚಾರಣೆಯನ್ನು ನಿರೀಕ್ಷಿಸುವುದು ಬಹಳ ಯಶಸ್ವಿಯಾಗಿದೆ. ಅಂತಹ ಭಾಷಣ ನಿರೂಪಣಾ ವ್ಯವಸ್ಥೆಯ ಭಾಷೆಗಳು ಆಗಿಂದಾಗ್ಗೆ ನಿಯಮಾವಳಿ ವಿಧಾನವನ್ನು ಪದಕೋಶಗಳ ಮೂಲಕ ಕೆಲವಾರು ಪದಗಳು ವಿದೇಶಿ ಹೆಸರುಗಳು ಮತ್ತು ಪಡೆದುಕೊಂಡವರು ಅವರ ಅಕ್ಷರ ಜೋಡಣೆಗಿಂತ ಬಿನ್ನವಾದ ಉಚ್ಚಾರಣೆಯನ್ನು ಹೊಂದಿರುವುದಿಲ್ಲ. ಇನ್ನೊಂದೆಡೆ, ಇಂಗ್ಲಿಷ್ ನಂತಹ ಭಾಷೆಗಳ ಭಾಷಣ ನಿರೂಪಣಾ ವ್ಯವಸ್ಥೆಯಲ್ಲಿ ಬಹಳವಾಗಿ ಅನಿಯಮಿತವಾದ ಅಕ್ಷರ ಜೋಡಣಾ ವ್ಯವಸ್ಥೆ ಇದ್ದು ಅವು ಪದಕೋಶಗಳಲ್ಲಿ ಉಲ್ಲೇಖಿತವಾಗಿರುತ್ತದೆ.

## 3.3.2 ನೀವು ಇಂಗ್ಲೀಷ್ ಉಚ್ಚರಣೆಯನ್ನು ಏಕೆ ಅಧ್ಯಯನ ಮಾಡಬೇಕು

ಮೊದಲ ಪರಿಣಾಮಗಳು :

ಉಚ್ಚಾರಣೆ ಎಂಬುದು ಪ್ರಮುಖವಾಗಿ ನೀವು ಇಂಗ್ಲೀಷ್ ನಲ್ಲಿ ಮಾತನಾಡುವಾಗ ಜನರು ಗಮನಿಸುವುದೇ ಆಗಿದೆ. ಉದಾಹರಣೆಗೆ

ನೀವು ಯಾರನ್ನಾದರೂ ಭೇಟಿಯಾಗಿ ನೀವು ಮೊದಲಿಗೆ ಒಂದೆರಡು ವಾಕ್ಯಗಳಲ್ಲಿ ಮಾತನಾಡಿದ್ದಾಗ ನಿಮ್ಮ ಕೆಟ್ಟ ಶಬ್ದಕೋಶ ಅಥವಾ ಕೆಟ್ಟ ವ್ಯಾಕರಣವನ್ನು ಅವರು ಗಮನಿಸುವುದಾಗಿ ನೀವು ಬಾವಿಸುತ್ತಿರಾ? ಬಹುಶಃ ಇಲ್ಲ. ಆದರೆ ಅವರು ನಿಮ್ಮ ಉಚ್ಚಾರಣೆ ಉತ್ತಮವಾಗಿ ಅಥವಾ ಕೆಟ್ಟದ್ದಾಗಿದ್ದರೆ ಅವರು ಗಮನಿಸುತ್ತಾರೆ. ಒಂದು ವೇಳೆ ನಿಮ್ಮ ಉಚ್ಚಾರಣೆ ಅಸಮರ್ಪಕವಾಗಿದ್ದರೆ, ಅವರು ಕೂಡಲೇ " ಅ ಹುಡುಗ / ಹುಡುಗಿ ಕೆಟ್ಟ ಇಂಗ್ಲೀಷ್ ಮಾತನಾಡುತ್ತಾರೆ" ಎಂದುಕೊಳ್ಳುತ್ತಾರೆ. ಹೀಗೆ ನಿಮ್ಮ ಉಚ್ಚಾರಣೆಯು ನಿವು ಮಾಡಿದ ಪ್ರಥಮ ಅನಿಸಿಕೆಯನ್ನು ಸೃಷ್ಟಿಸುತ್ತದೆ.

ಭಾಷಣಕಾರನೊಬ್ಬ ಪದಗಳನ್ನು ಅಪೂರ್ಣ ತಯಾರಿಯಿಂದಾಗಿ ತಪ್ಪಾಗಿ ಉಚ್ಚರಿಸಿದರೆ ಹಲವಾರು ಕೇಳುಗರು ಬೇಸರ ಪಡುತ್ತಾರೆ. ಸರಿಯಾಗಿ ಉಚ್ಚರಿಸುವ ಪ್ರಕ್ರಿಯೆಯು ಹೆಸರುಗಳು ಮತ್ತು ಅಸಮಾನ್ಯ ಪದಗಳನ್ನು ತಪ್ಪಾಗಿ ಉಚ್ಚರಿಸಿ ಅದರಿಂದ ಮಾತುಗಾರನ ಬಗ್ಗೆ ನಕಾರಾತ್ಮಕ ಭಾವನೆ ಉಂಟು ಮಾಡುವುದನ್ನು ತಪ್ಪಿಸಬಹುದು.

**ಸಂವಹನ :**

ಇಂಗ್ಲೀಷ್ ಕಲಿಯುವ ಆರಂಭದಲ್ಲಿ ಉತ್ತಮ ಉಚ್ಚಾರಣೆಯು ಮಹತ್ತರ ಅಂಶಗಳಲ್ಲಿ ಒಂದಾಗಿದೆ ನೀವು ಹೇಳ ಬೇಕಾದುದನ್ನು ಸುಧಾರಿಸಬಹುದು. ಸರಳವಾದ ಪದಗಳನನ್ನು ಬಳಸಿ ಹೇಳಬಹುದು. ಉತ್ಕೃಷ್ಟ ಶಬ್ಧಕೋಶದ ಪರಿಜ್ಞಾನವಿಲ್ಲದಿದ್ದರು ಅದೇ ರೀತಿಯಲ್ಲಿ ಅತ್ಯತ್ತಮ ವ್ಯಾಕರಣದ ಹಿಡಿತವಿಲ್ಲದೆಯೂ ಸರಳ ವ್ಯಾಕರಣ ರಚನೆಯನ್ನು ನಾವು ಮಾಡಬಹುದಾಗಿದೆ. ಆದರೆ, ಸರಳ ಉಚ್ಚಾರಣೆ ಎಂಬುದು ಇಲ್ಲವೇ ಇಲ್ಲ. ಕೆಟ್ಟ ಉಚ್ಚರಣೆಯ ಪರಿಣಾಮಗಳು ಹೀನಾಯವಾಗಿರುತ್ತವೆ. ಒಂದು ವೇಳೆ ನೀವು ಉತ್ತಮ ಶಬ್ದಕೋಶ ಮತ್ತು ವ್ಯಾಕರಣವನ್ನು ಬಳಸಿದರೂ, 'ಜನರು ನೀವು ಏನನ್ನು ಹೇಳಲು ಇಚ್ಛಿಸಿದುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದಿರಬಹುದು.

ಉದಾಹರಣೆಗೆ ನೀವು ಆಂಗ್ಲ ಪದಗಳಾದ Sleep ಮತ್ತು ghost ಅನ್ನು ತಪ್ಪಾಗಿ ಉಚ್ಚರಿಸಿದಾಗ ಸ್ಥಳೀಯ ಜನರು ನಿಮ್ಮನ್ನು ಅರ್ಥ ಮಾಡಿಕೊಳ್ಳಲು ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಮ್ಮ ಅಭಿಪ್ರಾಯದಂತೆ, ಈವರಡೂ ಪದಗಳನ್ನು ಸರಿಯಾಗಿ ತಿಳಿಯುವ ಮುನ್ನ, ಇಂಗ್ಲೀಷ್ ನಲ್ಲಿ ಈ ಶಬ್ಧಗಳನ್ನು ಉದಾಹರಣೆಗೆ ಸ್ಲೀ (ee) –ಸ್ಲೀಪ್ ಅಥವಾ (o) ಹೋಸ್ಟ್ ಹೇಗೆ ಉಚ್ಚರಿಸಬೇಕೆಂಬುದನ್ನು ನಿಮಗೆ ತಿಳಿದಿರಬೇಕು.

### 3.3.3 ಉಚ್ಚರಣಾ ಸಮಸ್ಯೆಗಳು

ಹಲವಾರು ಸಾಮಾನ್ಯ ಉಚ್ಚಾರಣಾ ಸಮಸ್ಯೆಗಳು ಮತ್ತು ಅದರ ಕಾರಣಗಳನ್ನು ನೀವು ಮನಗಂಡಿರಬೇಕಾಗುತ್ತದೆ. ಏನ್ನನ್ನು ಹೇಳುತ್ತೀರಾ ಎಂಬುದಕ್ಕಿಂತ ನೀವು ಹೇಗೆ ಮಾತನಾಡುತ್ತೀರಾ ಎಂಬುದನ್ನು ಮೌಲಮಾಪನ ಮಾಡುತ್ತಾರೆ. ಈ ರೀತಿಯ ಕೆಲವು ಸಾಮಾನ್ಯ ಪ್ರಕಾರಗಳು ಮತ್ತು ಉಚ್ಚರಣಾ ಸಮಸ್ಯೆಗಳು ಹೀಗಿದೆ.

### 1 ಅಸಮರ್ಪಕ ಸ್ಪಷ್ಟೋಚಾರಣೆ

ಮಾತನ್ನು ಸ್ಪಷ್ಟವಾಗಿ ಉಚ್ಚರಿಸಲು ಯಾವುದೇ ಹಿಂಜರಿಕೆ ಸಲ್ಲದು ಉದಾಹರಣೆಗೆ ಆಂಗ್ಲ ಪದಗಳಾದ "error" ಗೆ ನೀವು "air" ಅಂದಾಗಲೀ ಅಥವಾ "didn't ಗೆ dint" ಎಂದು ಉಚ್ಚರಿಸುವಂತಿಲ್ಲ. ನೀವು ಸಿದ್ಧಪಡಿಸಿದ ಭಾಷಣವನ್ನು ಅಭ್ಯಾಸ ಮಾಡುತ್ತಿರುವಾಗ ನೀವು ತಪ್ಪಾಗಿ ಉಚ್ಚರಿಸುವ ಪದಗಳ ಬಗ್ಗೆ ಜಾಗ್ರತೆ ಇರಲಿ. 'going' doing' ಮತ್ತು 'watching' ಪದಗಳ ಕಡೆಯಲ್ಲಿ ಬರುವ 'ing' ಬಳಸಬೇಕೇ ಹೊರತು ಕಡೆಯ ಅಕ್ಷರ 'g' ಅನ್ನು ನುಂಗಿ ಹಾಕಬಾರದು.

### 2. ನಟನೆ /ಸೋಗು

ಹೊಸ ಇಂಗ್ಲೆಂಡ್ ಮತ್ತು ದಕ್ಷಿಣದಲ್ಲಿ ಕಾಣುವ ಭಾಷಣದಲ್ಲಿ "either" ಎಂಬುದನ್ನು "eyethur" ಎಂದು ಉಚ್ಚರಿಸಿದರು. ಅದನ್ನು ಸಾಮಾನ್ಯವಾಗಿ ಸ್ವೀಕರಿಸಲಾಗುತ್ತದೆ; ಆದರೆ ಅದು ಪಾಶ್ಚಿಮಾತ್ಯ ಅಥವಾ ಮಧ್ಯ ಪ್ರಾಚ್ಯ ರಾಜ್ಯಗಳಲ್ಲಿ ಅಂತಹ ಬದಲಾದ ನಟನೆಯ ಉಚ್ಚಾರಣೆ ಅಸಂಬದ್ಧವಾಗುತ್ತದೆ. ನೀವು ಪ್ರೇಕ್ಷಕರನ್ನು ಕುರಿತು ಮಾತನಾಡಲು ಹೊರಟರೆ, ಅಂತಹ ಪದಗಳ ಉಚ್ಚಾರಣೆಯನ್ನು ಸೂಕ್ತವಾಗಿ ಬಳಸಬೇಕು ಹಾಗೂ ಅನಗತ್ಯ ಸ್ವರ ಕಂಠ ತೋರಬಾರದು.

### 3. ಸರಿಯಾದ ಉಚ್ಚಾರಣೆಯ ಅಜ್ಞಾನ

ಬಹಳಷ್ಟು ಸಾರಿ ನಮ್ಮ ಶಬ್ದ ಭಂಡಾರವು ಮಾತನಾಡುವ ಶಬ್ದಕೋಶಕ್ಕಿಂತ ಬಹಳ ಭಿನ್ನವಾಗಿರುತ್ತದೆ. ಕೆಲವೊಮ್ಮೆ ಗಟ್ಟಿಯಾಗಿ ನೀವು ಓದುತ್ತಿರುವಾಗ ಎದುರಾಗುವ ಪದವೊಂದನ್ನು ಅರ್ಥಮಾಡಿಕೊಳ್ಳುವಿರಾದರೂ ಆದರೆ ಅದು ಮಾತನಾಡುವ

ಶಬ್ಧಕೋಶದಲ್ಲಿ ಅಂಗವಾಗಿರುವುದಿಲ್ಲ. ಅಥವಾ ನಿಮಗೆ ಸಂಪೂರ್ಣವಾಗಿ ಅಪರಿಚಯವಿರುವ ತಾಂತ್ರಿಕ ಪದ ಅಥವಾ ಹೆಸರನ್ನು ಎದುರಿಸಬೇಕಾಗುತ್ತದೆ. ನೀವು ಸಾರ್ವಜನಿಕ ಭಾಷಣಕ್ಕಾಗಿ ಗಟ್ಟಿಯಾಗಿ ಹೇಳುವ ಹವ್ಯಾಸದ ತಯಾರಿ ನಡೆಸುತ್ತಿದ್ದರೆ ನೀವು ಬಳಸುವ ಪದಗಳ ಸೂಕ್ತ ಉಚ್ಚರಣೆಗಾಗಿ ನಿಘಂಟನ್ನು ಸದಾ ಬಳಸುವುದು ಉತ್ತಮ.

### 4. ಸ್ವರ ಕರ್ಕಶ

ಕೆಲವೊಮ್ಮೆ ಪದಗಳನ್ನು ಸ್ವರ ಕರ್ಕಶದಿಂದಾಗಿ ತಪ್ಪಾಗಿ ಉಚ್ಚರಿಸಬೇಕಾಗುತ್ತದೆ. ಉದಾಹರಣೆಗೆ : 'milk' ಗೆ ಬದಲಾಗಿ 'melk', 'Secratory' ಗೆ 'sekatgry, many's, 'minny', 'just' ಗೆ jist mumkin' ಗೆ 'munkin' ಮತ್ತು 'get' ಎಂದು ಹೇಳಲು 'git' ಎಂದರೆ ಅಪಾರ್ಥವಾಗುತ್ತದೆ.

### 5. ನಿಯಮಿತ ರೂಢಿಯಲ್ಲಿರದ ಉಚ್ಚಾರಣೆ

ಒಂದು ವೇಳೆ ಸಾಮಾನ್ಯ ಅಮೆರಿಕದ ಭಾಷಣವು ಒಂದು ರೂಢಿಯಲ್ಲಿದೆ ಎಂದು ಭಾವಿಸುವುದಾದರೆ ಹಲವಾರು ಉಚ್ಚಾರಣೆಗಳು ಸಂವಹನ ಆಧಾರಿತ ವಾಣಿಜ್ಯ, ಶಿಕ್ಷಣ ಮತ್ತು ವೃತ್ತಿಪರ ಉದ್ಯೋಗದಲ್ಲಿ ಸಾಮಾನ್ಯವಾಗಿ ಸ್ವೀಕೃತಿ ಆಗಲಾರದು. ಉಚಾರಣೆ ಸರಿಯಾದ ರೂಢಿಯಲ್ಲಿರದಿದ್ದರೆ 'axed' ಎಂಬುದು 'Asked', 'sumptin' ಎಂಬುದು 'something' ಮತ್ತು 'pitcher' ಎಂಬುದು 'picture' ಆಗಲಾರದು.

ಅಪಕ್ವ ಉಚ್ಚಾರಣೆಯು ಅಪೂರ್ಣ ಸಿದ್ದತೆಯನ್ನು ಸೂಚಿಸುತ್ತದೆ. ಸರಿಯಾಗಿ ಮಾತನಾಡುವುದು ಯಾವುದೇ ಹೆಸರು ಮತ್ತು ಅಸಮಾನ್ಯ ಪದಗಳನ್ನು ತಪ್ಪು ಉಚ್ಚರಿಸಿ ಭಾಷಣಕಾರನ ಬಗ್ಗೆ ನಕಾರಾತ್ಮಕ ಭಾವನೆಯನ್ನು ತಡೆಗಟ್ಟಬಹುದು. ಸರಳ ಪದಪ್ರಯೋಗವು ಮೌಖಿಕ ಶೈಲಿಯ ಅಂಶವಾಗಿದ್ದು ಸರಿಯಲ್ಲದ ಉಚ್ಚಾರಣೆಯನ್ನು ಕಡಿಮೆಗೊಳಿಸುವ ಅವಕಾಶಗಳನ್ನು ನೀಡುತ್ತದೆ.

ಯಾವುದೇ ಅನುಮಾನ ಬಂಧರೆ ಉಚ್ಚಾರಣೆಯನ್ನು ತಿಳಿಸುವ ಆಂಗ್ಲ ಭಾಷೆಯ ಅಥವಾ ವಿದೇಶಿ ಭಾಷಾ ನಿಘಂಟಾಗಲಿ, ವಿಶ್ವಕೋಶವಾಗಲೀ ಅದಕ್ಕೆ ಸಂಬಂಧ ಪಟ್ಟದನ್ನು ನಿಮ್ಮ ಗ್ರಂಥಾಲಯ ಪರಾಮರ್ಶನ (reference) ವಿಭಾಗವನ್ನು ಸಂಪರ್ಕಿಸಿ.

### 3.3.4 ಉಚ್ಚಾರಣೆ ಏಕೆ ಮಹತ್ವದ್ದಾಗಿದೆ ?

ನಿಮ್ಮ ಉಚ್ಚಾರಣೆಯು ಬಹಳ ಮುಖ್ಯವಾಗಿದ್ದು ಅದು ನಿಮ್ಮ ಮೊದಲ ಭಾವನೆಯನ್ನು ರೂಪಿಸುವುದಾಗಿ ಈ ಮೋದಲೇ ತಿಳಿಸಿದ್ದೇವೆ. ಇದು ಬಹಳಷ್ಟು ಸತ್ಯ ನಿಮಗೆ ಸಾಧ್ಯವಿದ್ದಲ್ಲಿ ಪ್ರಬಲವಾದ ವಿದೇಶಿ ಉಚ್ಚಾರಣಾ ರೀತಿಯಲ್ಲಿ ಉತ್ತಮ ಇಂಗ್ಲೀಷ್ ನಲ್ಲಿ ಮಾತನಾಡಿರುವುದು ಯಾರೊಬ್ಬರೂ ಹೇಳಲಾರರು. ಇದು ಇನ್ನು ವಿಶಾಲವಾದುದು. ನಿಮ್ಮಲ್ಲಿ ಸಂತೋಷದಾಯಕ ಉಚ್ಚಾರಣಾ ರೀತಿಯಲ್ಲಿ ಇದ್ದರೆ ಜನರು ಅವರಾಗಿಯೇ ನಿಮ್ಮೊಂದಿಗೆ ಮಾತನಾಡಲು ಖುಷಿ ಪಡುತ್ತಾರೆ. ಅವರು ನಿಮ್ಮೊಂದಿಗೆ ಸಮಯ ಕಳೆಯಲು ಇಚ್ಚಿಸುತ್ತಾರೆ. ಇನ್ನೊಂದೆಡೆ ನಿಮ್ಮ ಉಚ್ಚಾರಣ ರೀತಿ ಕೆಟ್ಟದ್ದಾಗಿದ್ದರೆ ಉದ್ದೇಶಪೂರ್ವಕವಾಗಿ ಅಥವಾ ತಾವಾಗಿಯೋ ಮನಗಾಣದೇ ಜನರು ನಿಮ್ಮೊಂದಿಗೆ ವ್ಯವಹರಿಸಲು ನಿರಾಕರಿಸಬಹುದು.

ಒಂದು ಉತ್ತಮ ಸುದ್ದಿಯಾದರೆ ನೀವು ಮಾತನಾಡುವಾಗ ಉಚ್ಚಾರಣೆಯು ಅರ್ಥಪೂರ್ಣವು ಮತ್ತು ಸರಿಯಾದ ಇಂಗ್ಲೀಷ್‌ನ್ನು ಕಾರ್ಯತತ್ಪರರಾಗಬೇಕು. ಇದರಿಂದ ಉತ್ತಮ ಉಚ್ಚಾರಣೆ ಸಾಧ್ಯ. ನೀವು ಇಂಗ್ಲೀಷಿನ ಸರಿಯಾದ ಶಬ್ದಗಳ

ಕಲಿಕೆ ಧ್ವನಿ ಮುದ್ರಿಕೆಗಳನ್ನು ಕೇಳುವ, ಇಂಗ್ಲೀಷ್ ಭಾಷಾ ಟೆಲಿವಿಷನ್ ಕಾರ್ಯಕ್ರಮಗಳನ್ನು ನೋಡುವ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದು.

### 3.3.5 ಉತ್ತಮ ಇಂಗ್ಲೀಷ್ ಉಚ್ಚಾರಣೆ ಎಂದರೇನು?

ಇಂಗ್ಲೀಷ್ ನ ಉಚ್ಚಾರಣೆಯಲ್ಲಿ ಮೂರು ಸಾಧ್ಯತೆಗಳಿವೆ.

- ಮಟ್ಟ 1: ನೀವು ಏನನ್ನು ಹೇಳುತ್ತಿದ್ದೀರೆಂದು ಜನರು ಅರ್ಥ ಮಾಡಿಕೊಳ್ಳುವುದಿಲ್ಲ. ನೀವು ಇಂಗ್ಲೀಷ್ ಪದಗಳ ತಪ್ಪು ಶಬ್ದಗಳನ್ನು ಬಳಸುತ್ತೀರಾ.
- ಮಟ್ಟ 2 : ಜನರು ನೀವು ಏನನ್ನು ಹೇಳಲು ಇಚ್ಚಿಸುವಿರಾ ಎಂಬುದನ್ನು ಅರ್ಥೈಸಿಕೊಳ್ಳುತ್ತಾರೆ. ಆದರೆ ನಿಮಗೆ ಹೇಳಲು ಅತೃಪ್ತಿಕರವಾಗುತ್ತದೆ.
- ಮಟ್ಟ 3 : ನೀವು ಹೇಳುವುದನ್ನು ಜನರು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ನಿಮ್ಮ ಇಂಗ್ಲೀಷ್ ಕೇಳಲು ಸಂತೋಷದಾಯಕವಾಗಿದೆ.

ಮೂರನೆಯ ಮಟ್ಟವನ್ನು ಉತ್ತಮ ಉಚ್ಚಾರಣೆ ಎಂದು ಕರೆಯುತ್ತೇವೆ. ಉತ್ತಮ ಉಚ್ಚಾರಣೆಯು ಪರಿಪೂರ್ಣ ಅಮೆರಿಕನ್ ಅಥವಾ ಬ್ರಿಟಿಷ್ ಉಚ್ಚಾರಣಾ ರೀತಿಯಲ್ಲಿ ಎಂಬುದನ್ನು ಗಮನಿಸಬೇಕಾಗುತ್ತದೆ.

ಆದರೆ ನಿಮ್ಮ ಉಚ್ಚಾರಣಾ ರೀತಿ/ ಧಾಟಿ ಅಮೆರಿಕನ್ ಅಥವಾ ಬ್ರಿಟಿಷ್ ಇಂಗ್ಲೀಷ್ ರೂಢಿಯಲ್ಲಿರುವ ಮಟ್ಟದಲ್ಲಿರಬೇಕಾಗುತ್ತದೆ. ನಿಮ್ಮ ಟಿ/ವಿ.ಯನ್ನು ಉಪಯೋಗಿಸಿ ಸುದ್ದಿವಾಹಿನಿಗಳನ್ನು ನೋಡಿರಿ. ವಿವಿಧ ದೇಶಗಳ ವಿಭಿನ್ನ ಜನರನ್ನು (ಸುದ್ದಿ ಪ್ರಸ್ತುತ ಪಡಿಸುವವರು, ವರದಿಗಾರರ ಇತ್ಯಾದಿ) ಕೇಳಿರಿ. ಅವರೆಲ್ಲರೂ ಸರಳವಾಗಿ ಅರ್ಥವಾಗುವ ಮತ್ತು ಸ್ಪಷ್ಟ ಉಚ್ಚಾರಣಾ ರೀತಿಯನ್ನು ಹೊಂದಿದವರಾಗಿದ್ದಾರೆ.

ನಿಯಮ : ನೀವು ನಿರ್ದಿಷ್ಟ ಗುಣಮಟ್ಟಕ್ಕೆ ಹತ್ತಿರ ಇದ್ದರೆ ನೀವು ಸದಾ ಸಂವಹನಿಸಲು ಸಾಧ್ಯ ಮತ್ತು ನಿಮ್ಮ ಇಂಗ್ಲೀಷ್ ಸುಲಲಿತವಾಗಿರುತ್ತದೆ. ನೀವು ಗುಣಮಟ್ಟಕ್ಕಿಂತ ದೂರವಾಗಿದ್ದರೆ ಕೆಲವೊಮ್ಮೆ ನೀವು ಪರಿಣಾಮಕಾರಿಯಾಗಿ ಸಂವಹನಿಸಲು ಸಾಧ್ಯವಾಗದು.

## 3.4 ಪದ ವಿನ್ಯಾಸ (Diction)

ಪದ ವಿನ್ಯಾಸ ಅಥವಾ ಪ್ರಯೋಗವನ್ನು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು Denotation ಮತ್ತು Connotation, Denotation ಪದವೊಂದರ ಯಥವತ್ತಾದ ಅರ್ಥವಾಗಿದೆ, Connotation ಎಂಬುದು ಪದವೊಂದಕ್ಕೆ ಸಂಬಂಧಿಸಿದಂತೆ ಮನೋಭಾವನೆ ಮತ್ತು ಅನಿಸಿಕೆಯಾಗಿದೆ.

ಪದ ವಿನ್ಯಾಸವು ಹಲವಾರು ಅಂಶಗಳನ್ನು ಒಳಗೊಂಡಿದೆ; ಸಾಮಾಜಿಕ ಸನ್ನಿವೇಶದ ಔಪಚಾರಿಕ ಅಥವಾ ಅನೌಪಚಾರಿಕ ಪದಗಳು ಬಹಳ ಪ್ರಾಮುಖ್ಯವಾದುವು. ಯಥಾವತ್ತಾದ ಪದ ಪ್ರಯೋಗ ವಿಶ್ಲೇಷಣೆಯು ತನ್ನ ಧಾಟಿಯನ್ನು ತಿಳಿಸಬಲ್ಲದು, ಪದಗಳ ಆಯ್ಕೆ ಮತ್ತು ಸಂರಚನೆಯು ಪದವಿನ್ಯಾಸದ ಮೇಲೆ ಪ್ರಭಾವ ಬೀರುತ್ತದೆ.

ಪದವಿನ್ಯಾಸವು ಎಂಟು ಅಂಶಗಳನ್ನು ಒಳಗೊಂಡಿದೆ: Phoneme,Syllable conjunction, connective ನಾಮಪದ,

ಕ್ರಿಯಾಪದ, infection ಮತ್ತು utterance.

Phoneme : ಭಾಷೆಯ ಶಬ್ದವ್ಯವಸ್ಥೆಯ ಸಣ್ಣ ಘಟನೇ Phoneme

sylable : ಮಾತನಾಡುವ ಶಬ್ದಗಳ ಸರಣಿಯ ಸಂರಚನೆ

Conjunction : ಭಾಷಣದ ಭಾಗವಾಗಿದ್ದು ಎರಡು ಪದಗಳು, ಹಾಗೂ ಇತರ ರೀತಿಯ ಸೇರಿಸುವಿಕೆ.

Connective : ಭಾಷಾ ವಿಜ್ಞಾನದ ಘಟಕವಾಗಿ ಎರಡು ವಿಭಿನ್ನವನ್ನು ಒಗ್ಗೂಡಿಸುವಿಕೆ ಎರಡು ಅಥವಾ ಹೆಚ್ಚು ವ್ಯಾಕರಣ ಘಟಕಗಳು ವ್ಯವಸ್ಥಿತವಾಗಿ ಅಥವಾ ........................... ಯಾವುದೇ ಮಟ್ಟವನ್ನು ಯಾವುದೇ ಸಂಧರ್ಭದಲ್ಲಿ ರೂಪಿಸಲಾಗುತ್ತದೆ.

Inflection / Infleyion ಲಿಂಗ ಭೇದ, ಕಾಲ ಪ್ರಕಾರ, ನಂಬರ್ ಅಥವಾ ವ್ಯಕ್ತಿಗಳಾದರೂ ಯಾವುದೇ ಬದಲಾವಣೆಗಳನ್ನು ಅಥವಾ ಪದಗಳು ವ್ಯಾಕರಣವನ್ನು ಪೂರಕ ಮಾಹಿತಿಗೆ ಹೊಂದುಕೊಂಡು ಇರುವುದು.

ಶಬ್ದ ಕೋಶವೆಂಬುದು ವ್ಯಕ್ತಿಯೊಬ್ಬನಿಗೆ ಅಥವಾ ಇತರರಿಗೆ ತಿಳಿದಿರುವ ನಿರ್ಧಿಷ್ಠ ಭಾಷೆಯ ಅಂಗವಾಗಿ ಪದಗಳು ಒಗ್ಗೂಡುವುದು ಆಗಿದೆ.

ವ್ಯಕ್ತಿಯೊಬ್ಬರ ಶಬ್ದಕೋಶವು ಅವನಿಗೆ ತಿಳಿದಿರುವ ಎಲ್ಲಾ ಪದಗಳು ಅಥವಾ ಅವನು ವಾಕ್ಯ ರಚಿಸುವಾಗ ಬಳಸುವ ಪದಗುಚ್ಛ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ ಎರಡುಪದಗಳ ಹತ್ತಿರದ ಸಮಾನ ಅರ್ಥವನ್ನು ನೀಡುವುದನ್ನು ಪರಿಗಣಿಸುವಂತಿಲ್ಲ, ಯಾವುದೇ ವ್ಯಕ್ತಿಯೊಬ್ಬರ ಶಬ್ದ ಭಂಡಾರ ಎಂಬುದು ಅವನ ಶಿಕ್ಷಣ ಮಟ್ಟ ಮತ್ತು ಭೌದ್ಧಿಕ ಮಟ್ಟದ ಮೂಲಕ ಜನಪ್ರಿಯತೆ ಪಡೆಯುತ್ತದೆ. ಇದರಂತೆ, ಸೌಟ್ (SAT)– ಶಬ್ದ ಕೋಶವನ್ನು ಪರೀಕ್ಷಿಸುವ ಪ್ರಶ್ನೆಗಳನ್ನು ಒಳಗೊಂಡ ಹಲವಾರು ಗುಣಮಟ್ಟದ ಪರೀಕ್ಷೆಗಳನ್ನು ಕಾಣಬಹುದು. ಪ್ರತಿಯೊಬ್ಬರ ಶಬ್ದಕೋಶದ ಗಾತ್ರವನ್ನು ಹೆಚ್ಚಿಸುವುದು ಉತ್ತಮ ಸಂವಹನಕ್ಕೆ ಅತ್ಯಾವಶ್ಯಕ ಇಂತಹ ಕಸರತ್ತುಗಳು ಯಾರಿಗಿದ್ದರೂ ಭಾಷೆಯೊಂದನ್ನು ಕಲಿಯುವುದರ ಜೂತೆಗೆ ತನ್ನಲ್ಲಿರುವ ಭಾಷಾ ಪ್ರೌಡಿಮೆಯ ಪರಿಣಿತ ಕಲೆಯನ್ನು ಹೂರತರಲು ಪ್ರಮುಖ ಪಾತ್ರವಹಿಸುತ್ತದೆ ಆದ್ದರಿಂದ ಶಾಲಾಮಕ್ಕಳಿಗೆ ಯಾವುದೇ ಘಟಕ ಅಥವಾ ಪಾಠಕ್ಕೆ ಪೂರಕವಾದ ಹೂಸ ಪದಗಳನ್ನು ತಿಳಿಹೇಳಲಾಗುವುದು.

ವಯಸ್ಕರೂ ಸಹ ಶಬ್ದಕೋಶ ವೃದ್ದಿಸುವಿಕೆಯನ್ನು ಒಂದುರೀತಿಯ ನಗೆ ಮತ್ತು ಶೈಕ್ಷಣಿಕ ಚಟುವಟಿಕೆಯೊಂದು ಭಾವಿಸಿರುವ " ಪದಕ್ಕೊಂದು ಪದ" ವನ್ನು ಅಂಚೆ ಮೂಲಕ ರವಾನಿಸುವ ವೇಳೆ ಪಟ್ಟಿ ಮತ್ತು ಡೆಸ್ಕಟಾಪ್ ಕ್ಯಾಲೆಂಡರ್‌ಗಳಲ್ಲಿ ಕಾಣಬಹುದಾಗಿದೆ.
"ಶಬ್ದಕೋಶ" ಎಂಬ ಪದವನ್ನು ಯಾವುದೇ ಶೈಲಿ, ವಿಶೇಯವಾಗಿಯೂ ಬಳಸುತ್ತಾರೆ.

ವಿದ್ಯಾರ್ಥಿಗಳು ತಮ್ಮ ಶಬ್ದಕೋಶವನ್ನು ವಿಸ್ತರಿಸಲು ಹಲವಾರು ಮಂದಿ ಅಧ್ಯಾಪಕರುಗಳು ಪಾಠಕ್ಕಾಗುವಷ್ಟು ಕೆಲಸಕಾರ್ಯವನ್ನು ನೀಡುತ್ತಾರೆ.

ಶಬ್ದಕ್ಕೆ anunciation ಎಂಬುದು ಮಾತನಾಡುವ ಕ್ರಿಯೆ. ಎದನ್ನು ನಾವು ಪೂರ್ಣಪ್ರಮಾಣದ ಪರಿಜ್ಞಾನದಿಂದ **ಹಾಗೂ ಸ್ಪಷ್ಟವಾಗಿ** ಹೇಳಬೇಕಾಗುತ್ತದೆ. ಇದಕ್ಕೆ ವಿರುದ್ಧವಾದುದೇ ಉತ್ತಮ. enunciation, mumbling sluwing, ಅಥವಾ ಕೆಟ್ಟ enunciation. ಎಂಬುದು ಮೂಲಭೂತವಾಗಿ ಸಂವಹನಮಾಡುವುದು ಆಗಿದೆ.

'ನಿಮ್ಮ ಪದ ಪ್ರಯೋಗವು ನೀವು ಆಯ್ಕೆಮಾಡಿದ ಪದಗಳಷ್ಟೇ, ಇಂಗ್ಲಿಷ್ನಲ್ಲಿ ಯಾವುದೇ ಒಂದು ನಿರ್ದಿಷ್ಟ ಸರಿಯಾಗಿ ಪದವಿನ್ಯಾಸವಿಲ್ಲ' ಆದಕ್ಕೆ ಬದಲಾಗಿ ಬೇರೆ ಬೇರೆ ಸನ್ನಿವೇಶಕ್ಕೆ ತಕ್ಕ ಹಾಗೆ ನಾನಾ ರೀತಿಯ ಪದಗಳು ಅಥವಾ ಪದಗುಚ್ಛವನ್ನು ನೀವು ಆರಿಸಿಕೊಳ್ಳಬೇಕಾಗುತ್ತದೆ:

ಸ್ನೇಹಿತರೊಬ್ಬರಿಗೆ – " as up ," ಮಗುವೊಂದಕ್ಕೆ "a mistake ," ಪೋಲಿಸರಗೆ – "ಒಂದು ಅಪಘಾತ" ಮತ್ತು
ಉದ್ಯೋಗಿಗಳಿಗೆ – "an oversight," ಹೀಗೆ ಬೇರೆ ಬೇರೆ ಆಂಗ್ಲ ಪದ ಉಪಯೋಗಿಸಿ ಅದೇ ಬರುವ ಹಾಗೆ ಮಾತನಾಡುತ್ತಾರೆ.

## 3.5 ಸಾರಾಂಶ

ಧ್ವನಿ ಎಂಬುದು ನೀವು ಪ್ರೇಕ್ಷಕರನ್ನು ಉದ್ದೇಶಿಸಿ ಮಾತನಾಡುವ ಭಾಷಣದ ಪದಗಳನ್ನು ಸಂವಹಿಸುವ ವಾಹನವಾಗಿದೆ. ನೀವು ಮಾತನಾಡುವಾಗ ಪದವಿನ್ಯಾಸಗಳನ್ನು ನೀವು ಉಚ್ಚರಿಸುವಿರಾ ಎಂಬುದು ಆದರ ಅರ್ಥವನ್ನು, ಅರ್ಥಕ್ಕೆ ಪೂರಕವಾಗಿ ಹಾಗು ಕೆಲವೊಮ್ಮೆ ವ್ಯತಿರಿಕ್ತವಾಗಿ ಅರ್ಥವನ್ನು ನೀಡುತ್ತದೆ.

ಧ್ವನಿ ಮತ್ತು ಮಾತುಗಾರಿಕೆಯು ನಿಮ್ಮನ್ನು ಅತ್ಯುತ್ತಮವಾಗಿ ಪರಿಣಾಮಕಾರಿಯಾಗಿ ನಿರೂಪಿಸುತ್ತವೆಂದರೆ, ಜನರು ಅದನ್ನು ಬರೀ ಕೇಳಿದರಷ್ಟೇ ಸಾಲದು, ನೆನಪಿನಲ್ಲೂ ಇಡುವಂತಿರಬೇಕು. ಮೌಖಿಕ ಸಂವಹನದ ಕಾರ್ಯವು ಮಾತುಗಾರಿಕೆ ಮತ್ತು ಭಾಷಾಮಟ್ಟದ ಗುಣಮಟ್ಟವನ್ನು ನಿರೀಕ್ಷಿಸುತ್ತದೆ.

ನೀವು ಇಚ್ಚಿಸುವ ಧ್ವನಿ ಮತ್ತು ಮಾತು ರೂಪಿಸುವಲ್ಲಿ ಅದಕ್ಕೆ ಸರಿಯಾಗಿ ಹೊಂದಾಣಿಕೆ ಮಾಡಬೇಕಾಗುತ್ತದೆ. ನಿಮ್ಮ ಧ್ವನಿಮಟ್ಟ ಗುಣಮಟ್ಟ ಮತ್ತು ಧ್ವನಿ ಕೇಳಿಸುವಿಕೆ ಅಗತ್ಯಕ್ಕೆ ತಕ್ಕುದಾಗಿರಬೇಕು.

ಉಚ್ಚಾರಣೆವೆಂಬುದು ಶಬ್ದಗಳನ್ನು ಮುಖ್ಯವಾಗಿ ದವಡೆ, ನಾಲಿಗೆ ಮತ್ತು ತುಟಿಯ ಸಹಾಯದಿಂದ ರೂಪಿತವಾಗಿರುತ್ತದೆ. ಯಾವುದೇ ವಿಷಯ ಕುರಿತು ಸಂವಾಹಕನ ಪಾತ್ರ ಮತ್ತು ಉದ್ದೇಶಕ್ಕೆ ಅನುಗುಣವಾಗಿ ಸಾಮಾನ್ಯವಾಗಿ ಭಾಷಣವನ್ನು ನಿರ್ದಿಷ್ಟವಾಗಿ ಉಚ್ಚಾರಣೆಯನ್ನು ಸೂಕ್ತ ರೀತಿಯಲ್ಲಿ ಬಳಸಬೇಕಾಗುತ್ತದೆ. ಕೇಳುಗರ ಆಸಕ್ತಿ ಮತ್ತು ತೀರ್ಮಾನಗಳನ್ನು ಉಲ್ಲಂಘಿಸಿದಂತೆ ಸೂಕ್ತ ಉಚ್ಚಾರಣೆಯಿಂದ ಭಾಷಣವನ್ನು ಎತ್ತರಕ್ಕೆ ಒಯ್ಯಬಹುದು.

ಪದವಿನ್ಯಾಸವು ಎಂಟು ಅಂಶಗಳನ್ನು ಒಳಗೊಂಡಿದೆ: Phoneme,Syllable conjunction, connective ನಾಮಪದ, ಕ್ರಿಯಾಪದ, infection ಮತ್ತು ulterance.

## 3.6 ನಿಮ್ಮ ಪ್ರಗತಿ ಪರಿಶೀಲನೆ

ಸೂಚನೆ : ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿರುವುದರೊಂದಿಗೆ ಹೋಲಿಸಿರಿ.

1. ಭಾಷಣ ಸನ್ನಿವೇಶ ಮತ್ತು ಭಾಷಣ ಪರಿಸರ ಎಂದರೇನು?
2. ಉಚ್ಚಾರಣೆಯ ಸಮಸ್ಯೆಗಳಾವುವು?
3. ಪದ ಪ್ರಯೋಗವನ್ನು ವಿವರಿಸಿ.

## 3.7 ಹೆಚ್ಚಿನ ಓದಿಗಾಗಿ


1. Paul E Nelson and Judy C Pearson (2004), *Confidence in Public Speaking*, Jaico Publishing House.
2. Andrew D Wolvin, Roy M Berko, Darlyn R Wolvin (2005), *Handbook of Public Communication*, Jaico Publishing House.
3. Rudolph F Verderber, *The challenge of Effective Speaking* (10th ed.), Wadsworth Publishing Company.
4. Dennis S Gouran, William E Wiethoff, Joel A Doelger, *Mastering Communication* (2nd ed.), Allyn and Bacon.

ರಚನೆ


4.0 ಉದ್ದೇಶಗಳು

4.1 ಪ್ರಸ್ತಾವನೆ

4.2 ಸಾಮಾಜಿಕ ನಡವಳಿಕೆ

4.3 ಸಾಮಾಜಿಕ ಕಾರ್ಯನಿರ್ವಹಿಸುವಿಕೆ, ಕ್ರಿಯೆ ಮತ್ತು ಆಚರಣೆಗಳು

4.4 ಸಾಮಾಜಿಕ ಬಾಂಧವ್ಯವನ್ನು ಮನಗಾಣುವುದು

4.5 ಸಾಮಾಜಿಕ ನಡಾವಳಿಯ ಮತ್ತು ಅಂತರಕ್ರಿಯೆ ಯ ಇತರ ಅಂಶಗಳು

4.6 ಅಂತರ ಕ್ರಿಯೆಯ ಇತರರೊಂದಿಗೆ ಸೂಕ್ತ ಸಂವಹನಾ ಹೊಂದಾಣಿಕೆ

4.7 ಸಂವಹನ ಹೊಂದಾಣಿಕಾ ನಡವಳಿಕೆಗಳು

4.8 ಸ್ಪಷ್ಟ ಮತ್ತು ಅಗೋಚರ ವರ್ತನೆಗಳು

4.9 ಸಾಮಾಜಿಕ ಸಂಬಂಧದ ಅಂಶಗಳು

4.10 ಸಾರಾಂಶ

4.11 ನಿಮ್ಮ ಪ್ರಗತಿ ಪರಿಶೀಲನೆ

4.12 ಹೆಚ್ಚಿನ ಓದಿಗಾಗಿ

## 4.0 ಉದ್ದೇಶಗಳು :

ನಮ್ಮ ಬಗ್ಗೆ ಬಾಹ್ಯ ಜಗತ್ತಿಗೆ ಸೂಚಿಸುವ ಭಾವನೆಗಳು ನಮ್ಮ ಆಯ್ಕೆಗಳು, ನಡವಳಿಕೆಗಳು ಮತ್ತು ನಂಬಿಕೆಗಳ ಮೇಲೆ ಪ್ರಮುಖ ಪಾತ್ರ ವಹಿಸುತ್ತವೆ. ಇದೇ ರೀತಿ, ಇತರರ ಅಭಿಪ್ರಾಯಗಳು ನಮ್ಮ ನಡವಳಿಕೆ ಮತ್ತು ಅಂತರ ಕ್ರಿಯೆ ಮೇಲೆ ಮತ್ತು ನಾವು ನಮ್ಮನ್ನು ನೋಡುವ ರೀತಿಯ ಮೇಲೆ ಪರಿಣಾಮ ಬೀರುತ್ತದೆ. ಸಾಮಾಜಿಕ ನಡವಳಿಕೆ ಮತ್ತು ಅಂತರ ಕ್ರಿಯೆ ಕುರಿತ ಹಲವಾರು ಮೂಲ ಅಂಶಗಳಿದ್ದು ಅವು ನಮ್ಮ ಕಾರ್ಯಗಳು ಮತ್ತು ನಾವು ನಮ್ಮನ್ನು ಹೇಗೆ ನೋಡುತ್ತೇವೆ ಎಂಬುದರ ಬಗ್ಗೆ ಮಹತ್ತರ ಪಾತ್ರವಹಿಸುತ್ತವೆ.

ಪ್ರಸ್ತುತ ಘಟಕ ಓದಿದ ನಂತರ ನಿಮಗೆ ಕೆಳಕಂಡ ಅಂಶಗಳು ಅರಿವಾಗಬೇಕು

- ಸಾಮಾಜಿಕ ನಡವಳಿಕೆಯ ಪರಿಕಲ್ಪನೆ
- ಸಾಮಾಜಿಕ ಬಾಂದವ್ಯ
- ಸಾಮಾಜಿಕ ನಡವಳಿಕೆ ಮತ್ತು ಅಂತರ ಕ್ರಿಯೆಯ ಮಹತ್ವ

## 4.1 ಪ್ರಸ್ತಾವನೆ

ಪ್ರತಿಯೊಬ್ಬ ಮಾನವನು ಸಾಮಾಜ ಜೀವಿಯೆಂದು ಪರಿಗಣಿಸಲಾಗಿದೆ ಮತ್ತು ಸಾಮಾಜಿಕವಾಗಿ ಒಪ್ಪುವಂತಹ ಕೆಲವು ಬದ್ಧತೆಗಳಿಗೆ ಅನುಗುಣವಾಗಿ ವರ್ತಿಸಬೇಕಾಗುತ್ತದೆ. ಸಂಬಂಧಗಳನ್ನು ಮಧುರವಾಗಿ ಮುಂದುವರಿಸುವಲ್ಲಿ ವ್ಯಕ್ತಿಗತವಾಗಿ ಮತ್ತು ಪರಸ್ಪರ ಉತ್ತಮ ಸಾಮಾಜಿಕ ನಡವಳಿಕೆ ಪ್ರಮುಖಪಾತ್ರ ವಹಿಸುತ್ತದೆ. ಈ ದೃಷ್ಟಿಯನ್ನು ಗಮದಲ್ಲಿರಿಸಿ ಪ್ರಸ್ತುತ ಘಟಕವನ್ನು ವಿನ್ಯಾಸಗೊಳಿಸಲಾಗಿದ್ದು ಹಲವಾರು ಸಾಮಾಜಿಕ ನಡವಳಿಕೆ ಮತ್ತು ಭಾಂದವ್ಯ ಕುರಿತು ಬೆಳಕು ಚೆಲ್ಲಲಾಗಿದೆ. ಈ ಘಟಕವು ಸಾಮಾಜಿಕ ನಡವಳಿಕೆ, ಸಾಮಾಜಿಕ ಕಾರ್ಯಗಳು ಮತ್ತು ಅಭ್ಯಾಸಗಳು: ಸಾಮಾಜಿಕ ನಡವಳಿಕೆ ಮತ್ತು ಅಂತರ ಕ್ರಿಯೆಯ ಮಹತ್ವ ಇತ್ಯಾದಿ ಕುರಿತ ಮಾಹಿತಿಯನ್ನು ಒಳಗೊಂಡಿದೆ.

## 4.2 ಸಾಮಾಜಿಕ ನಡವಳಿಕೆ

ನಡವಳಿಕೆ ಎಂಬುದು ಕಣ್ಣು ಮಿಟಕಿಸುವುದು, ತಿನ್ನುವುದು, ಓದುವುದು ಚಿತ್ರಕಲೆ, ನೃತ್ಯ ಮುಂತಾದ, ಹಲವಾರು ಪ್ರಕಾರಗಳಿಂದ ಕೂಡಿದೆ. ನಡವಳಿಕೆ ಎಂಬುದು ಸಾಮಾಜಿಕವಾಗಿ ವಿಚಿತ್ರವಾಗಿದ್ದು ಅದು ಬೇರೆಯವರ ಅಥವಾ ಬೇರೆಯವರನ್ನು ಕುರಿತ ವರ್ತನೆಯಾಗಿದೆ.

ಉದಾಹರಣೆಗೆ, ಸಾಮಾನ್ಯವಾಗಿ ಗುಂಪೊಂದನ್ನು ಉದ್ದೇಶಿಸಿ ಕೈಬೀಸಿದಾಗ ಸಾಮಾಜಿಕ ನಡವಳಿಕೆಯಾಗಲಾರದು. ಇತರರು ಕೇವಲ ಮಾನವ ತೊಡಕುಗಳ ಭೌತಿಕ ವಸ್ತುಗಳಾಗಿ ಪರಿಗಣಿಸಲ್ಪಡು ಇವೆರಡೂ ಸಹ ಸಾಮಾಜಿಕ ನಡಾವಳಿಯನ್ನು ಪ್ರದರ್ಶಿಸುವ ಹಂತವಾಗಲಾರದು. ಇತರ ಮರವಣಿಗೆಗಳು ಒಬ್ಬರ ಚಲನವಲನಗಳನ್ನು ಸಂಯೋಜಿಸುವ ಭೌತಿಕ ಸಾಧನಗಳಾಗಿವೆ. ನಿಜವಾದ ರೋಗಿಯೆಂದರೆ ಭೂಮಂಡಲದ ಭೌತಿಕ ವಸ್ತುಗಳಾಗಿದ್ದು ಅವು ಪೂರಕ ಸಾಮರ್ಥ್ಯಗಳೂ ಮತ್ತು ಇತಿಮಿತಿಗಳನ್ನು ಹೊಂದಿರುತ್ತದೆ. ಇಷ್ಟಾದರೂ, ಬೇರೆಯವರ ಸಲುವಾಗಿ ನಟನೊಬ್ಬನು ಗುಂಪೊಂದರಲ್ಲಿ ಮುನ್ನುಗುತ್ತಾ ಸ್ನೇಹಿತನೊಬ್ಬನನ್ನು ಗುರುತಿಸುವುದು ಒಂದು ಕ್ರಮಬದ್ಧ ಮೆರವಣಿಗೆಯಲ್ಲಿ, ಒಬ್ಬ ಮೆರವಣಿಗಾರನು ಬೇರೆಯವರು ಅವರನ್ನು ಹಾದಿ ತಪ್ಪಿಸುವುದಾಗಿ ನಂಬುವುದು ಅಥವಾ ಸರ್ಜನ್_. ತನ್ನ ಮಗನಿಗೆ ಶಸ್ತ್ರಚಿಕಿತ್ಸೆ ಮಾಡುವುದು ಹೀಗೆ. ಸನ್ನಿವೇಶದ ಬದಲಾವಣೆಯ ಇಡೀ ಅರ್ಥದಲ್ಲಿ ಅರ್ಥ ಬದಲಾಗುತ್ತದೆ. ವೈಕ್ತಿಕ ಹಾಗು ಸಾಮಾಜಿಕ ನಡವಳಿಕೆಗಳಲಲಿ ವೈಪರಿತ್ಯವಿದ್ದರು ಪರಸ್ಪರ ಸಂಭಂದ ಹೊಂದಿವೆ.

## 4.3 ಸಾಮಾಜಿಕ ಕಾರ್ಯನಿರ್ವಹಿಸುವಿಕೆ, ಕ್ರಿಯೆ ಮತ್ತು ಆಚರಣೆಗಳು

ಸಾಮಾಜಿಕ ಕಾರ್ಯ ನಿರ್ವಹಿಸುವಿಕೆಯು ಬೇರೆಯವರನ್ನು ಕುರಿತ ಯಾವುದೇ ಉದ್ದೇಶಿತ ಕೆಲಸ, ಗುರಿ, ಯೋಜನೆ, ಉದ್ದೇಶ ಮುಂತಾದವುಗಳನ್ನು ಒಳಗೊಂಡಿದೆ. ಇವುಗಳು ಇತರರ ಭಾವನೆಗಳ ಉದ್ದೇಶಿತ ಕೆಲವು ನಂಬಿಕೆ ಮೇಲೆ ಪರಿಣಾಮ ಬೀರುತ್ತದೆ; ಅಥವಾ ಇತರರ ಕಾರ್ಯ ನಿರ್ವಹಿಸುವಿಕೆ, ಕ್ರಿಯೆ ಅಥವಾ ಅಭ್ಯಾಸಗಳನ್ನು ನಿರೀಕ್ಷಿಸಬಹುದು. ಉಪದೇಶಿಸುವುದು, ಉಡುಗೊರೆಯೊಂದನ್ನು ಖರೀದಿಸುವುದು ಅಥವಾ ತನ್ನಗಾಗದವರಿಗೆ ಮುಜುಗರ ಉಂಟುಮಾಡಲು ಪ್ರಯತ್ನಿಸುವುದು ಈ ಕುರಿತ ಕೆಲವು ಉದಾಹರಣೆಗಳಾಗಿವೆ.

ಸಾಮಾಜಿಕ ಕ್ರಿಯೆಗಳು ಸಾಮಾಜಿಕ ಕಾರ್ಯ ನಿರ್ವಹಿಸುವಿಕೆಯನ್ನು ನಿರ್ದೇಶಿಸುತ್ತವೆ. ಎಲ್ಲಿಯವರೆಗೆ ಸಾಮಾಜಿಕ ಕ್ರಿಯೆಯ ಅದರ ಉದ್ದೇಶವಾಗಿರುತ್ತದೆಯೇ ಆಗ ಕ್ರಿಯೆಗಳು ಸಾಮಾಜಿಕವಾಗಿ ಇತರರನ್ನು ಒಳಗೊಂಡಂತೆ ಅಥವಾ ಇಲ್ಲದೆ: ಹಾಗೂ ಬೇರೆಯವರ ಕ್ರಿಯೆಗಳು, ಕಾರ್ಯ ನಿರ್ವಹಿಸುವಿಕೆ ಅಥವಾ ಅಭ್ಯಾಸಗಳನ್ನು ನಿರೀಕ್ಷಿಸುತ್ತದೆ. ಮನೆಯಿಂದ ಓಡಿಹೋಗಿ ತನ್ನ ತಂದೆ ತಾಯಿಂದಿರಿಂದ ಮುಕ್ತವಾಗಿ ಒಂದು ವರ್ಷದವರೆಗೆ ಬೇರೊಂದು ಸಮುದಾಯದಲ್ಲಿ ವಾಸಮಾಡುವ ತರುಣನೊಬ್ಬನ ಕ್ರಿಯೆಯು ಸಾಮಾಜಿಕ ಕಾರ್ಯ ನಿರ್ವಹಿಸುವಿಕೆಯಾಗಿದೆ.

ಕಡೆಯದಾಗಿ , ಸಾಮಾಜಿಕ ಆಚರಣೆಗಳಿರುತ್ತವೆ. ಇತರರನ್ನು ಕುರಿತಂತೆ ಮತ್ತು ನಿರೀಕ್ಷಿಸುವ ಅವರ ಭಾವನೆಗಳು, ಯೋಚನೆಗಳು ಅಥವಾ ಆಶಯಗಳು ಸಂಬಂಧಿಸುವ ನಿಯಮಗಳು, ರೂಢಿಗಳು, ಸಂಪ್ರದಾಯಗಳು, ಹವ್ಯಾಸಗಳಿವೆ. ಕೈಕುಲಕುವುದು, ಬೇರೆಯವರೊಂದಿಗೆ ಸುಳ್ಳು ಹೇಳಲು ನಿರಾಕರಿಸುವುದು ಅಥವಾ ಸರಿಕಂಡದನ್ನು ಇತರರಿಗೆ ಮುಂದುವರಿಸುವುದು ಸಾಮಾಜಿಕ ಆಚರಣೆಗಳು ಉದಾಹರಣೆಯಾಗಿದೆ. ಇಷ್ಟಾದರೂ, ಎಲ್ಲಾ ಆಚರಣೆಗಳು ಸಾಮಾಜಿಕವಾಗಿರುವುದಿಲ್ಲ. ವೈಯಕ್ತಿಕವಾಗಿ ಕುಡಿಯುವುದು ಅಥವಾ ಧೂಮಪಾನ ಮಾಡುವುದು ಮತ್ತು ಹಲವಾರು ರೂಢಿಗಳನ್ನು ಇತರರಿಗೆ ಗೊತ್ತಾಗದ ಹಾಗೆ ಆಚರಿಸುವುದು ಇದರಲ್ಲಿ ಸೇರಿದೆ.

## 4.4 ಸಾಮಾಜಿಕ ಬಾಂಧವ್ಯವನ್ನು ಮನಗಾಣುವುದು

ಇಬ್ಬರು ಅಥವಾ ಹೆಚ್ಚು ಜನರು ಪರಸ್ಪರ ಪೂರಕವಾಗಿ ಮಾಡುವ ಕಾರ್ಯಗಳು, ಕ್ರಿಯೆಗಳು ಅಥವಾ ಆಚರಣೆಗಳು ಸಾಮಾಜಿಕ ಭಾಂದವ್ಯದ ಪ್ರಕಾರಗಳಾಗಿವೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಇದು ಬೇರೆಯವರ ಅಥವಾ ಪರಸ್ಪರ ಯಾವುದೇ ನಡಾವಳಿ ಮೇಲೆ ಪ್ರಭಾವ ಬೀರುವ ಅನುಭವಗಳೂ ಮತ್ತು ಆಶಯಗಳಾಗಿವೆ. ಸಾಮಾಜಿಕ ಬಾಂಧವ್ಯವನ್ನು ಏರ್ಪಡಿಸುವ ಎರಡೂ ಕಡೆಯವರು ಪರಸ್ಪರ ಒಬ್ಬರಿಂದೊಬ್ಬರ ಮನಸ್ಸಿನಲ್ಲರುವುದನ್ನು ತಿಳಿದುಕೊಂಡಿರಬೇಕು. ಇದರ ಅರ್ಥ ಬೇರೊಬ್ಬರೊಂದಿಗೆ ಅಥವಾ ನೇರವಾಗಿ ನಡೆದುಕೊಳ್ಳುವುದಲ್ಲ. ಸಾಮಾಜಿಕ ಭಾಂದವ್ಯವೆಂಬುದು ಶಾರೀರಿಕ ಸಂಬಂಧದ ಪ್ರಕಾರಗಳಾಗಲೀ ಅಥವಾ ನಡವಳಿಗಳಾಗಲಿ ಅಥವಾ ಭೌತಿಕ ದೂರವನ್ನು ಒಳಗೊಂಡಿರಲಾಗದು.

ಇದೊಂದು ರೀತಿಯಲ್ಲಿ ಬೇರೊಬ್ಬರಿಗೆ ಪರಸ್ಪರ ವೈಯುಕ್ತಿಕ ಮನಶ್ಚೇತನ ಕಲ್ಪಿಸುವುದು ಆಗಿದೆ. ಹೀಗಾಗಿ, ಶಾರೀರಿಕ ನಡವಳಿಕೆಗಳ ಅನುಪಸ್ಥಿತಿಯಲ್ಲು, ಎರಡು ಪ್ರತಿಸ್ಪರ್ಧಿ ನಡುವಿನ ವಿರೋಧವಿದ್ದು ಪರಸ್ಪರ ವೃತ್ತಿಪರ ಕೆಲಸದ ಸಾಮಾಜಿಕ ಕಾಣಬಹುದು.

ಮೇಲಾಗಿ, ಸಾಮಾಜಿಕ ಅಂತರಕ್ರಿಯೆ ಸಾಧಿಸಲು ಪರಸ್ಪರ ಹೊಂದಾಣಿಕೆ ಅಗತ್ಯ. ಒಬ್ಬನಿಗೆ ತಿಳಿಯದ ಹಾಗೆ ಒಬ್ಬರ ಮೇಲೆ ಇನ್ನೊಬ್ಬ ಗೂಢಚಾರಿ ಮಾಡುವುದು ಸಾಮಾಜಿಕ ಅಂತರಕ್ರಿಯೆ ಆಗಲಾರದು. ಇದೇರೀತಿ ಜೈಲಿನ ಅಧಿಕಾರಿ ಮತ್ತು ಕಾಯುವವನು, ಹಿಂಸೆಗೊಳಗಾದವನು ಮತ್ತು ಹಿಂಸಿಸುವವನು, ಮಷಿನ್‌ಗನ್ ಹಿಡಿದನು ಮತ್ತು ಶತೃಸೈನಿಕ ನಡುವಳಿಕೆಗಳು ಸಾಮಾಜಿಕ ಅಂತರಕ್ರಿಯೆ ಆಗಲಾರದು. ವಾಸ್ತವವಾಗಿ, ಯಾವಾಗ ಜನರು ಪರಸ್ಪರ ವಸ್ತುವಾಗಿ, ಪದಾರ್ಥವಾಗಿ ಅಥವಾ ಪ್ರಾಣಗಳಾಗಿ ನೋಡುತ್ತಾರೂ ಅಥವಾ ಪ್ರತಿಯೊಬ್ಬರನ್ನು ಪಾತ್ರನಿಧಿತ ಯಂತ್ರವಾಗಿ

ಅಥವಾ ಬರೀ ಪರಿಣಾಮ ಉಂಟುಮಾಡುವ ದೃಷ್ಟಿಯಿಂದ ನೋಡುವುದಾದರೆ ಅದು ಬಾಂಧವ್ಯವಾಗುವುದಿಲ್ಲ. ಅಂತಹ ಬಾಂಧವ್ಯ ವ್ಯವಸ್ಥಿತವಾಗಿದ್ದು, ಸಂಘಟಿತವಾಗಿದ್ದು, ನಿಯಂತ್ರಿತವೂ ಆಗಿರುತ್ತದೆ.

ಸಾಮಾಜಿಕ ಅಂತರಕ್ರಿಯೆ ಒಂದು ಗುಂಪಿನ ಅಥವಾ ವ್ಯಕ್ತಿಯ ಧೋರಣೆಗಳು ಅಥವಾ ಉಭಯ ಸಂಬಂಧಗಳ ಸಂಕೀರ್ಣತೆಯನ್ನು ಒಳಗೊಂಡಿದೆ. ನಗುವುದು, ಮಾತನಾಡುವುದು ಅಥವಾ ಕಣ್ಣು ಮಿಟುಕಿಸುವುದು; ಹೆದರಿಸುವುಕು, ಹೊಡೆದಾಡುವುದು ಅಥವಾ ಸಾರ್ವಜನಿಕವಾಗಿ ಚರ್ಚಿಸುವುದು ಮತ್ತು ಮಧ್ಯಸ್ಥಿಕೆ ಮಾಡುವುದು, ಸಂವಾದಿಸುವುದು ಅಥವಾ ತಂಟೆ ತಕರಾರು ಮಾಡುವುದು ಇಂತಹ ಕ್ರಿಯೆಗಳಲ್ಲಿ ಸೇರಿವೆ. ಈ ಸಂಬಂಧಗಳು ಮುಕ್ತವಾಗಿ ಅಥವಾ ಗೌಪ್ಯವಾಗಿ, ಸಕಾರಾತ್ಮಕ ಅಥವಾ ನಕಾರಾತ್ಮಕವಾಗಿ, ಸ್ಥೂಲವಾಗಿ ಅಥವಾ ವಿಶದವಾಗಿರಬಹುದು. ಅವುಗಳೂ ವ್ಯವಸ್ಥಿತವಾಗಿ, ಅವ್ಯವಸ್ಥಿತವಾಗಿ ಅಥವಾ ದಿಕ್ಕುದೆಸಿಯಿಲ್ಲದೆ, ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ, ಮುದವಾಗಿ ಅಥವಾ ತೀವ್ರವಾಗಿ, ಸಂಕುಚಿತವಾಗಿ ಅಥವಾ ವಿಶಾಲ ದೃಷ್ಟಿಕೋನಗಳನ್ನು ಹೊಂದಿರುತ್ತದೆ.

ಈ ರೀತಿಯ ಬಾಂಧವ್ಯದ ದಿಕ್ಕು ಸಾಮಾನ್ಯ ಗುರಿಗಳೂ ಮತ್ತು ಪೂರಕ ಕಾರ್ಯಗಳು ಮತ್ತು ಮೌಲ್ಯಗಳ ಕುರಿತ ನಡುವಳಿಕೆಗಳು ಎಷ್ಟರ ಮಟ್ಟಿಗೆ ಇವೆ ಎಂಬುದನ್ನು ಸೂಚಿಸುತ್ತವೆ. ಸಂಬಂಧದ ದಿಕ್ಕು ನಾವು ಕಾಣುವ ಅರ್ಥಗಳ ಖಚಿತತೆಯನ್ನು ಅವಲಂಭಿಸಿದೆ. ಈ ದಿಕ್ಕು ಎಷ್ಟರಮಟ್ಟಿಗೆ ಜನರು ತಮ್ಮ ಕ್ರಿಯೆಗಳನ್ನು ಇತರರೊಂದಿಗೆ ಸ್ಪಂದಿಸುತ್ತಾರೆ ಮತ್ತು ಅಂತರ ಕಾರ್ಯಗಳೂ ಸಾಮಾನ್ಯ ಆಶಯಗಳನ್ನು ಹೊಂದಿದ್ದು ಅದನ್ನು ಪೂರೈಸಲು ಪರಸ್ಪರ ಸಹಾಯಮಾಡುವ ಆಸೆ ಅಥವಾ ಉದ್ದೇಶವನ್ನು ಅವಲಂಬಿಸಿದೆ.

ಸಾಮಾಜಿಕ ಅಂತರಕ್ರಿಯೆಗಳು ಅಗತ್ಯವಾಗಿ ಕಾರ್ಯಗಳು, ಅಥವಾ ಕ್ರಿಯೆಗಳಿಂದ ಮಾತ್ರ ಕೂಡಿರುವುದಿಲ್ಲ. ಅದನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕಾಗುತ್ತದೆ. ಉದಾಹರಣೆಗೆ ಇಬ್ಬರು ವ್ಯಕ್ತಿಗಳು ಸಂತೋಷ ಕೂಟವೊಂದರಲ್ಲಿ ಕೈಕುಲಕಿ ಹಲವು ಸಾಂಪ್ರದಾಯಿಕವಾಗಿ ಸಂವಹಿಸಿದರು, ಕೇಳಿದ ಹಾಗೆ ಮಾಡಿ ಮತ್ತು ಅವರಿಬ್ಬರೂ ತಮ್ಮದೇ ಆದ ವಿಭಿನ್ನ ಗುಂಪನ್ನು ಸೇರಲು ಹುಡುಕುಬಹುದು. ಅಥವಾ ಮಾರಾಟ ಪ್ರತಿನಿಧಿ ಮತ್ತು ಗ್ರಾಹಕನಿಗೂ ಇರುವ ಸಂಬಂಧ ಹಾಗೆ ಪರಸ್ಪರ ಕಾರ್ಯಗಳು ತೊಡಗಿಸಿಕೊಂಡ ಜನರ ಕ್ರಿಯೆಗಳೊಂದಿಗೆ ಬಾಂಧವ್ಯ ಏರ್ಪಾಡುವುದಿಲ್ಲ. ಆ ಕ್ಷಣದಲ್ಲಿ ಅವರ ಕಾರ್ಯಗಳು ಪರಸ್ಪರ ಪೂರಕವಾಗಿದ್ದು ಮಾರಾಟದಲ್ಲಿ ಕೊನೆಗೊಳ್ಳುತ್ತದೆ. ಆದರೆ ಪ್ರತಿಯೊಬ್ಬರ ಉದ್ದೇಶಗಳು ಬೇರೆಯಾಗಿದ್ದು, ಗ್ರಾಹಕ ಉದ್ದೇಶವು ತನ್ನ ಮಗನಿಗೆ ಉಡುಗರೆಯೊಂದನ್ನು ಕೊಳ್ಳುವುದಾದರೆ, ಮಾರಾಟಗಾರನ ಕಾರ್ಯಗಳು ಮಾರಾಟ ಪ್ರಮಾಣವನ್ನು ಹೆಚ್ಚಿಸಿ ತನಗೆ ಬಡ್ತಿ ಪಡೆಯುವ ಆಶಯ ಒಂದಿರುತ್ತಾನೆ.

ಅಂತರಕ್ರಿಯೆಯ ಎರಡು ವಿರುದ್ಧ ದಿಕ್ಕುಗಳನ್ನು ವ್ಯಾಖ್ಯಾನಿಸಬಹುದು- ತನ್ನತನ ಮತ್ತು ವಿರೋಧಿಪ್ರವೃತ್ತಿ. ಮೊದನೆಯದಾಗಿ. ಇದು ಒಂದೇ ರೀತಿಯ ಉದ್ದೇಶಗಳನ್ನು ಮತ್ತು ಒಬ್ಬರಿಗೊಬ್ಬರಿಗೆ ಇದನ್ನು ಸಾಧಿಸಲು ಪರಸ್ಪರ ಅವಲಂವನೆಯಿಂದ ಕೂಡಿದೆ. ಉದಾಹರಣೆಯೆಂದರೆ, ಸ್ನೇಹಿತರು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪರಸ್ಪರ ಸಹಾಯ ಮಾಡುವುದು, ತಂದೆತಾಯಂದಿರು ಪರಸ್ಪರ ಸಹಕರಿಸಿ ಮಕ್ಕಳನ್ನು ಏಳಿಗೆಗಾಗಿ ಶ್ರಮಿಸುವುದು, ಪ್ರೌಢಶಾಲಾ ಸ್ವಯಂಸೇವಕರು ಎಲ್ಲರೂ ಸೇರಿ ಶಾಲೆ ಒಂದನ್ನು ಶುಚಿಗೊಳಿಸುವುದು, ವಿಜ್ಞಾನಿಗಳ ತಂಡವೊಂದು ಕ್ಯಾನ್ಸರು ರೋಗಕ್ಕೆ ಪರಿಹಾರವನ್ನು ಕಂಡು ಹಿಡಿಯುವುದು, ವೈದ್ಯರು ಮತ್ತು ಅಧಿಕ ದೇಹದ ತೂಕವುಳ್ಳ ರೋಗಿ ಒಟ್ಟಿಗೆ ಸೇರಿ ರೋಗಿಯೂ ತೂಕವನ್ನು ಕಡಿಮೆಮಾಡುವಂತೆ ಮಾಡುವುದು, ವಕೀಲರು ಮತ್ತು ಕಕ್ಷಿದಾರರು ಒಗ್ಗೂಡಿ ಅನ್ಯಾಯದ ವಿರುದ್ಧ ಹೋರಾಡುವುದು ಇತ್ಯಾದಿ ಸೇರಿವೆ.

ಎರಡನೇಯದಾಗಿ, ಕಾರ್ಯಗಳು ಪರಸ್ಪರ ಪೂರಕವಾಗಿದ್ದರೂ, ಅವರಿಬ್ಬರು ಅವರ ಉದ್ದೇಶವನ್ನು ಸಾಧಿಸುವದನ್ನು ತಡೆಯಬಹುದು. ಉದಾಹರಣೆಗೆ ಇಬ್ಬರು ಒಂದೇ ಹುದ್ದೆಗಾಗಿ ಸ್ಪರ್ಧಿಸುವುದು, ಸೇನಾನಾಯಕರು

ಅದೇ ಪ್ರದೇಶಕ್ಕಾಗಿ ಹೋರಾಡುವುದು ಅಥವಾ ಕಾರ್ಮಿಕರು ಮತ್ತು ಆಡಳಿತ ವರ್ಗದವರು ಅದೇ ಲಾಭವನ್ನು ಹಂಚಿಕೊಳ್ಳಲು ಹೆಣಗುವುದು ಸೇರಿದೆ. ಜೈಲಿನ ಅಧಿಕಾರಿ ಮತ್ತು ಅವರ ಸಿಬ್ಬಂದಿ, ಮೋಸಗಾರ ಮತ್ತು ಅವರ ತೊಂದರೆಗೆ ಸಿಕ್ಕಿದವನು, ಯಜಮಾನ ಮತ್ತು ಗುಲಾಮ/ಆಳು ಇದೇ ಉದಾಹರಣೆಯಾಗಿದೆ. ಈ ಎಲ್ಲಾ ಕ್ರಿಯೆಗಳು ವಿರೋಧ ಪ್ರವೃತ್ತಿಯದಾದರೂ ಕ್ರಿಯೆಗಳು ವ್ಯಕ್ತಿಗಣನೆಯಲ್ಲಿರುತ್ತದೆ. ಉದಾಹರಣೆಗೆ ಎರಡು ದೇಶಗಳು ಪರಸ್ಪರ ಸಂರಕ್ಷಿತ ಪ್ರದೇಶ ಅಥವಾ ಬೆಂಕಿ ಮುಕ್ತ ವಲಯವನ್ನು ಸಂರಕ್ಷಿಸುತ್ತಿದ್ದರೂ ಕೆಲಸಮಯ ಯುದ್ಧದಲ್ಲಿ ನಿರತವಾಗಿರುತ್ತವೆ. ಎರಡನೆಯದಾಗಿ, ತಂದೆ ತಾಯಿಂದರು ವಾದವಿವಾದ ಮಾಡುತ್ತಿರುವಾಗ ತಮ್ಮ ಮಕ್ಕಳನ್ನು ನಿದ್ರೆಗೆ ಭಂಗತಾರದೆ ಮೆಲ್ಲುಧ್ವನಿಯಲ್ಲಿ ದೂರ ನೀಡುವುದು ಇದರಲ್ಲಿ ಸೇರಿದೆ. ಸಾಮಾಜಿಕ ಬಾಂಧವ್ಯವು ತೀವ್ರ ವಿಸ್ತೃತವೂ ಹಾಗೂ ಸಂಕೀರ್ಣವೂ ಅಗಬಹುದು.

ಅರ್ಥ ಮತ್ತು ನಿರ್ದೇಶನದ ಜೊತೆಗೆ ಸಾಮಾಜಿಕ ಬಾಂಧವ್ಯವು ತೀವ್ರತೆಯಿಂದ ಗುರುತಿಸಲ್ಪಡುತ್ತದೆ. ವಿಶ್ವ ಚೆಸ್ ಪಂದ್ಯಾಟ, ಯುದ್ಧ, ಕಾರ್ಮಿಕ ಸಂಘ, ಚುನಾವಣೆ, ಆಂದೋಲನ, ವಿವಾದ ಅಥವಾ ಮಗುವಿನ ಜನನದಂತಹ ಸನ್ನಿವೇಶಗಳಲ್ಲಿ ಆಳವಾದ ಹಾಗೂ ಹೆಚ್ಚು ಪ್ರೇರೇಪಿತವಾದ ಆಶಯಗಳು ಅಡಗಿವೆ. ಇನ್ನೊಂದೆಡೆ, ಯಾರಾದರೂ ಒಟ್ಟಿಗೆ ಪಿಕ್‌ನಿಕ್ ಹೋಗಲು ಯೋಜಿಸುವುದು, ಕಾರುಕೂಟದಲ್ಲಿ ಸವಾರಿ ಮಾಡುವುದು, ವಿರಾಮಾಕ್ಕಾಗಿ ಟೆನಿಸ್ ಆಡುವುದು ಅಥವಾ ಸಿನಿಮಾ ನೋಡುವುದಕ್ಕೆ ಸಂಬಂಧಿಸಿದಂತೆ ಅಸಮ್ಮತಿ ಸೂಚಿಸುವಂತಹ ಸನ್ನಿವೇಶಗಳಲ್ಲಿ ಅಂತರಕ್ರಿಯೆ ಸ್ವಲ್ಪಮಟ್ಟಿನ ಭಾವನೆ ಅಥವಾ ಪೂರಕ ಆಶಯಗಳನ್ನು ಒಳಗೊಂಡಿರುತ್ತದೆ.

ಇದಲ್ಲದೆ, ಸಂಬಂಧಗಳು ವಿಸ್ತೃತವೂ ಹಾಗೂ ಸಂಕೀರ್ಣವು ಆಗಬಹುದು. ವಿವಾಹವೊಂದನ್ನು ಯಶಸ್ಸುಗೊಳಿಸಲು ಪರಸ್ಪರ ಪ್ರಯತ್ನಿಸುವುದು, ದೇಶದ ಅಧ್ಯಕ್ಷಗಿರಿ ನಿಂತಿರುವ ಎಲ್ಲಾ ಪ್ರತಿಸ್ಪರ್ಧಿಗಳನ್ನು ಮೀರಿಸುವುದು, ಯುದ್ಧವೊಂದರಲ್ಲಿ ಹೋರಾಡುವುದು, ಗೆರಿಲ್ಲಾ ಆಂದೋಲವನ್ನು ಆಯೋಜಿಸುವುದು ಅಥವಾ ಸೋಲಿಸುವುದು, ಅಥವಾ ಉತ್ತಮ ಶೈಕ್ಷಣಿಕ ವಿಭಾಗವೊಂದನ್ನು ಅಭಿವೃದ್ಧಿಪಡಿಸುವಲ್ಲಿ ಕಾರ್ಯಶ್ರೇಣಿಯನ್ನು ಪ್ರೇರೆಪಿಸುತ್ತದೆ. ಅಥವಾ ನಿರ್ದಿಷ್ಟ ಚಟುವಟಿಕೆಗಳಿಗೆ ಸೀಮಿತವಾಗಿರುವ ತೀವ್ರತರ ಸಂಬಂಧಗಳಲ್ಲಿ ಜನರು ಒಟ್ಟಾಗಿ ಲೀಗ್ ಒಂದರಲ್ಲಿ ಆಟವಾಡುವುದು, ಸಂತೋಷಕೂಟದ ನಂತರ ಸ್ನೇಹಿತರ ಸಹಕಾರದೊಂದಿಗೆ ಶುಚಿಗೊಳಿಸುವುದು, ಅಥವಾ ನಿರ್ದಿಷ್ಟ ನಿಲುಗಡೆಯ ಸ್ಥಳಕ್ಕಾಗಿ ಪ್ರತಿಸ್ಪರ್ಧಿಸುವುದು ಸೇರಿದೆ.

ಅಂತರಕ್ರಿಯೆಯ /ಸುಬಂಧದ ಮತ್ತೊಂದು ಲಕ್ಷಣವು ಅದರ ಕಾಲಾವಧಿಯನ್ನು ಕುರಿತಾಗಿದೆ. ರಾತ್ರಿ ಊಟದ ಮೇಜಿನಲ್ಲಿ ಯಾವುದೇ ತಿನಿಸಿನ ಕಡೆಯ ತುಂಡಿಗಾಗಿ ಜಗಳವಾಡುವುದು, ಮಗುವಿಗೆ ಸ್ನಾನ ಮಾಡಿಸಲು ತಂದೆತಾಯಿಯರ ಸಹಕಾರ ಅಥವಾ ಮಾರಾಟ ಪ್ರತಿನಿಧಿ ಮತ್ತು ಗ್ರಾಹಕನ ನಡುವಿನ ಸಂಬಂಧಗಳು ತೀರಾ ಕ್ಷಣಿಕವಾಗಿಯೂ ಅಥವಾ ತೀರಾ ಕಡಿಮೆ ಅವಧಿಯಲ್ಲಿರುತ್ತದೆ. ಕೆಲವು ಸಂಬಂಧಗಳು ಹೆಚ್ಚುವರಿ ಕಾಲಾವಧಿಯಲ್ಲಿರುತ್ತವೆ. ಅಂದರೆ, ಇದರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವಾರ್ಷಿಕ ಸಭೆಯಲ್ಲಿ ಭಾಗವಹಿಸುತ್ತಿರುವ ದೇಶಗಳ ಪೈಪೋಟಿ, ಪರಸ್ಪರ ಪ್ರೀತಿಯಿಂದ ವಿವಾಹದ ಬೆಸುಗೆಯಲ್ಲಿ ಒಂದಾದವರಾಗಲಿ, ರಾಜಕೀಯ ಹುದ್ದೆಗಾಗಿ ಸ್ಮರಣೀಯ ಆಂದೋಲನವೊಂದಕ್ಕೆ ಸುದೀರ್ಘ ಸಿದ್ಧತೆ ಮಾಡುವ ರಾಜಕಾರಣಿಗಳ ಬೆಂಬಲಿಗರಂತಹ ಉದಾಹರಣೆಗಳಾಗಿವೆ.

ಕೊನೆಯದಾಗಿ, ಸಂಬಂಧಗಳು ಎಷ್ಟರಮಟ್ಟಿಗೆ ವ್ಯವಸ್ಥಿತವಾಗಿ ಕಾನೂನಿನಡಿ ಸಮುದಾಯವನ್ನು ನಮೂದಿಸುವ ಗುಂಪನ್ನು ಸಂಘಟಿಸಬಲ್ಲದೆಂಬುದಾಗಿದೆ. ಇದೇ ಕಾರಣಕ್ಕಾಗಿ, ಸಂಬಂಧಗಳನ್ನು ನಿರ್ದೇಶಿಸುವ ಗುಂಪು ಹಾಗೂ ಅಸಂಘಟಿತ ಇನ್ನೊಂದು ಸನ್ನಿವೇಶದ ನಡುವಿನ ತಾರತಮ್ಯವನ್ನೂ ಗಮನಿಸಬಹುದು. ಹೀಗಾಗಿ ಅಂಗಡಿಯೊಂದನ್ನು ದೋಚುವಾಗ ಒಟ್ಟಾಗಿ ರಜೆಯನ್ನು ಕಳೆಯಲು ಸಿದ್ದತೆ ಮಾಡುವುದು ಅಥವಾ ವ್ಯವಸ್ಥಿತವಲ್ಲದ ಮಾತುಗಾರಿಕೆ ಹಾಗೂ

ದೇಶಗಳ ನಡುವಿನ ವಾಣಿಜ್ಯ ಸಂಪರ್ಕ, ಆಸಕ್ತ ಗುಂಪುಗಳ ಸ್ಪರ್ಧಾತ್ಮಕ ಲಾಬಿ ಮಾಡುವುದು, ಅಥವಾ ವಿವಾಹ ವಿಚ್ಛೇದನ ನಡೆವಳಿಗಳು ಸಂಘಟಿತ ಸಂಬಂಧವನ್ನು ಸೂಚಿಸುತ್ತದೆ.

## 4.5 ಸಾಮಾಜಿಕ ನಡಾವಳಿಯ ಮತ್ತು ಅಂತರಕ್ರಿಯೆ ಯ ಇತರ ಅಂಶಗಳು

ಬೇರೆಯವರು ನಮ್ಮನ್ನು ನೋಡುತ್ತಾರೆಂಬ ಆತ್ಮಾವಲೋಕನ ಸ್ವವಿಮರ್ಶೆಯ ಪ್ರಕ್ರಿಯೆಯೇ ನಮ್ಮತನವನ್ನು ನೋಡುವ ಮಾರ್ಗಗಳನ್ನು ಹೊಂದಿದೆ. ಇತರ ವಿಧಾನವಾದ, ಸಾಮಾಜಿಕ ಹೋಲಿಕಾ ಪ್ರಕ್ರಿಯೆಯಂತೆ ನಮ್ಮನ್ನು ಮೇಲು ಪಂಕ್ತಿಯಲ್ಲಿರುವ ಇತರ ಗುಂಪಿನೊಂದಿಗೆ ನಾವು ಹೇಗೆ ಹೋಲಿಸಿಕೊಳ್ಳುತ್ತೀವಿ ಎಂಬದೇ ಅಗಿದೆ. ಇತರ ಅಂಶಗಳು ಹೀಗಿವೆ.

- ಸಾಮಾಜಿಕ ಸಂಬಂಧವು ನಿರ್ದಿಷ್ಟ ಗುರಿಯನ್ನು ಹೊಂದಿದೆ. ಗುರಿಯೊಂದನ್ನು ಸಾಧಿಸುವ ಅಥವಾ ಅಗತ್ಯವೊಂದನ್ನು ಪೂರೈಸಲು ನಮ್ಮ ಸಂಬಂಧಗಳೂ ಸಹಕರಿಸುತ್ತವೆ. ಕೆಲವು ಸಾಮಾನ್ಯ ಗುರಿಗಳಾ ಅಥವಾ ಅಗತ್ಯೆಗಳಾ ಸಾಮಾಜಿಕ ಬೆಸುಗೆ ಉಂಟು/ಮಾಡುವುದು, ನಮ್ಮನ್ನು ನಾವೇ ಹಾಗೂ ಇತರರನ್ನು ಅರಿತುಕೊಳ್ಳುವ ಆಸೆ ಹೊಂದಿರುವುದು, ಸ್ಥಾನಮಾನ ಅಥವಾ ರಕ್ಷಣೆಯನ್ನು ಪಡೆಯಲು ಮತ್ತು ಸಹದ್ಯೋಗಿಗಳನ್ನು ಅಕರ್ಷಿಸುತ್ತದೆ. ಈ ಸನ್ನಿವೇಶವು ಪ್ರಮುಖ ಪ್ರಾತವಹಿಸುತ್ತದೆ. ಹಾಗೂ ಅದು ನಮ್ಮ ನಡಾವಳಿಯ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರುವುದು ಮತ್ತು ಸಹೋದ್ಯೋಗಿಗಳನ್ನು ಆಕರ್ಷಿಸುವುದೇ ಅಗಿದೆ.
- ವ್ಯಕ್ತಿ ಮತ್ತು ಸನ್ನಿವೇಶ ನಡುವಿನ ಬಾಂಧವ್ಯವು ಅದರ ಪರಿಣಾಮವನ್ನು ನಿರ್ಧರಿಸತ್ತದೆ. ಆದರೆ ಬೇರೆ ಬೇರೆ ಸನ್ನಿವೇಶಗಳಲ್ಲಿ ಬಹಳ ವಿಭಿನ್ನವಾಗಿ ನಡೆದುಕೊಳ್ಳುವ ಹಲವಾರು ಉದಾಹರಣೆಗಳಿವೆ. ಸನ್ನಿವೇಶವು ಪ್ರಮುಖ ಪಾತ್ರ ವಹಿಸುತ್ತದೆ. ಮತ್ತು ಅದು ನಮ್ಮ ನಡಾವಳಿಯ ಮೇಲೆ ಬಲವಾದ ಪ್ರಭಾವ ಬೀರುತ್ತದೆ.
- ಜನರು ಸನ್ನಿವೇಶಗಳಿಗಾಗಿ ಬಹಳಷ್ಟು ಪ್ರಮಾಣದ ಕಾಲವನ್ನು ವ್ಯಯಿಸುತ್ತಾರೆ. ನಮ್ಮ ಸಾಮಾಜಿಕ ಸಂಬಂಧಗಳು ನಮ್ಮ ಸ್ವಕಲ್ಪನೆ ಮತ್ತು ಗ್ರಹಿಕೆಯನ್ನು ಮೂಡಿಸುವಲ್ಲಿ ಸಹಕಾರಿಯಾಗಿದೆ.
- ನಾವು ನಮ್ಮ ಸುತ್ತಮುತ್ತಲಿನವರ ನಡಾವಳಿಯನ್ನು ವಿಶ್ಲೇಷಿಸಿ ವಿವರಿಸುತ್ತೇವೆ. ನಿರೀಕ್ಷೆಯನ್ನು ದೃಢೀಕರಿಸುವುದೆಂದರೆ, ನಾವು ಅನಿರೀಕ್ಷಿತ ಗುಣಲಕ್ಷಣಗಳನ್ನು ಕಡೆಗಣಿಸಿ ಮತ್ತು ಬೇರೆಯವರ ಬಗ್ಗೆ ನಮ್ಮಲ್ಲಿರುವ ನಂಬಿಕೆಗಳನ್ನು ಖಚಿತಪಡಿಸುವ ಪುರಾವೆಗಾಗಿ ಹುಡುಕುವುದೇ ಆಗಿದೆ. ಇದು ನಮ್ಮ ಜಗತ್ತಿನ ದೃಷ್ಟಿಯನ್ನು ಸರಳಗೊಳಿಸಲು ಸಹಾಯವಾಗುತ್ತದೆ, ಆದರೆ ಅದು ನಮ್ಮ ಪರಿಕಲ್ಪನೆಗೆ ತೊಡುಕು ಉಂಟುಮಾಡಿ ಮತ್ತು ಏಕರೂಪತೆ (streolyping) ಸೃಷ್ಟಿಸುತ್ತದೆ.

ಬೇರೆಯವರ ಬಗ್ಗೆ ನಮ್ಮ ಪರಿಕಲ್ಪನೆಯನ್ನು, ಪ್ರಭಾವವನ್ನು ಅನುರೂಪ ಗ್ರಹಿಕಾ ಸಿದ್ಧಾಂತದಿಂದ ವಿವರಿಸಬಹುದು. ಬೆರೆಯವರ ಕಾರ್ಯಗಳು ಮತ್ತು ನಡವಳಿಕೆಗಳು ಅವರ ಆಶಯಗಳು ಮತ್ತು ವ್ಯಕ್ತಿತ್ವಗಳಿಗೆ ಪೂರಕವಾಗಿದೆ ಎಂದು ನಾವು ಊಹಿಸಿದಾಗ ಇದು ಸಾಧ್ಯವಾಗುತ್ತದೆ. ಕೆಲವು ಸನ್ನಿವೇಶಗಳಲ್ಲಿ ನಡವಳಿಕೆಗಳು ಮಾಹಿತಿ ಪೂರ್ಣವಾಗಿ ಅವರಲ್ಲೂ ವಿಶೇಷವಾಗಿ ವ್ಯಕ್ತಿಯೊಬ್ಬರ ಕಾರ್ಯಗಳು ಉದ್ದೇಶಪೂರ್ವಕವಾಗಿದ್ದರೆ ಅದು ತಪ್ಪು ಭಾವನೆಯನ್ನು ಸಹ ಉಂಟುಮಾಡುತ್ತದೆ. ಒಂದು ವೇಳೆ ನಾವು ಕೆಲವರೊಂದಿಗೆ ಸೀಮಿತ ಸಂಬಂಧಗಳನ್ನು ಹೊಂದಿದ್ದರೆ, ನಾವು ನೋಡುವಂತಹ ದೃಷ್ಟಿಕೋನವು ಭಿನ್ನವಾಗಿರಲು ಅಥವಾ ಜನರ ಮಾಮೂಲಿ ಲಕ್ಷಣಗಳಿಗಿಂತ ವ್ಯಕ್ತಿರಿಕ್ತವಾಗಿ ಇರಲು ನಿರ್ದಿಷ್ಟ ಸನ್ನಿವೇಶ ಕಾರಣವಾಗುತ್ತದೆ.

ಸಾಮಾಜಿಕ ನಡಾವಳಿಕೆಗಳು ಮತ್ತು ಅಂತರ ವ್ಯಕ್ತಿ ಸಂವಹನದಲ್ಲಿ ಸಂಬಂಧಗಳು ಶಾಬ್ದಿಕ ಮತ್ತು ಅಶಾಬ್ದಿಕ ಸಂಕೇತಗಳು ಕೆಲವೊಮ್ಮೆ ಅರ್ಥೈಸಲು ಒಟ್ಟಾಗಿ ಕೆಲಸಮಾಡುತ್ತದೆ. ಅಂತರ ವ್ಯಕ್ತಿ ಸಂವಹನವು ವಿಶೇಷವಾಗಿ ಅಶಾಬ್ದಿಕ ಸಂದೇಶಗಳನ್ನು ಅಭಿವ್ಯಕ್ತಿಸುವುದೇ ಆಗಿದ್ದು ಅದೊಂದು ನಿರಂತರ ಪ್ರಕ್ರಿಯೆ. ಸಂವಹನ ಮಾಡುತ್ತಿರುವವರೊಂದಿಗೆ ಏಕಕಾಲದಲ್ಲಿ ಅರ್ಥವನ್ನು ಸೃಷ್ಟಿಸಲಾಗುತ್ತವೆ. ಅಂತರ ಕ್ರಿಯೆ ಹೊಂದಾಣಿಕೆ ಸಿದ್ಧಾಂತ ಜನರು ಹೇಗೆ ಬೇರೆಯವರೊಂದಿಗೆ ವ್ಯವಹರಿಸುವಾಗ ಸಂವಹನ ನಡಾವಳಿಗಳಿಗೆ ಸರಿಹೊಂದಿಸಿಕೊಳ್ಳುತ್ತಾರೆ ಎಂಬುದನ್ನು ವಿವರಿಸುತ್ತದೆ.

ಜನರು ಇತರರೊಂದಿಗೆ ಹೇಗೆ ಹೊಂದಿಕೊಳ್ಳುತ್ತಾರೆಂಬುದರಲ್ಲಿ ಅಶಾಬ್ದಿಕ ಸಂಕೇತಗಳು ನಿರ್ಣಾಯಕ ಪಾತ್ರ ವಹಿಸುತ್ತದೆ. ಉದಾಹರಣೆಗೆ, ನಿಮ್ಮ ಸ್ನೇಹಿತನು ವಿಚಾರವೊಂದನ್ನು ನಿಮಗೆ ಹೇಳಲು ಬಾಲುವಾಗ, ನೀವು ಸಹ ಅವರನ್ನು ಕೇಳಲು ಅವರ ಸಮೀಪಕ್ಕೆ ಒಗ್ಗಿಕೊಳ್ಳಲು ಮುಂದಾಗುತ್ತೀರಿ. ಅಥವಾ ಸಭೆಯೊಂದು ನಡೆಯುವಾಗ ನೀವು ಎರಡೂ ತೋಳುಗಳನ್ನು ಒಂದೆಡೆ ಸೇರಿಸಿ ಕುಳಿತಾಗ, ಅದು ನೀವು ಕೇಳುತ್ತಿರುವುದು ಅಸ್ಪಷ್ಟವಾಗಿದೆ ಎಂಬುದನ್ನು ಸೂಚಿಸುತ್ತೀರಿ. ಹಾಗೆ ವಿಚಾರ ಸಂಕಿರಣದ ಮೇಜಿನ ಕಡೆ ಕಣ್ಣು ಹಾಯಿಸಿದಾಗ ನಿಮ್ಮ ರೀತಿಯಲ್ಲೇ ಇನ್ನು ಹಲವಾರು ಕುಳಿತಿರುವುದು ಸ್ಪಷ್ಟವಾಗುತ್ತದೆ. ಒಂದು ವೇಳೆ ನಾವು ಸಂಕೀರ್ಣವಾದ ನೃತ್ಯವೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾಗ ಇತರರ ಚಲನೆ, ತನ್ನ ಸಂಪರ್ಕ ಅವಭಾವಗಳು ಮುಂತಾದ ಅಶಾಬ್ದಿಕ ಸಂಕೇತಗಳು ಮೂಲಕ ಸಂವಹನಿಸುತ್ತೇವೆ.

ಕೆಲವೊಮ್ಮೆ ಇತರರ ಭಂಗಿ ಅಥವಾ ನಡಾವಳಿಗಳನ್ನು ನಾವು ಅನುಸರಿಸುತ್ತೇವೆ. ಅಥವಾ ನಾವು ಬೇರೆಯವರ ಉಚ್ಚಾರಣೆಯನ್ನು ನಮ್ಮದಾಗಿಸಿಕೊಳ್ಳುತ್ತೇವೆ. ಕೆಲವೊಮ್ಮೆ ನೀವು ಇತರರ ವರ್ತನೆಗಳನ್ನು ಪ್ರತಿಫಲಿತಗೊಳಿಸುವುದನ್ನು ಆಂಗ್ಲ ಭಾಷೆಯಲ್ಲಿ intersectional synchrony ಎನ್ನುತ್ತಾರೆ. ಬೇರೆಯ ಸಮಯದಲ್ಲಿ ನಿಮ್ಮ ಸ್ನೇಹಿತನು ನಿಮ್ಮೊಂದಿಗೆ ಮಾತನಾಡುವಾಗ ತನ್ನ ತೋಳುಗಳನ್ನು ಮಡಚದಂತೆ ನೀವು ಸಹ ಅದೇ ರೀತಿಯಲ್ಲಿ ನಿಮ್ಮ ಜೋಡಿಸಿದ ಕೈಗಳನ್ನು ಎದೆಯ ಮೇಲೆ ಇಡುತ್ತೀರಾ ಎಂಬುದು ನಿಮ್ಮ ಗಮನಕ್ಕೆ ಬರುವುದಿಲ್ಲ.

ಸಂಶೋಧಕರೊಬ್ಬರು ತಿಳಿಸಿರುವಂತೆ ಆ ರೀತಿಯ ಪರಸ್ಪರ ಸಕಾರಾತ್ಮಕ ಹೊಂದಾಣಿಕೆ, ಇಬ್ಬರ ನಡುವೆ ಉದ್ದೇಶಪೂರ್ವಕವಾಗಿಲ್ಲದೇ ಅನುಕರಣೆಯ ಒಂದು ರೀತಿಯ ಏಕಕಾಲದಲ್ಲಿ ಮೂಡಿ ಬರುವ ವರ್ತನೆಯಾಗಿದ್ದು ಉಭಯ ವ್ಯಕ್ತಿಗಳ ಆಸಕ್ತಿ ಮತ್ತು ಉತ್ತಮ ಭಾವನೆ ಸಂವಹನ ನಡೆಸುವ ಪಾಲುದಾರಲ್ಲಿ ಇರುತ್ತದೆ.

ಅಂತರಕ್ರಿಯೆ ಹೊಂದಾಣಿಕಾ ಸಿದ್ಧಾಂತವು ಸೂಚಿಸುವ ಹಾಗೆ ನಮ್ಮ ಸುತ್ತಮುತ್ತಲಿನ ಜನರ ನಡವಳಿಕೆಗಳನ್ನು ಪಾಲಿಸುತ್ತೇವೆ. ಅಧ್ಯಯನವೊಂದರ ಸಂಶೋಧಕರು ವಿವಿಧ ಸ್ತರದ ಆತ್ಮೀಯತೆಯ ಮಟ್ಟಗಳು ಹೇಗೆ ಒಬ್ಬರು ಇನ್ನೊಬ್ಬರಿಂದ ಹೊಂದಾಣಿಕೆ ಮಾಡಲು ಮತ್ತು ಇತರರೊಂದಿಗೆ ಸ್ಪಂದಿಸಲು ಮುಂದಾಗುತ್ತಾರೆಂಬುದನ್ನು ಕಂಡು ಹಿಡಿಯಲು ಬಯಸಿದರು. ಈ ಅಧ್ಯಯನದಲ್ಲಿ ನಾಲ್ಕು ಮಟ್ಟದ ಆತ್ಮೀಯತೆ ಕಂಡು ಬಂದವು; ಅತಿ ಕಡಿಮೆ ಆತ್ಮೀಯತೆ, ಕಡಿಮೆ ಆತ್ಮೀಯತೆ, ಹೆಚ್ಚು ಆತ್ಮೀಯತೆ ಮತ್ತು ಅತಿ ಹೆಚ್ಚು ಆತ್ಮೀಯತೆ ಈ ಸಂಶೋಧನೆಯ ನಿಯಂತ್ರಣಾ ಗುಂಪಿನಲ್ಲಿ ಎರಡು ತಂಡಗಳ ನಡುವೆ ಯಾವುದೇ ರೀತಿಯ ಆತ್ಮಿಯತೆ ಅಭಿವ್ಯಕ್ತವಾಗಲ್ಲಿಲ್ಲ.

ಜನರು ತಮ್ಮ ಅಶಾಬ್ದಿಕ ನಡವಳಿಕೆಗಳನ್ನು ತಮ್ಮ ಪಾಲುದಾರರಿಂದ ಹೊಂದಾಣಿಕೆ ಮಾಡುವುದಾಗಿ ಸಂಶೋಧನೆಯೊಂದು ಸೂಚಿಸುತ್ತದೆ. ಒಂದು ವೇಳೆ ನಿಮಗೆ ತಿಳಿದಿರುವ ನಿಮ್ಮ ಸ್ನೇಹಿತ ಅಥವಾ ಬೇರೊಬ್ಬ ವ್ಯಕ್ತಿಯು ಅಶಾಬ್ದಿಕ ಆತ್ಮೀಯತೆ ಹೆಚ್ಚಿಸಿದಂತೆ ನೀವೂ ಸಹ ನಿಮ್ಮ ಅಶಾಬ್ದಿಕ ಆತ್ಮೀಯತೆಯನ್ನು ಹೆಚ್ಚಿಸುವ ಸಾಧ್ಯತೆಗಳಿವೆ. ನಿಮ್ಮ ಒಡನಾಟ ಆತ್ಮೀಯತೆಯಿಂದ ಕೂಡಿರದಿದ್ದರೆ ನೀವು ಅವರೊಂದಿಗೆ ಮುಕ್ತತೆ ಮಿತಿಗೊಳಿಸಲು ಸ್ಪಂದಿಸುತ್ತೀರಾ. ಜನರು ಯಾವಾಗ ಸಪ್ಪ ಮಾರ್ಗಗಳಲ್ಲಿ ಉದಾಸೀನ ಮಾಡಿದರೆ ಉದಾಹರಣೆಗೆ ನಿಮ್ಮ ಬಗ್ಗೆ ನಕಾರಾತ್ಮಕವಾಗಿ ವ್ಯವಹರಿಸಿದರೆ ಅಥವಾ ನಿಮ್ಮ ಕಡೆ ದೃಷ್ಟಿ ಹಾಯಿಸದೆ ಇದ್ದಾಗ ನೀವು ಸಹ ಅವರೊಂದಿಗೆ ಸರಿಯಾಗಿ ಸ್ಪಂದಿಸಲಾಗದೆ ಅಂತಹ ಅನಿಶ್ಚಿತ ನಡವಳಿಕೆಗೆ ತಕ್ಕ ಪರಿಹಾರವನ್ನು ನೀಡುವ ಸಾಧ್ಯತೆ ಇದೆ.

## 4.6 ಅಂತರ ಕ್ರಿಯೆಯ ಇತರರೊಂದಿಗೆ ಸೂಕ್ತ ಸಂವಹನಾ ಹೊಂದಾಣಿಕೆ

ನಿಮ್ಮ ಅಂತರ ವ್ಯಕ್ತಿ ಸಂವಹನದ ಗುಣಮಟ್ಟವನ್ನು ಹೆಚ್ಚಿಸಲು ಬೇರೆಯವರೊಂದಿಗೆ ಹೊಂದಾಣಿಕೆ ಮಾಡಬೇಕಾಗುತ್ತದೆ. ಹೊಂದಾಣಿಕೆ ಎರಿದರೆ ನಿಮ್ಮ ವರ್ತನೆಗಳನ್ನು ಇತರರಿಗಾಗಿ ಭಿನ್ನತೆಗಳು ಮತ್ತು ನಿರೀಕ್ಷೆಗಳನ್ನು ಸರಿದೂಗಿಸುವುದೇ ಆಗಿದೆ. ಸೂಕ್ತ ಹೊಂದಾಣಿಕೆಯು ನೀವು ಇತರ ವ್ಯಕ್ತಿಯೊಂದಿಗೆ ಇರುವ ಸಂಬಂಧಗಳು ಮತ್ತು ಸಂವಹನ ಪರಿಸರದಲ್ಲಿ ಏನಾಗುತ್ತಿದೆ ಎಂಬ ಸನ್ನಿವೇಶದಲ್ಲಿ ಉಂಟಾಗುತ್ತದೆ. ಸಂವಹನ ಹೊಂದಾಣಿಕಾ ಸಿದ್ಧಾಂತ ತಿಳಿಸುವ ಹಾಗೆ ಎಲ್ಲಾ ರೀತಿಯ ಜನರು ಬೇರೆಯವರಿಮದ ತಕ್ಕಮಟ್ಟಿಗೆ ತಮ್ಮ ನಡವಳಿಕೆಗಳನ್ನು ಹೊಂದಿಸಿಕೊಳ್ಳುತ್ತಾರೆ. ಯಾರು ಬೇರೆಯವರಿಂದ ಸೂಕ್ತ ಹೊಂದಾಣಿಕೆಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೋ ಅವರು ಹೆಚ್ಚು ಸಕಾರಾತ್ಮಕ ಸಂವಹನದ ಅನುಭವನ್ನು ಸೂಕ್ಷ್ಮವಾಗಿ ಪಡೆಯುತ್ತಾರೆ. ಇತರರೊಂದಿಗೆ ಹೊಂದಾಣಿಕೆ ಮಾಡುವ್ಯದೆಂದರೆ ಅವರು ಏನನ್ನು ಕೇಳಲು ಇಚ್ಛಿಸುತ್ತಾರೆಂದು ನೀವೇ ಹೇಳುವುದಲ್ಲ. ಹಾಗೂ ಬೇರೆಯವರು ಮಾಡಬೇಕೆಂದಿರುವುದನ್ನು ನೀವು ಮಾಡುವುದೂ ಅಲ್ಲ. ಅಂತಹ ಅರ್ಥಹೀನ ವರ್ತನೆಗಳು ಸರಿಯಾಗಿಯೂ, ಪರಿಣಾಮಕಾರಿಯಾಗಿಯೂ ಅಥವಾ ನೈತಿಕವಾಗಿ ಇರುವುದಿಲ್ಲ.

ಕೆಲವೊಮ್ಮೆ ಜನರು ಬೇರೆಯವರು ಇಚ್ಛಿಸುವ ರೀತಿ ಯೋಚಿಸಿ ತಮ್ಮ ನಡವಳಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಮತ್ತೆ ಕೆಲವು ಸಲ, ಅವರ ಸಂವಹನವನ್ನು ತಾವು ಏನನ್ನೋ ತಪ್ಪು ಮಾಡಿದ ಮನವರಿಕೆಯಿಂದಾಗಿ ಹಾಗೆ ಮಾಡುತ್ತಾರೆ. ನಿಮ್ಮ ವರ್ತನೆಗಳನ್ನು ಸರಿಮಾಡುವ ನರೀಕ್ಷೆಯಿಂದ ನೀವು ಸಕರಾತ್ಮಕ ಹೊಂದಾಣಿಕೆ ಮಾಡುತ್ತೀರಾ. ಉದಾಹರಣೆಗೆ ಸಾವಿನ ಸುದ್ದಿ ಕೇಳಿದ ನೀವು ನಿಮ್ಮ ಸ್ನೇಹಿತ ಹೂವುಗಳೆಂದರೆ ಪ್ರೀತಿಸು ತ್ತಿದ್ದರೆಂದು ತಿಳಿಸಿ ಅಂತಹ ಸುದ್ದಿಯನ್ನು ತಿಳಿಗೊಳಿಸಲು ಹೂವನ್ನು ಕೊಳ್ಳಲು ನೀವು ನಿರ್ಧರಿಸಬಹುದು. ಯಾವುದೊಂದು ಘಟನೆಯ ನಂತರ ನಿಮ್ಮ ವರ್ತನೆಯನ್ನು ಬದಲಾಯಿಸಿದಾಗ ನೀವು ಪ್ರತಿಕ್ರಿಯಿಸುತ್ತೀರಿ. ಉದಾಹರಣೆಗೆ ನೀವು ಹೊಡೆದಾಟ ಮಾಡಿದ ತಪ್ಪಿಗಾಗಿ ನಿಮ್ಮ ಸ್ನೇಹಿತನಿಗೆ ಹೂ ಗುಚ್ಛ ಖರೀದಿಸಬಹುದು.

## 4.7 ಸಂವಹನ ಹೊಂದಾಣಿಕಾ ನಡವಳಿಕೆಗಳು

ಹಲವಾರು ಕಾರಣಗಳಿಗಾಗಿ ಜನರು ಇತರರೊಂದಿಗೆ ಸಂವಹನ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಕೆಲವೊಮ್ಮೆ ಹೆಚ್ಚು ಅರ್ಥ ಮಾಡಿಕೊಳ್ಳುವ ಪ್ರಯತ್ನಕ್ಕಾಗಿ ಸಂದೇಶಗಳನ್ನು ಇತರರಿಂದ ಹೊಂದಿಸಿಕೊಳ್ಳುತ್ತಾರೆ. ಉದಾಹರಣೆಗೆ, ತಕ್ಕಮಟ್ಟಿಗೆ ಇಂಗ್ಲೀಷ್ ಬಲ್ಲ ಯಾರೋಬ್ಬರೊಂದಿಗೆ ಮಾತನಾಡುವಾಗ ನೀವು ಬಹುಶಃ ಸರಳ ಪದಗಳು ಮತ್ತು ಪಂಕ್ತಿಗಳನ್ನು ಆರಿಸುತ್ತೀರಾ. ಜನರು ತಮ್ಮ ಗುರಿಗಳನ್ನು ಪರಿಣಾಮಕಾರಿಯಾಗಿ ಸಾಧಿಸಲು ಸಂದೇಶಗಳನ್ನು ಹೊಂದಿಸಿಕೊಳ್ಳುತ್ತಾಅರೆ. ಅಂತರ ಸಾಂಸ್ಕೃತಿಕ ನಡಾವಳಿಯಲ್ಲಿ, ಜನರು ಆಗ್ಗಿಂದ್ದಾಗ್ಗೆ ತಾವು ಪಡೆಯುತ್ತಿರುವ ಪ್ರತಿಕ್ರಿಯೆಗಳು ಅಥವಾ ಹಿನ್ನುಣಿಸುವಿಕೆ ಸ್ಪಂದಿಸಲು ಸಂವಹನ ಮತ್ತು ಹೊಂದಾಣಿಕೆಗೆ ಮೊರೆ ಹೋಗುತ್ತಾರೆ.

ಸಂವಹನಾ ಹೊಂದಾಣಿಕಾ ನಡವಳಿಕೆಗಳ ಮೇಲು ನೋಟವನ್ನು ಈ ಕೆಳಕಂಡ ಕೋಷ್ಠಕದಲ್ಲಿ ನೀಡಲಾಗಿದೆ.

| ಪ್ರಕಾರ | ಉದಾಹರಣೆಗಳು |
|---|---|
| **ಪ್ರಸ್ತುತ:** ಯಾವುದೇ ಒಂದು ವಿಷಯ ಅಥವಾ ಅಂಶವನ್ನು ಕುರಿತ ಆಯ್ಕೆ ಮಾಡುವುದಾದರೆ ಅದು ಬೇರೊಬ್ಬರ ಆಸಕ್ತಿಯನ್ನು ಕೆರಳಿಸುತ್ತದೆ ಎಂಬ ಕಾರಣಕ್ಕಾಗಿ | ಇಬ್ಬರಿಗೂ ತಿಳಿಸಿರುವ ಸ್ನೇಹಿತ ಅಥವಾ ನೀವಿಬ್ಬರೂ ಪಾಲ್ಗೋಂಡ ಸಂತೋಷಕೂಟ ದಲ್ಲಿ ನಗರದಲ್ಲಿ ಪ್ರದರ್ಶನಕ್ಕಿರುವ ನಾಟಕ ಕುರಿತು ಅವನಿಗಾಗಲೀ ಅಥವಾ ಅವಳಿಗಾಗಲೀ ಕೇಳುವುದು |
| **ವಿವರಣಾತ್ಮಕ/ವಿಶದೀಕರಣ:** ಹೆಚ್ಚುವರಿ ಮಾಹಿತಿ/ಅಥವಾ ವಿವರಣೆ ನೀಡುವುದು ಏಕೆಂದರೆ ಇತರ ವ್ಯಕ್ತಿ ಈ ಕುರಿತು ಹೆಚ್ಚಿನ ಮಾಹಿತಿ ತಿಳಿದಿರುವುದಲ್ಲ ಎಂಬುದನ್ನು ನೀವು ಮನಗಾಣುತ್ತೀರಾ. | ನಿಮ್ಮ ಹೊಸ ಸ್ನೇಹಿತನಿಗೆ ನಿಮ್ಮ ತಾಯಿಯ ಹವ್ಯಾಸಗಳನ್ನು ವಿವರಿಸುವುದು ಹಾಗೂ ಹಣ್ಣಿನ ಮರದಿಂದ ಅಳಿಲುಗಳನ್ನು ಹೇಗೆ ಓಡಿಸಬಹುದೆಂದು ಪಕ್ಕದ ಮನೆಯವರಿಗೆ ವಿವರಿಸುವುದು. |
| **ಮಾಹಿತಿ/ವಿವರಣೆ ತಡೆ ಹಿಡಿಯುವುದು:** ...ದ್ಯೋಗಿ/ಪಾಲುದಾರನಿಗೆ ವಿವರಣೆ ನೀಡದಿರುವುರುವುದು ಏಕೆಂದರೆ ...ಗಲೇ ಗೊತ್ತಿದೆ, ಅವನನ್ನು ನೋಯಿಸಬಹುದು ಅಥವಾ ಕೋಪ ಗೊಳಿಸುತ್ತದೆ; ಕಾರಣ ಇನ್ನೊಬ್ಬ ವ್ಯಕ್ತಿಯು ಅದನ್ನು ದುರುಪಯೋಗಪಡಿಸಬಹುದು ಅಥವಾ ಗೌಪ್ಯತೆಯನ್ನು ಉಲ್ಲಂಘಿಸುವುದನ್ನು ನೀವು ತಪ್ಪಸಲು ಬಯಸಿರುತ್ತಿರಾ. | ನೀವು ಕಾರು ಸಮಸ್ಯೆಯನ್ನು ವಿವರಿಸುವಾಗ ಆಟೋ ಇಂಜಿನ್ದ ಎಲ್ಲಾ ಅಂಗಗಳನ್ನು ವಿವರಿಸದೆ ಇರು ಇರುವುದಕ್ಕೆ ನಿಮಗೆ ತಿಳಿದಂತೆ ಕಾರುಗಳ ಬಗ್ಗೆ ಕೇಳುಗರಿಗೆ ಹೆಚ್ಚಿನ ತಿಳುವಳಿಕೆ ಇದೆ. ನೀವು ನೋಡಿದ ಗೆಳೆಯನಿಗೆ ಅವರ ಆಥವಾ ಅವಳ ಪ್ರೇಮಿ/ಪ್ರೇಯಸಿ ಇತರೊಂದಿಗೆ ಇದ್ದುದನ್ನು ಹೇಳುವುದಿಲ್ಲ. ಕಾರಣ ಆ ವ್ಯಕ್ತಿಯು ಪರಸ್ಪರ ಗೆಳೆಯರ ಹೆಸರನ್ನು ಹೇಳುವರೆಂಬ ಹೆದರಿಕೆ ಯಿಂದ |
| **ಉದಾಹರಣೆಗಳು /ಹೋಲಿಕೆಗಳು** ನಿಮ್ಮ ಸಹದ್ಯೋಗಿಗೆ ಅರ್ಥ ಅಗತ್ಯ ಇರುವ ಸೂಕ್ತ ಉದಾಹರಣೆಗಳನ್ನು ನೀಡಿ. | ಸ್ಕೇಟಿಂಗ್ ಅನ್ನು ಮಂಜುಗೆಡ್ಡೆ ನೀರ್ಗಲ್ಲ ಮೇಲೆ ಮೇಲೆ ಸರಾಗವಾಗಿ ಬಳಸುವ ರೀತಿ, ಕೆಲವೊಮ್ಮೆ ನಿಮ್ಮ ಜೊತೆಗಾರನಿಗೆ ಅದು ಹೇಗೆ ಮಾಡಬೇಕೆಂದು ತಿಳಿದಿರುತ್ತದೆ. |
| **ವೈಯಕ್ತಿಕ ಪರಾಮರ್ಶೆ :** ನಿಮ್ಮ ಜೊತೆಗಾರನ ನಿರ್ದಿಷ್ಟ ನಿಲುವುಗಳು ಆಸಕ್ತಿಗಳು ವ್ಯಕ್ತಿತ್ವ, ಗುಣಲಕ್ಷಣಗಳು ಅಥವಾ ಸಾಂಪ್ರಾದಾಯಿಕ ಹಿನ್ನೆಲೆ | 'ನಾನು ನಿನಗೆ ಹಾಸ್ಯಾಸ್ಪದವಾಗಿರುವ ಏನನ್ನೋ ಹೇಳಲು ಯೋಚಿಸುತ್ತಿದ್ದೀನಿ. "ನೀವು ನನ್ನ ಚೆಕ್ ಪುಸ್ತಕ ಸರಿದೂಗಿಸಲು ನನಗೆ ಸಹಾಯ ನೀಡುವಿರಾ? "ನೀನು ಗಣಿತದಲ್ಲಿ ಬಹಳ ಚೆನ್ನಾಗಿದ್ದೀರಾ" " ನಿಮ್ಮ ತಂದೆ ತಾಯಿಯರು ಬೆಳಸಿದ ಹಾಗೆ, ನಾನು ನಿಮ್ಮ ನಡವಳಿಕೆಯನ್ನು ನಿರೀಕ್ಷಿಸಿದ್ದೆನು. |
| **ಬಯಲುಗೊಳಿಸುವುದು** ಉದ್ದೇಶಪೂರ್ವಕವಾಗಿ ಇನ್ನೊಬ್ಬರಿಗೆ ಗೊತ್ತಿಲ್ಲದ ಮಾಹಿತಿಯನ್ನು ಹೊರತರಲು ನಿರ್ಧರಿಸುವುದು. **ತ್ವರಿತ ಪ್ರಶ್ನಿಸುವ ಕಾರ್ಯತತ್ಪರತೆ:** ಇತರರಿಂದ ಬಾಂಧವ್ಯ ಏರ್ಪಡುವ ಸಮಯದಲ್ಲಿ ಅವನು ಅಥವಾ ಅವಳಿಂದ ಹೆಚ್ಚುವರಿ ಮಾಹಿತಿ ಪಡೆಯುವುದು ಮಂದಗತಿಯ ಪ್ರಶ್ನಿಸುವ ಕಾರ್ಯತತ್ಪರತೆ: ಇತರರಿಂದ ಅವನು ಅಥವಾ ಅವಳು ಹಂಚಿಕೊಂಡ ಮಾಹಿತಿ ಕುರಿತು ಹೆಚ್ಚಿನ ಮಾಹಿತಿ ಪಡೆಯುವುದು. | ನಿಮ್ಮ ಭೋಧಕನಿಗೆ ನಿಮ್ಮ ಕುಟುಂಬದ ಸಮಸ್ಯೆಗಳನ್ನು ಹೇಳುವುದು<br><br>ಹಾಗಿದ್ದರೆ. ಅಂತಹ, ಸಣ್ಣನಗರಗಳಲ್ಲಿ ಹಾಗೆ ಬೆಳೆದು ಬಂದಿರಾ? " ಮೈಸೂರಿನ ರಜಾದಿನಗಳ ಬಗ್ಗೆ ಹೆಚ್ಚಿಗೆ ತಿಳಿಸಿ |
| **ಹಿನ್ನುಣಿಸುವಿಕೆ** ನಿಮ್ಮ ಜೊತೆಗಾರನ ಪ್ರತಿಕ್ರಿಯೆಗೆ ಅನುಸಾರ ವಾಗಿ ನಿಮ್ಮ ಪದಗಳ ಅಥವಾ ವರ್ತನೆಯನ್ನು ಬದಲಾಯಿಸುವುದು. | ನಿಮ್ಮ ಗೆಳತಿಯ ತಾಯಿಯ ನಿಧನದ ಬಗ್ಗ ಮಾತನಾಡಿದಾಗ ಅವರು ಅಳಲು ಆರಂಭಿಸಿದಾಗ ವಿಷಯವನ್ನೇ ಬದಲಾಯಿಸುವುದು. |

ಮೂಲ: Interpersonal Communication Relating to others.(Pearson Education, Inc) 2005.

## 4.8 ಸ್ಪಷ್ಟ ಮತ್ತು ಅಗೋಚರ ವರ್ತನೆಗಳು

ಸ್ಪಷ್ಟ ಸಾಮಾಜಿಕ ಅಂತರ ಕ್ರಿಯೆಗಳು ನಾವು ಗ್ರಹಿಸುವ ನಿರ್ದಿಷ್ಟ ನಡಾವಳಿಗಳಾಗಿವೆ. ಒಬ್ಬ ವ್ಯಕ್ತಿ ಚೆಂಡೊದನ್ನು ಎಸೆಯುತ್ತಾನೆ. ಇನ್ನೋಬ್ಬ ಅದನ್ನು ಹಿಡಿಯುತ್ತಾನೆ: ಮೂರನಯವನು ಗಟ್ಟಿ ಧ್ವನಿಯಲ್ಲಿ "ಅದನ್ನು ನನಗೆ ಎಸೆ" ಎಂದು ಕೂಗುತ್ತಾನೆ. ನಾವು ಈ ಸಂಬಂಧಗಳನ್ನು ನಿರ್ದಿಷ್ಟ ವರ್ತನೆಗಳಾಗಿ ನೊ ನೋಡುತ್ತೇವೆ: ವ್ಯಕ್ತಿಯೊಬ್ಬನ ಕೈ ಚಲಿಸುತ್ತದೆ, ಗಾಳಿಯುಲ್ಲಿ ಚೆಂಡೊಂದು ಹಾರುತ್ತಿದೆ, ಇನ್ನೋಬ್ಬರು ಈ ಅಗಲಿಸಿರುವುದು ಇತ್ಯಾದಿ ಪರಿಕಲ್ಪನೆಗೆ ಹೊರಡಿಸಿಕೊಂಡಂತೆ ಚೆಂಡನ್ನು ಹಿಂದಕ್ಕೆ ಮುಂದಕ್ಕೆ ಮಾಡುವುದು, ಆದರೆ ಈ ಕಾಣದ ವರ್ತನೆಯನ್ನು ಗ್ರಹಿಸುವುದು ವಾಲಿಬಾಲ್ ಆಟ. ಈ ಆಟಕ ನಿಯಮ ಮತ್ತು ಸ್ವಗ್ರಹಿಕಾ ಸಾಮರ್ಥ್ಯಕ್ಕನುಗುಣವಾಗಿ ನಾವು ವರ್ತಿಸುತ್ತಿವಿ.

ಸಾಮಜಿಕ ಅಂತರಕ್ರಿಯೆಗಳು ಹಲವಾರು ರೀತಿಯ ಉದ್ದೇಶಿತ ಮತ್ತು ಉದ್ದೇಶಿತವಲ್ಲದನ್ನು ನಮಗೆ ತಿಳಿಸುತ್ತವೆ. ಇವುಗಳನ್ನು ನಾವು ಸಹಾಯ, ಭರವಸೆ ಮತ್ತು ಹೊಂದಿಸಿಕೊಳ್ಳುವುದು; ವ್ಯವಹರಿಸುವುದು, ಒಪ್ಪಂದ ಮತ್ತು ಬಹುಮಾನ, ಚೌಕಾಸಿ ಮಾಡುವುದು, ಇತ್ಯರ್ಥಪಡಿಸುವಿಕೆ ಮತ್ತು ಸ್ಪರ್ಧೆ, ಅಸಮ್ಮತಿ, ಹೋರಾಟ, ಹೊಡೆದಾಟ, ಜಾರಿಗೊಳಿಸುವಿಕೆ, ರಂಪ, ಸಂಘರ್ಷ, ಪ್ರತಿ ರೋಧ, ಯುದ್ಧ, ಹೆದರಿಸುವುದು, ಒತ್ತಾಯಸುವುದು, ಹಿಂದಕ್ಕೆ ಸರಿಯುವುದು, ಸಮರ್ಥಿಸುವುದು, ವಿವಾದ ಮತ್ತು ಪ್ರತಿಭಟನೆ; ವಿನಿಮಯ, ಸಂವಹನ, ಪ್ರತಿಭಟನೆ, ಪರೀಕ್ಷೆ ಮತ್ತು ಪ್ರತಿಸ್ಪಂದಿಸುವುದು ಇತ್ಯಾದಿಗಳನ್ನು ಭಾವಿಸುತ್ತೇವೆ. ನಾವು ಇದನ್ನು ನೇರವಾಗಿ ನಿರ್ಧಿಷ್ಟ ಹಾಗೂ ಸ್ವಪ್ನ ಕ್ರಮಗಳಲ್ಲಿ, ಉದಾಹರಣೆಗೆ ಕೊಲ್ಲು, ಸ್ಪರ್ಶಿಸು, ಮತ್ತು ಚುಂಬಿಸು ಅಥವಾ ಹೆಚ್ಚಿನ ಸಾಮಾನ್ಯ ಕ್ರಿಯಗಳಾದ ಸಂಘರ್ಷ, ಸಹಕಾರಗಳಲ್ಲಿ ವ್ಯಕ್ತಪಡಿಸುತ್ತೇವೆ. ಇದನ್ನು ನಾವು ಎಷ್ಟರಮಟ್ಟಿಗೆ ಮೊದಲು ವಿಸ್ತರಿಸುತ್ತೇವೆ ಎನ್ನುವುದಕ್ಕಿಂತ ಎಲ್ಲಾ ಸಾಮಾಜಿಕ ಸಂಬಂಧಗಳು ಅದರ ಅರ್ಥ, ಸಾರಥ್ಯ, ತೀವ್ರತೆ, ವಿಸ್ತರಣೆ, ಅವಧಿ ಮತ್ತು ಸಂಘಟನೆಗಳಲ್ಲಿ ಅಡಗಿರುವುದನ್ನು ಮನಗಾಣುತ್ತೇವೆ.

## 4.9 ಸಾಮಾಜಿಕ ಸಂಬಂಧದ ಅಂಶಗಳು

ಸಾಮಾಜಿಕ ಸಂಬಂಧದ ಪರಿಮಿತಿಯು ಎಲ್ಲಾ ರೀತಿಯ ಲಕ್ಷಣಗಳು ಮತ್ತು ಪೂರಕ ಅಂಶಗಳಾದ ಕ್ರಿಯಗಳೂ ಕಾರ್ಯಗಳು, ಅನುಭವಗಳು, ತೀವ್ರತೆಗಳು, ವಿಸ್ತರಣೆಗಳು, ಅವಧಿ, ಸಂಘಟನೆ, ಸಹಬಾಳ್ವೆತ್ವ ಮತ್ತು ಶತ್ರುತ್ವಗಳನ್ನು ಒಳಗೊಂಡಿದೆ ಎಂದು ತಿಳಿಯಬೇಕು. ಈ ಎಲ್ಲಾ ಸಂಬಂಧಗಳನ್ನು ಒತ್ತಿ ಹೇಳುವ, ನಿರಂತರವಾಗಿ ಪುನರಾವರ್ತನವಾಗುವ ಗೋಚರವಾದ ಹಾಗೂ ಸುಪ್ತವಾದ ಭಾಗಗಳಾವುವು ಎಂಬ ಪ್ರಶ್ನೆಗಳು ಎದುರಾಗುತ್ತವೆ.

ಈ ರೀತಿಯ ಪ್ರಶ್ನೆಗಳನ್ನು ಸಮಾಶಾಸ್ತ್ರಜ್ಞರು ಕಾಲ್ಪನಿಕ ಚೌಕಟ್ಟಿನಲ್ಲಿ ತಂದು ಸಂಬಂಧಗಳನ್ನು ಹಲವು ಪ್ರಕಾರಗಳಾದ ಸಮುದಾಯ ಹಾಗೂ ಸಂಘ, ಸಹಕಾರ ಹಾಗೂ ಸಂಘರ್ಷ, ಸಹಯೋಗಿತ್ವ ಹಾಗೂ ಬೇರ್ಪಡಿಸುವಿಕೆ ಮತ್ತು ಸಾಮನ್ಯವಾದ ಹಾಗೂ ಕಡ್ಡಾಯವಾದ ವರ್ಗೀಕರಣ ಮಾಡಿ ಉತ್ತರಿಸಿದ್ದಾರೆ.

ಸಾಮಾನ್ಯವಾದ ಅಂಶಗಳಾದ ಪರಸ್ಪರ ಕ್ರಿಯಗಳು, ಕಾರ್ಯಗಳು ಮತ್ತು ಅಭ್ಯಾಸಗಳು ನಿರಂತರವಾಗಿ ಮತ್ತು ಸ್ಥಿರ ದಿಕ್ಕಿನತ್ತ, ಪೂರಕವಾಗಿರುತ್ತದೆ. ಮೇಲಾಗಿ, ಕೌಟುಂಬಿಕ ಸಂಬಂಧಗಳು ಬಾಹ್ಯ ಮತ್ತು ಆಂತರಿಕವಾಗಿಯೂ, ವಿಶಾಲವಾದ ಕಾಲಾವಧಿಯೊಂದಿಗೆ ಸಂಘಟಿತವಾಗಬೇಕಾದರೆ ಮುಕ್ತ, ಜನತಾಂತ್ರಿಕ ಮತ್ತು ಯಜಮಾನ (ತಂದೆ)ರ ನಾಯಕತ್ವದಲ್ಲಿರುತ್ತದೆ. ವಿಶ್ವಾಸಪೂರ್ಣ, ಕೌಟುಂಬಿಕ ವಾತಾವರಣವು ಇದಕ್ಕೆ ಉದಾಹರಣೆಯಾಗಿದ್ದು. ಅಲ್ಲಿ ಎಲ್ಲಾ ಸದಸ್ಯರು ಸಹಯೋಗ

ಮನೋಭಾವದಿಂದ ಪರಸ್ಪರ ಕೊಡುವ ಮತ್ತು ತೆಗೆದುಕೊಳ್ಳುವ ವಾತಾವರಣ ಸೃಷ್ಟಿಸುತ್ತದೆ. ಪರಸ್ಪರ ಪ್ರೀತಿ, ಯೋಚನಾಮುಕ್ತತೆ ಮತ್ತು ಸಂಬಂಧಗಳು ಹತ್ತಿರದ ಸ್ನೇಹಿತರಲ್ಲೂ ಸಹ ಆಂತರಿಕ ಮತ್ತು ಬಾಹ್ಯವಾಗಿದ್ದು, ಧೀರ್ಘಾವಧಿ, ಒಗ್ಗೂಡುವಿಕೆ ಹಾಗೂ ಕೌಟುಂಬಿಕ ಅಂಶಗಳನ್ನು ಒಳಗೊಂಡಿದೆ.

ತಮ್ಮನ್ನು ತೊಡಗಿಸಿಕೊಂಡ ಜನರಲ್ಲಿ ಪರಸ್ಪರ ಐಕ್ಯತೆ ಕಂಡುಬರುತ್ತದೆ. ಒಬ್ಬರಿಗೆ ಏನು ಮುಖ್ಯವೊ ಅದು ಎಲ್ಲರಿಗೂ ಅಷ್ಟೆ ಮುಖ್ಯ; ಪ್ರತಿಯೊಬ್ಬರೂ ವೈಯಕ್ತಿಕವಾಗಿ ಸಂಬಂಧಗಳಿಂದ ಏನನ್ನು ಸಾಧಿಸುತ್ತಾರೆಂಬುದು ಪ್ರಶ್ನೆಯಲ್ಲ, ಆದರೂ ಎಲ್ಲರೂ ಸೇರಿ ಒಟ್ಟಿಗೆ ಏನನ್ನು ಮಾಡಬೇಕನ್ನುವುದು ಮುಖ್ಯವಾಗುತ್ತದೆ. ತಂದೆ ಮತ್ತು ಮಗ, ಗುರು ಮತ್ತು ನಂಬಿಕಸ್ತ ಶಿಷ್ಯ ಅಥವಾ ವಿವಿಧ ಧರ್ಮಕ್ಕೆ ಸೇರಿದ ಸದಸ್ಯರುಗಳಾ, ಒಳ ಪಂಗಡ, ಕ್ರೀಡಾ ತಂಡಗಳು ಮತ್ತು ಮಿಲಿಟರಿ ಘಟಕಗಳೂ ಈ ಸಾಲನ್ನು ಸೇರಿವೆ.

ಎರಡನೆಯ ಭಾಗವಾದ ಒಡಂಬಡಿಕಾ ಅಂಶ. ಇದು ಭಾಗಶಃ ಸಹಯೋಗಿತ್ವ ಮತ್ತು ಶತ್ರುತ್ವದಿಂದ ಕೂಡಿದೆ. ಇದು ಸಾಮಾನ್ಯವಾಗಿ ಸಂಕೀರ್ಣ ಪರಿಮಿತಿಯ ಸಂಬಂಧಗಳಿಗೆ ಸೀಮಿತವಾಗಿದ್ದು ಕಾಲದ ಇತಿಮಿತಿಯ ಕಾರ್ಯಗಳಿಂದ ಕೂಡಿದ್ದು ಹಾಗೂ ಕಾನೂನಿಗೆ ಸಂಬಂಧಿಸಿದಾಗಿದೆ. ಹೀಗೆ, ಕರಾರುವತ್ತಾದ ಸಂಬಂಧಗಳು. ಬಹುಮುಖ ಉಪಯೋಗಗಳನ್ನು ಹೊಂದಿದ್ದು ಜನರ ಸ್ವತಂತ್ರ್ಯ ಉದ್ದೇಶಗಳಿಗಾಗಿ ಹೊಂದಿಕೊಂಡಿದೆ. ಒಪ್ಪಂದಗಳು, ಕರಾರುಗಳು, ಮಾತು ಕತೆಗಳು ಹಾಗೂ ಇವೆಲ್ಲಾ ಸಂಬಂಧಗಳು ಮುಖ್ಯವಾಗಿ ಪರಸ್ಪರ ಅರ್ಥ ಮಾಡಿಕೊಳ್ಳುವುದೇ ಅಗಿದೆ. ಇವೆಲ್ಲವೂ ಉಪಹಾರ ಬುದ್ಧಿಯ ತಟಸ್ಥತೆ, ನಿಷ್ಕ್ರಿಯ ಪ್ರತಿಭಟನೆ, ಆಸಕ್ತಿಯಿಲ್ಲದ ಸಹಕಾರ, ಸ್ಪರ್ಧಾತ್ಮಕ ಸಹಕಾರ, ಏಕ ಕಾಲದಲ್ಲಿ ಪ್ರೀತಿ ಮತ್ತು ದ್ವೇಷವನ್ನು ಸೂಚಿಸುತ್ತದೆ ಮತ್ತು ಇದು ಪ್ರಥಮಿಕವಾಗಿ ಮಾರಾಟಗಾರ ಮತ್ತು ಗ್ರಾಹಕ, ಕೆಲಸ ನೀಡುವ ಮಾಲೀಕರು ಮತ್ತು ಉದ್ಯೋಗಿಗಳು ಮತ್ತು ನಾಗರೀಕರು ಮತ್ತು ಅಧಿಕಾರಿಗಳ ನಡುವೆ ಸಂಬಂಧ ಏರ್ಪಡಿಸುತ್ತದೆ.

ಮೂರನೆಯ ಭಾಗವೇ ಕಡ್ಡಾಯ ಅಂಶವಾಗಿದೆ. ಇದು ಮುಖ್ಯವಾಗಿ ನಿರಂತರವಾದ ಶತ್ರುತ್ವದ ಕ್ರಿಯೆಗಳೂ, ಕಾರ್ಯಗಳು ಮತ್ತು ಅಭ್ಯಾಸಗಳಿಂದ ಕೂಡಿದ್ದು ಜೀವನದುದ್ದಕ್ಕೂ ಶತೃಗಳ ನಡುವೆ, ಸ್ಪರ್ಧೆ ಎದುರಿಸುತ್ತಿರುವ ಧಾರ್ಮಿಕ ಗುಂಪುಗಳು, ಸಂಘರ್ಷದಲ್ಲಿರುವ ದೇಶಗಳು, ಮಿಲಿಟರಿ ಸರ್ವಾಧಿಕಾರಿ ಮತ್ತು ಅವರ ಪ್ರಚಾರಗಳೂ, ಗುಲಾಮ ಮತ್ತು ಮಾಲೀಕರ ನಡುವೆ ಕಂಡುಬರುತ್ತವೆ. ಅದು ಆಂತರಿಕ ಅಥವಾ ಬಾಹ್ಯವಾಗಿ, ದೀರ್ಘಾವಧಿಯಲ್ಲಿ ಸಂಘಟಿತವಾಗಿರುತ್ತದೆ. ಈ ಸಾಮಾಜಿಕ ಸಂಬಂಧಗಳ ಅಂಶಗಳಲ್ಲಿ ಒತ್ತಾಯಪೂರಕವಾಗಿ ಮನವೊಲಿಸುವುದು ಮಹತ್ತರ ಲಕ್ಷಣವಾಗಿದ್ದು, ಪ್ರೀತಿ, ಸಹಕಾರ, ಪರಸ್ಪರ ಗೌರವ ಮತ್ತು ತಾಳ್ಮೆಗಳು ಕೌಟುಂಬಿಕ ಅಂಶಗಳನ್ನು ಗುರುತಿಸುತ್ತವೆ.

## 4.10 ಸಾರಾಂಶ

ಪ್ರತಿಯಾಬ್ಬ ಮಾನವನು ಸಾಮಾಜ ಜೀವಿಯೆಂದು ಪರಿಗಣಿಸಲಾಗಿದೆ ಮತ್ತು ಸಾಮಾಜಿಕವಾಗಿ ಒಪ್ಪುವಂತಹ ಕೆಲವು ಬದ್ದತೆಗಳಿಗೆ ಅನುಗುಣವಾಗಿ ವರ್ತಿಸಬೇಕಾಗುತ್ತದೆ. ಸಂಬಂಧಗಳನ್ನು ಮಧುರವಾಗಿ ಮುಂದುವರಿಸುವಲ್ಲಿ ವ್ಯಕ್ತಿಗತವಾಗಿ ಮತ್ತು ಪರಸ್ಪರ ಉತ್ತಮ ಸಾಮಾಜಿಕ ನಡವಳಿಕೆ ಪ್ರಮುಖಪಾತ್ರ ವಹಿಸುತ್ತದೆ.